4. ಮಾನ್ಯ ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯದ ಮೇಲಿನ ಚರ್ಚೆ.

ಶ್ರೀ ಸಿ. ಭೈರೇಗೌಡ (ವೇಮಗಲ್):-ಮಾನ್ಯ ಅಧ್ಯಕ್ಷರೇ, ಈ ಗೌರವಾನ್ವಿತ ಸಭೆಯಲ್ಲಿ ಈ ಹಿಂದೆ ಅನೇಕ ಮಾನ್ಯ ಸದಸ್ಯರುಗಳು, ಬಹಳ ಅನುಭವವನ್ನು ಪಡೆದಿರತಕ್ಕಂಥವರು, ರಾಜ್ಯದ ಬಗ್ಗೆ, ದೇಶದ ಬಗ್ಗೆ ಬಹಳ ಕಳಕಳಿಯನ್ನು ಇಟ್ಟುಕೊಂಡಿರತಕ್ಕಂಥವರು ಈ ಸಭೆಯ ಸದಸ್ಯರಾಗಿ ರಾಜ್ಯಕ್ಕೆ ತಮ್ಮದೇ ಆದಂಥ ರೀತಿನೀತಿಗಳ ಮೂಲಕ ಸೇವೆಗಳನ್ನು ಮಾಡಿರತಕ್ಕಂಥವರು ಇದ್ದಾರೆ. ಈ ಸಭೆಯಲ್ಲಿ ಹಿಂದೆ ಶಾಂತವೇರಿ ಗೋಪಾಲಗೌಡರು, ಸಭಾಧ್ಯಕ್ಷರಾಗಿ ಶ್ರೀ ವೈಕುಂಠ ಬಾಳಿಗಾರವರು, ಶ್ರೀಮತಿ ನಾಗರತ್ನಮ್ಮನವರು, ಸೇವೆ ಸಲ್ಲಿಸಿದ್ದಾರೆ. ಹೀಗೆ ಅನೇಕ ಪ್ರತಿಭಾವಂತರು ತಮ್ಮ ಸೇವೆಯ ಮೂಲಕ ರಾಜ್ಯಕ್ಕೆ ತಮ್ಮದೇ ಆದಂಥ ಕೊಡುಗೆಯನ್ನು ನೀಡಿದ್ದಾರೆ. ರಾಜ್ಯದಲ್ಲಿ ಮುಖ್ಯಮಂತ್ರಿಗಳಾಗಿ, ಮಂತ್ರಿಗಳಾಗಿ ಕೆಲಸ ಮಾಡಿರತಕ್ಕಂಥವರು ತಮ್ಮ ಸೇವೆಯ ಮೂಲಕ ರಾಜ್ಯದ ಅಭಿವೃದ್ಧಿಯನ್ನು ಮಾಡಿದ್ದಾರೆ. ಪ್ರಜಾಪ್ರಭುತ್ವದಲ್ಲಿ ಚುನಾವಣೆಗಳು ಮೂಲ. ಈ ಸಭೆಗೆ ಅಥವಾ ಲೋಕಸಭೆಗೆ ಚುನಾವಣೆಯೇ ಮೂಲ. ಹೀಗೆ ಮೂಲಾಧಾರವಾಗಿರತಕ್ಕಂಥ ಜನತೆಯ ಅಭಿಪ್ರಾಯದ ಪ್ರಕಾರವೇ ಸಭೆಗಳು ಅಸ್ತಿತ್ವಕ್ಕೆ ಬರುತ್ತವೆ. ರಾಜ್ಯಾಂಗದಲ್ಲಿ ಜನರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ಐದುವರ್ಷಗಳಿಗೊಮ್ಮೆ ಅವಕಾಶವನ್ನು ಕಲ್ಪಿಸಲಾಗಿದೆ. ಆ ಒಂದು ಅವಕಾಶವನ್ನು ಉಪಯೋಗಿಸಿಕೊಂಡು ರಾಜ್ಯದಲ್ಲಿ ಹೊಸ ಸರಕಾರವು ಅಸ್ತಿತ್ವಕ್ಕೆ ಬಂದಿದೆ. ಮಾನ್ಯ ಎಸ್.ಎಂ. ಕೃಷ್ಣರವರ ಮುಖ್ಯಮಂತ್ರಿತ್ವದಲ್ಲಿ ಸರಕಾರವು ಕಾರ್ಯಾರಂಭ ಮಾಡಿದೆ. ಈ ಹಿಂದೆ ನಾವು ಐದು ವರ್ಷಗಳ ಕಾಲ ರಾಜ್ಯಾಡಳಿತವನ್ನು ನಡೆಸಿದ್ದೇವೆ. ಚುನಾವಣೆಗಳು ಮತ್ತು ಅದರ ಮೂಲಕ ಬದಲಾವಣೆಗಳು ಕೂಡ ಅನಿವಾರ್ಯವಾಗಿದೆ. ಅದರಂತೆ ರಾಜ್ಯದ ಜನರು ಬದಲಾವಣೆಯನ್ನು ಬಯಸಿದ್ದರು, ಅವರ ಇಚ್ಛೆಯಂತೆ ಬದಲಾವಣೆ ಆಗಿದೆ. ಈ ಬದಲಾವಣೆಯಲ್ಲಿ ನಾವು ಸಹ ಪಾಲುದಾರರಾಗಿದ್ದೇವೆ. ಕಾಲಚಕ್ರದ ಗತಿಯಲ್ಲಿ ಏನೇನು ನಡೆಯುತ್ತದೆ ಎಂದು ಯಾರಿಗೂ ಕೂಡ ಹೇಳುವುದಕ್ಕೆ ಸಾಧ್ಯವಿಲ್ಲ. ಕಳೆದ ಚುನಾವಣೆ ನಡೆದಂಥ ಸಂದರ್ಭದಲ್ಲಿ ಪತ್ರಿಕೆಗಳಲ್ಲಿ ಚುನಾವಣೆ ಬಗ್ಗೆ ವಿಶ್ಲೇಷಣೆಗಳನ್ನು ನಾವು ನೋಡಿದ್ದೇವೆ. ಅನೇಕ ಮಾಧ್ಯಮಗಳಲ್ಲಿ ತಮ್ಮದೇ ಆದಂಥ ಚುನಾವಣಾ ವಿಶ್ಲೇಷಣೆಗಳನ್ನು ಮಾಡಿರುವುದನ್ನು ದೇಶದ ಮತ್ತು ರಾಜ್ಯದ ಜನರು ಗಮನಿಸಿದ್ದಾರೆ. ಆ ವಿಶ್ಲೇಷಣೆ ತರಹವೇ ಲೋಕಸಭೆಗೆ ಹೆಚ್ಚೂಕಮ್ಮಿ ಫಲಿತಾಂಶ ಬಂತು, ವಿಧಾನಸಭೆಗೆ ಇಂತಹ ಫಲಿತಾಂಶ ಬರುತ್ತದೆಯೆಂದು ಯಾವ ವಿಶ್ಲೇಷಣೆಯಲ್ಲೂ ಇರಲಿಲ್ಲ. ಹೀಗಾಗುತ್ತದೆ ಅಂತ ನಮಗಂತೂ ನಂಬಿಕೆ ಇರಲಿಲ್ಲ. ಆದರೂ ತೀರ್ಪು ಬಂತು, ಸ್ಥಾನ ಅದುಲು ಬದಲಾಗಿ ಅಲ್ಲಿದ್ದ ನಾವು ಇಲ್ಲಿ ಕೂತಿದ್ದೇವೆ ಇಲ್ಲಿದ್ದ ಮಾನ್ಯ ಖರ್ಗೆ ಮತ್ತಿತರ ಸ್ನೇಹಿತರು ಆ ಕಡೆ ಕೂತಿದ್ದಾರೆ. ಅವರಿಗೆ ನಾನು ಒಳ್ಳೆಯದನ್ನು ಬಯಸುತ್ತೇನೆ; ಯಾರೇ ಸರ್ಕಾರ ನಡೆಸಿದರೂ

ಒಳ್ಳೆಯ ಕೆಲಸ ಮಾಡಬೇಕಾಗುತ್ತದೆ. ಶಾಸಕರಾಗಲಿ, ಸಚಿವರಾಗಲಿ ಹಾಗೆಂದು ಪ್ರಮಾಣವಚನ ಸ್ವೀಕರಿಸಿ ನಾವು ರಾಜ್ಯಾಂಗವನ್ನು ಎತ್ತಿ ಹಿಡಿಯುತ್ತೇವೆ, ಜನತೆ ಹಿತ ಕಾಪಾಡುತ್ತೇವೆಂದು ಇಲ್ಲಿ ಕೂತುಕೊಳ್ಳುವೆ. ನೀವು ಒಳ್ಳೆ ರೀತಿ ರಾಜ್ಯದ ಕೆಲಸ ಮಾಡಬೇಕೆಂಬುದು ನನ್ನ ಆಸೆ. ಆ ರೀತಿ ಕೆಲಸ ಮಾಡುತ್ತೇವೆಂಬ ಭರವಸೆ ನನಗಿದೆ.

ರಾಜ್ಯಪಾಲರ ಭಾಷಣ:- ಪ್ರತಿ ವರ್ಷ ರಾಜ್ಯಾಂಗದತ್ತವಾಗಿ ನಡೆಯಬೇಕಾದ ಕ್ರಿಯೆ, ಅದರಂತೆ ರಾಜ್ಯಪಾಲರ ಭಾಷಣ ಇಲ್ಲಿ ನಡೆದಿದೆ. ಅಧ್ಯಕ್ಷರೇ ಆ ಭಾಷಣವನ್ನು ಒಂದು ಕಡೆಯಿಂದ ನೋಡಿದಾಗ ಮತ್ತೆ ಇವರ ಚುನಾವಣಾ ಪ್ರಣಾಳಿಕೆಯನ್ನೂ ನೋಡಿದಾಗ ಚುನಾವಣೆ ಗೆದ್ದ ಕೆಲವೇ ದಿನಗಳಲ್ಲಿ ಈ ಸರ್ಕಾರ ಪ್ರಣಾಳಿಕೆಯನ್ನು ಮರೆಯುತ್ತದೆ ಅಂತ ನಾನಂತೂ ಭಾವಿಸಿರಲಿಲ್ಲ. ಪ್ರಣಾಳಿಕೆ ಮೂಲಕ ಜನರ ಮುಂದೆ ಹೋಗಿದ್ದೀರಿ, ಪ್ರಣಾಳಿಕೆಯಲ್ಲಿರುವುದನ್ನು ನಾವು ಅಧಿಕಾರಕ್ಕೆ ಬಂದರೆ ಕಾರ್ಯಗತಮಾಡುತ್ತೇವೆ ಎಂದು ಜನತೆಗೆ ಆಶ್ವಾಸನೆ ಕೊಟ್ಟು ಬಂದಿದ್ದೀರಿ ರಾಜ್ಯಪಾಲರ ಭಾಷಣಕ್ಕೂ ಪ್ರಣಾಳಿಕೆಗೂ ಒಂದಕ್ಕೊಂದಕ್ಕೆ ಹೋಲಿಕೆ ಇಲ್ಲ ಇದು ಬಹಳ ದುರಾದೃಷ್ಟವೆಂದು ನಾನಂತೂ ಈ ಸಂದರ್ಭದಲ್ಲಿ ಹೇಳಲೇಬೇಕಾಗಿದೆ. ಇವತ್ತು ಮೊದಲನೇ ಸಾಲಿನಲ್ಲಿ ಅನುಭವಿಗಳೂ, ಆರೇಳು ಸಾರಿ ಗೆದ್ದು ಇಲ್ಲಿ ಮಂತ್ರಿಗಳಾಗಿರುವ ಹಿರಿಯರು ಇದ್ದಾರೆ. ಅದ್ಯಾಕೋ ನನಗಂತೂ ಗೊತ್ತಿಲ್ಲ. ಅವರ ಪಕ್ಷಕ್ಕೆ ಬಹುಮತ ಸಿಕ್ಕಿದ ಮೇಲೆ, ಚುನಾವಣೆಗೆ ಮುಂಚೆ ಮಾನ್ಯ ಎಸ್.ಎಂ. ಕೃಷ್ಣರವರೇ ಮುಖ್ಯಮಂತ್ರಿಗಳು ಎಂದು ಅವರ ಪಕ್ಷದವರೆಲ್ಲ ಹೇಳಿದರೂ ಆದರೆ ಅವರು ಮಾತ್ರ ಹೀಗೆಲ್ಲ ಹೇಳಿದರೆ ನನಗೆ ಅಪಚಾರ ಮಾಡಿದಂತೆ ಒಂದೆರಡು ಕಡೆ ಹೇಳಿದರು. ಆದರೆ ಮಾನ್ಯ ಕೃಷ್ಣರೇ ಮುಖ್ಯಮಂತ್ರಿಯಾಗುವರೆಂದು ನನಗೆ ನಿರೀಕ್ಷೆ ಇತ್ತು, ಅವರು ಮುಖ್ಯಮಂತ್ರಿಯೂ ಆದರು. ಮುಖ್ಯಮಂತ್ರಿಯಾದ ತಕ್ಷಣ ಮಾನ್ಯ ಕೃಷ್ಣರವರು ಕೆಲವು ಹೆಸರುಗಳನ್ನು ಪ್ರಸ್ತಾಪಿಸಿದರು; ರಾಜ್ಯದಲ್ಲಿ ನಾನು ಹನುಮಂತಯ್ಯನವರ ಶಿಸ್ತನ್ನು ರೂಢಿಸಲು ಪ್ರಯತ್ನಿಸುತ್ತೇನೆ. ಮತ್ತು ನಿಜಲಿಂಗಪ್ಪನವರ ದೂರದೃಷ್ಟಿಯಂತೆ ಕೆಲಸ ಮಾಡಲು ಪ್ರಯತ್ನಿಸುತ್ತೇನೆ ಎಂದು ಹೀಗೆಲ್ಲ ದೊಡ್ಡ ಹೆಸರುಗಳನ್ನು ಮಾನ್ಯ ಕೃಷ್ಣರವರು ಹೇಳಿದರು. ಆದರೆ ಮಾನ್ಯ ರಾಜ್ಯಪಾಲರ ಭಾಷಣ ಓದಿದಾಗ ಯಾವ ರೀತಿ ಪ್ರಣಾಳಿಕೆಗೂ ಭಾಷಣಕ್ಕೂ ಸಂಬಂಧವಿಲ್ಲವೋ ಅದೇ ರೀತಿ ಅವರು ಹೇಳಿದ ಹೆಸರುಗಳಿಗೂ ಭಾಷಣಕ್ಕೂ ಸಂಬಂಧವಿಲ್ಲವೆಂದು ಬಹಳ ವ್ಯಥೆಯಿಂದ ನಾನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಇವರಿಗೆ ಮ್ಯಾಸಿವ್ ಮಾಂಡೇಟ್ ಸಿಕ್ಕಿದ್ದರಿಂದ ಜಗ್ಗಾಟ ಯಾವುದೂ ಇರುವುದಿಲ್ಲವೆಂಬ ಭಾವನೆ ನಮಗಿತ್ತು. ಆದರೆ ಮುಖ್ಯಮಂತ್ರಿಗಳ ಪ್ರಮಾಣವಚನ ಸ್ವೀಕಾರ ಆದ ಮೇಲೆ ಪರಮಾವಧಿ ಜಗ್ಗಾಟ ನಡೆದು ಐದಾರು ದಿವಸಗಳ ಕಾಲ ಹೆಸರಿಗಾದರೂ ಒಂದು ಸರ್ಕಾರ ಇದೆ ಎಂಬ ಭಾವನೆಯನ್ನು ಜನರಲ್ಲಿ ಮೂಡಿಸುವ ಕೆಲಸ ವಾಗಲಿ ಅಥವಾ ಕೆಲಸ ಮಾಡಿದದ್ದು ಕೂಡ ಇಲ್ಲ ಒಂದು ವಾರ ಕಾಲ ಎಲ್ಲ ಸ್ತಬ್ಧ. ಕೊನೆಗೆ ಚಿಕ್ಕ ಚೊಕ್ಕ ಅಂತೇನೂ

ನಾನು ಹೇಳಿಲ್ಲ ಆಡಳಿತ ಸುಧಾರಣಾ ಸಮಿತಿ ಶಿಫಾರಸ್ಸಿನಂತೆ ಮಂತ್ರಿಮಂಡಲ ರಚಿಸುತ್ತೇನೆಂದು ಹೇಳಿರಲಿಲ್ಲವೆಂದು ಮುಖ್ಯಮಂತ್ರಿಗಳು ಕೆಲವು ಕಡೆ ಹೇಳಿದ್ದಾರೆ. ಇವರೇ ಹೇಳಿದ್ದ ಚಿಕ್ಕ ಚೊಕ್ಕ ಸಂಪುಟ ರಚನೆ ಮಾತನ್ನು ಅದನ್ನು ಗಾಳಿಗೆ ತೂರಿದರು. ತಕ್ಷಣ ನೀವು ಹೇಳಬಹುದು, ನಿಮ್ಮದ್ದೆಷ್ಟು ಇತ್ತು ಮಂತ್ರಿಮಂಡಲ, ಅಂತ. ನಿಜ, ನಿಮಗಿಂತ ಭಾರಿ ಮಂತ್ರಿಮಂಡಲ ನಮ್ಮದಿತ್ತು, ಇಲ್ಲ ಅಂತ ನಾವು ಹೇಳುವುದಿಲ್ಲ ಅದರಿಂದಾನೇ ನಾವಿಲ್ಲಿ ಕೂರಬೇಕಾದ ಪರಿಸ್ಥಿತಿ ಒದಗಿದೆ. ಆದರೆ ಚುನಾವಣೆ ಆದ ತಕ್ಷಣ ನೀವೇ ಹೇಳಿದ್ದ ಮಾತಿನಂತೆ ಮಂತ್ರಿಮಂಡಲ ರಚಿಸುವುದರಲ್ಲಿ ನಡೆದುಕೊಳ್ಳಲಿಲ್ಲ ಅನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛಿಪಡುತ್ತೇನೆ. ಇವತ್ತು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪದ ಪ್ರಕಾರ ಈ ದೇಶದಲ್ಲಿ ಮತ್ತು ರಾಜ್ಯದಲ್ಲಿ ತುಂಬಿತುಳುಕಾಡುತ್ತಿರುವ ಸಮಸ್ಯೆಗಳಿವೆ. ಇವರ ಪ್ರಣಾಳಿಕೆಯಿಂದ ಹೇಳುವುದಾದರೆ ಜನತಾದಳ ಸರ್ಕಾರ ಎಲ್ಲ ರಂಗಗಳಲ್ಲಿ ಹೀನಾಯವಾಗಿ ವಿಫಲಗೊಂಡಿರುವುದ- ರಿಂದ ರಾಜ್ಯದಲ್ಲಿ ಮುಂಬರುವ ಕಾಂಗ್ರೆಸ್ ಸರ್ಕಾರಕ್ಕೆ ಅನೇಕ ಸವಾಲುಗಳು ಎದುರಾಗುವುದಂತೂ ನಿಜ. ಅಂತ ತಮ್ಮ ಪ್ರಣಾಳಿಕೆಯಲ್ಲಿ ಜನತೆಗೆ ತಾವು ಹೇಳಿಕೊಂಡದ್ದಿರಿ. ಯಾವ ಸವಾಲನ್ನು ನೀವು ಗುರ್ತಿಸಿದ್ದೀರಿ? ಯಾವುದಾದರೂ ಸವಾಲನ್ನು ಸ್ವೀಕರಿಸಿ ಅದನ್ನು ಬಗೆಹರಿಸುವುದಕ್ಕೆ ಯಾವ ಕ್ರಮ ತೆಗೆದುಕೊಂಡಿದ್ದೀರಿ? ಮುಂದುಗಡೆ ಕುಳಿತಿರುವವರು ಬಹಳ ಅನುಭವಶಾಲಿಗಳು ಎಂದು ನಾನು ಅಂದುಕೊಂಡಿದ್ದೆ, ಇಂಥವರೆಲ್ಲ ಇರುವ ಸಚಿವಸಂಪುಟದಲ್ಲಿ ನಿಮ್ಮೆಲ್ಲರ ಆಲೋಚನೆ ಈ ಭಾಷಣದಲ್ಲಿ ಕ್ರೋಢೀಕರಣವಾಗುತ್ತದೆ. ಈ ರಾಜ್ಯವನ್ನು ಅಭಿವೃದ್ಧಿಯ ಪಥದಲ್ಲಿ ತೆಗೆದುಕೊಂಡು ಹೋಗುವುದಕ್ಕೆ, ನಿಮಗೆ ಅನುಭವದ ಕೊರತೆ ಇಲ್ಲ, ಆಡಳಿತದಲ್ಲೂ ಅನುಭವಶಾಲಿಗಳಾಗಿದ್ದೀರಿ ಕಳೆದ 40 ವರ್ಷಗಳವರೆಗೆ ರಾಜಕೀಯ ಅನುಭವ ಪಡೆದವರೂ ಇದ್ದೀರಿ. ಏನಾಯಿತು ನಿಮ್ಮ ಅನುಭವವೆಲ್ಲ? ಎಲ್ಲಿದೆ?

ಶ್ರೀ ಕೆ.ಎಚ್. ರಂಗನಾಥ್:- ಸರ್ಕಾರ ರಚಿಸಿದ ಎಂಟು ದಿವಸದಲ್ಲೇ ಅನಿವಾರ್ಯವಾಗಿ ಸಭೆ ಕರೆಯಬೇಕಾದ ಪರಿಸ್ಥಿತಿ ಬಂದಾಗ ಬ್ರಾಡ್ ಇಂಡಿಕೇಶನ್ಸ್ ಇದೆ, ಇನ್ನೊಂದೆರಡು ತಿಂಗಳಿಗೆ ಬರುವಾಗ ಬಹಳಮಟ್ಟಿಗೆ ಎಲ್ಲಾನೂ ಬರಬಹುದು. ಚಿಂತನೆಯೆಲ್ಲ ಹೊರಬೀಳಬಹುದು ನೀವಿಷ್ಟು ಅವಸರಪಟ್ಟರೆ ಹೇಗೆ?

ಶ್ರೀ ಸಿ. ಭೈರೇಗೌಡ:- ಒಂದು ಗಾದೆ ಇದೆ, ಮೊದಲ ಇಂಪ್ರೆಸನ್ ಬೆಸ್ಟ್ ಇಂಪ್ರೆಷನ್ ಇಂತಹ ಅಪಾರವಾದ ಜನಾದೇಶ ಬಳಸಿಕೊಳ್ಳುವುದರಲ್ಲಿ ನೀವು ವಿಫಲರಾಗಿದ್ದೀರಿ. ಅದರ ಬಗ್ಗೆ ನೀಲಿನಕ್ಷೆ ನೀವು ಏನು ಮಾಡುತ್ತೀರಿ ಅಂತ.

ಶ್ರೀ ಕೆ.ಎಚ್. ರಂಗನಾಥ್:-ತಾವು ತಮ್ಮ ಅಂತರಂಗದಿಂದ ಮಾತನಾಡುತ್ತಿದ್ದೀರೋ, ಸುಮ್ಮನೆ ಮಾತಾಡುತ್ತಿದ್ದೀರೋ?

ಶ್ರೀ ಸಿ. ಭೈರೇಗೌಡ:-ನಾನು ಯಾವತ್ತು ಕೂಡ ಆ ಕಡೆ ಕುಳಿತಿರಲಿ ಅಥವಾ ಈ ಕಡೆ ಕುಳಿತಿರಲಿ, ನಾವು ಈ ಸಭೆಯಲ್ಲಿ ಯಾವ ರೀತಿ ನಡೆದು ಕೊಳ್ಳುತ್ತಿದ್ದೇವೆ ಎನ್ನುವುದು ತಮಗೆ ಗೊತ್ತಿದೆ. ವಾಕ್‌ಔಟ್ ಮಾಡುವುದಾಗಲೀ, ಅಥವಾ ಧರಣಿ ಮಾಡುವುದಾಗಲೀ ಮಾಡಕೂಡದು ಎನ್ನತಕ್ಕಂಥ ತೀರ್ಮಾನವನ್ನು ನಾವು ಮಾಡಿದ್ದೇವೆ. ಆದ್ದರಿಂದ ಕಾಟಾಚಾರಕ್ಕೆ ನಾನು ಬಂದು ಮಾತನಾಡುತ್ತಿದ್ದೇನೆ ಎಂದು ತಾವು ದಯವಿಟ್ಟು ಭಾವಿಸಬಾರದು. ಈ ನಿಮ್ಮ ಮಂತ್ರಿಮಂಡಲದಲ್ಲಿ ಮುಖ್ಯಮಂತ್ರಿಗಳಿಗೂ ಮತ್ತು ಇತರ ಮಂತ್ರಿಗಳ ಮಧ್ಯೆ ಅಸಹಕಾರ ಎನ್ನುವಂಥದ್ದು ತುಂಬಿ ತುಳುಕಾಡುತ್ತಿದೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದರೆ ಬಹಳಷ್ಟು ಸವಾಲುಗಳು ಎದುರಾಗುತ್ತವೆ ಎನ್ನತಕ್ಕಂಥ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ತಮ್ಮ ಪ್ರಣಾಳಿಕೆಯಲ್ಲಿ ಏನು ಹೇಳಿದ್ದರೋ ಆ ಸವಾಲುಗಳನ್ನು ಗುರುತಿಸುವುದರಲ್ಲಿ, ಆ ಸವಾಲುಗಳಿಗೆ ಒಂದು ಪರಿಹಾರವನ್ನು ಕೊಡುವುದಕ್ಕೆ ಇವರುಗಳ ಮಧ್ಯೆ ಇರುವ ಅಸಹಕಾರದ ಕಾರಣದಿಂದ ಈ ಸಮಸ್ಯೆಗಳಿಗೆ ಪರಿಹಾರ ಇಲ್ಲ ಎನ್ನತಕ್ಕಂಥದ್ದನ್ನು ನಾನು ಬಹಳ ವ್ಯಥೆಯಿಂದ ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಇದರ ಜೊತೆಗೆ ಆಡಳಿತ ಯಂತ್ರಕ್ಕೆ ತುಕ್ಕು ಹಿಡಿದಿದೆ ಎನ್ನುವ ಮಾತನ್ನು ಕೂಡ ಪ್ರಣಾಳಿಕೆಯಲ್ಲಿ ಹೇಳಿದ್ದಾರೆ. ಈ ಆಡಳಿತ ಯಂತ್ರವನ್ನು ಮರುಕುಗೊಳಿಸುವುದಕ್ಕೆ ತಮ್ಮ ಸರ್ಕಾರದ ಕಡೆಯಿಂದ ಏನು ಮಾಡಿದ್ದೀರಿ ಸ್ವಾಮಿ? 'ನಾವು ಗಣಕೀರಣ ಮಾಡುತ್ತೇವೆ, ಇಂಟರ್‌ನೆಟ್ ಜಾಲ, ಇವೆಲ್ಲವನ್ನು ಮಾಡುತ್ತೇವೆ' ಎಂದು ಹೇಳಿದ್ದೀರಿ. ಆದರೆ ಕಂಪ್ಯೂಟರೀಕರಣ ಅದು ಒಂದು ಯಂತ್ರ ಅಷ್ಟೆ. ಗಣಕೀಕರಣ ಮಾಡತಕ್ಕಂಥ ಅವಶ್ಯಕತೆ ಇದೆ. ನಾನು ಅದಕ್ಕೆ ವಿರೋಧ ಮಾಡುತ್ತಿಲ್ಲ. ಆಧುನಿಕವಾಗಿ ಮಾಡತಕ್ಕಂಥ ಸಲಕರಣೆಗಳನ್ನು ನಾವು ಬಳಸಿಕೊಳ್ಳುವುದರಲ್ಲಿ ಮುಂದಾಗಬೇಕು ಮತ್ತು ಅದು ಬಳಕೆಗೆ ಕೂಡ ಬರಬೇಕು, ಅದು ಆದ್ಯತೆ ಮೇರೆಗೆ ಆಗಬೇಕು ಎಂದು ಹೇಳುವುದಕ್ಕೆ ನಾನು ಕ್ರಮಬದ್ಧನಾಗಿದ್ದೇನೆ. ಈ ಗಣಕೀಕರಣದಿಂದ ಏನು ಉಪಯೋಗವೆಂದರೆ ಇಲ್ಲಿಂದ ಮಂಗಳೂರಿಗೆ ಏನಾದರೂ ಸುದ್ದಿ ಕಳುಹಿಸಬೇಕಾದರೆ ಅಥವಾ ಅಲ್ಲಿಂದ ಏನಾದರೂ ಇಲ್ಲಿಗೆ ಮಾಹಿತಿ ತರಿಸಬೇಕಾಗಿದ್ದರೆ, ಅಂಚೆಯ ಮೂಲಕ ತರಿಸುವ ಬದಲು, ಅಥವಾ ದೂರವಾಣಿ ಮಾಡಿತರಿಸುವ ಬದಲು, ವೇಗವಾಗಿ ಗಣಕೀಕರಣದಲ್ಲಿ ಮಾಹಿತಿ ಸಿಗುತ್ತದೆ ಮತ್ತು ಅದನ್ನು ಪ್ರಿಂಟ್‌ಔಟ್ ತೆಗೆದುಕೊಳ್ಳಬಹುದು. ಆದರೆ ಅದನ್ನು ಆಪರೇಟ್ ಮಾಡತಕ್ಕಂಥವರು ಅಧಿಕಾರಿಗಳು ಇರಬಹುದು ಅಥವಾ ಯಾರೇ ಇರಬಹುದು, ಅವರು ಯಾವ ರೀತಿ ಕೆಲಸ ಮಾಡುತ್ತಾರೆ ಎನ್ನುವುದು ಬಹಳ ಮುಖ್ಯ. ಆ ಕೆಲಸ ಯಾವ ರೀತಿ ನಡೆಯುತ್ತದೆ ಎನ್ನುವ ಅದರ ಕ್ವಾಲಿಟಿ ಬಹಳ ಮುಖ್ಯ ಅದನ್ನು ಇಂಪ್ರೂವ್ ಮಾಡತಕ್ಕಂಥದ್ದರ ಬಗ್ಗೆ ತಮ್ಮ ಪ್ರಣಾಳಿಕೆಯಲ್ಲಿ ಏನೂ ಇಲ್ಲ. ಇದರ ಬಗ್ಗೆ ಯಾವುದಾದರೂ ಸಲಹೆಗಳಾಗಲೀ, ಅಥವಾ ಆ ರೀತಿಯಾದಂಥ ಯೋಚನೆ ಮಾಡತಕ್ಕಂಥದ್ದಾಗಲೀ ಈ ರಾಜ್ಯಪಾಲರ ಭಾಷಣದಲ್ಲಿ ಇಲ್ಲ ಎಂದು ನಾನು

ಹೇಳಬಯಸುತ್ತೇನೆ. ಆಡಳಿತಾತ್ಮಕ ಸುಧಾರಣೆಗಳ ಬಗ್ಗೆ ತಮ್ಮ ಪ್ರಣಾಳಿಕೆಯಲ್ಲಿ ಏನು ಹೇಳಿದ್ದೀರೆಂದರೆ- ಬಹುತೇಕ ಜನಸಾಮಾನ್ಯರು ಸರ್ಕಾರದಿಂದ ಯಾವುದೇ ರೀತಿಯ ಸಹಾಯಧನವನ್ನು ನಿರೀಕ್ಷಿಸುವುದಿಲ್ಲ. ಈ ಮಾತು ಸತ್ಯ, ಇದನ್ನು ನಾನು ಒಪ್ಪುತ್ತೇನೆ. ಜನತೆಯ ಸಮಸ್ಯೆಗಳಿಗೆ ಸ್ಪಂಧಿಸತಕ್ಕಂಥ ಆಡಳಿತವನ್ನು ಮಾತ್ರ ಜನ ಅಪೇಕ್ಷಿಸುತ್ತಾರೆ. ಇದು ಕೂಡ ನಿಜ. ಇದು ವಾಸ್ತವಾಂಶ. ಕಳೆದ ಐದು ವರ್ಷಗಳಿಂದ ಜನ ಏನು ನಿರೀಕ್ಷೆ ಮಾಡುತ್ತಿದ್ದರೋ ಅದು ಸಿಕ್ಕಿಲ್ಲವೆಂದು ನೀವು ಹೇಳುತ್ತಿದ್ದೀರಿ. ಹಿಂದೆ ಇದ್ದಂಥ ಸರ್ಕಾರದವರಾದ ನಾವು ಇದನ್ನು ಕೊಟ್ಟಿಲ್ಲವೆಂದು ನಮ್ಮ ಮೇಲೆ ಆರೋಪ ಮಾಡುತ್ತಿದ್ದೀರಿ. ನೀವು ಇದನ್ನು ರಾಜಕೀಯ ಪಕ್ಷದವರಾಗಿ ರಾಜಕೀಯಕ್ಕೋಸ್ಕರ ಇದನ್ನು ಇಲ್ಲಿ ಬಳಸಿಕೊಂಡಿದ್ದೀರಿ. ಅದಕ್ಕೆ ನಾನು ಆಕ್ಷೇಪಣೆ ವ್ಯಕ್ತಪಡಿಸುವುದಿಲ್ಲ. ಆದರೆ ಇವತ್ತು ನಿಮಗೆ ಅಧಿಕಾರ ಬಂದಿದೆಯಲ್ಲವೇ? ಅಧಿಕಾರ ಬಂದಿರತಕ್ಕಂಥ ಇಂಥ ಸಂದರ್ಭದಲ್ಲಿ ನೀವೇ ಗುರುತಿಸಿರತಕ್ಕಂಥದ್ದಕ್ಕೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ನಿಮ್ಮ ಉತ್ತರ ಏನು ಇದೆ? ಕೇವಲ ಕಂಪ್ಯೂಟರೀಕರಣ ಎಂದು ಹೇಳಿರುವುದು ಇದು ಉತ್ತರ ಎಂದು ಭಾವಿಸಿದ್ದೀರಾ? ತಾವು ಕೇವಲ ಗಣಕೀರಣ ಮಾಡಿದರೆ ಇದಕ್ಕೆ ಉತ್ತರ ಸಿಗುವುದಿಲ್ಲ. ಆ ಗಣಕೀಕರಣ ಯಂತ್ರದ ಹಿಂದೆ ಕುಳಿತಿರತಕ್ಕಂಥ ವಿಧಾನಸೌಧದ ಅಧಿಕಾರಿಗಳು, ಕಾರ್ಯದರ್ಶಿಗಳು, ಮಂತ್ರಿಗಳಾಗಿರತಕ್ಕಂಥವರು, ಅವರ ಒಂದು ಗುಣಾತ್ಮಕವಾದ ಬದಲಾವಣೆಯನ್ನು ತರತಕ್ಕಂಥದ್ದು ಏನು ಇದೆ, ಆ ಗುಣಾತ್ಮಕವಾದಂಥ ಬದಲಾವಣೆಯನ್ನು ತರತಕ್ಕಂಥ ಮಾತನ್ನು, ಆ ಪದವನ್ನು ಬಳಸಿಕೊಳ್ಳುವುದಕ್ಕೆ ತಾವು ಮರೆತಿದ್ದೀರಿ ಎಂದು ನಾನು ಇಲ್ಲಿ ಹೇಳಲೇ ಬೇಕಾಗಿದೆ. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಕೆಲವು ಮುಖ್ಯವಾದ ಅಂಶಗಳನ್ನು ಹೇಳಿದ್ದಾರೆ. ಅದೇನೆಂದರೆ 'ಮಾನವ ಸಂಪನ್ಮೂಲ ಅಭಿವೃದ್ಧಿಯ ಪ್ರತೀಕಗಳಾದ ಶಿಕ್ಷಣ, ಆರೋಗ್ಯ, ವಸತಿ, ಪೌಷ್ಟಿಕ ಆಹಾರ, ನೈರ್ಮಲ್ಯ ವ್ಯವಸ್ಥೆ ಮತ್ತು ಸಂರಕ್ಷಿತ ನೀರಿನ ಪೂರೈಕೆಗಳಂತಹ ಪ್ರಮುಖ ಕ್ಷೇತ್ರಗಳಲ್ಲಿ ತ್ವರಿತಗತಿಯಲ್ಲಿ ಬೆಳವಣಿಗೆಯಾಗಬೇಕಾದ ಅಗತ್ಯವಿದೆ' ಎಂದು ಇದು ಇಂದಿನ ಅವಶ್ಯಕತೆ ಇದನ್ನು ನಾನು ಒಪ್ಪುತ್ತೇನೆ. ಇವತ್ತಿನ ದಿವಸ ಇದಕ್ಕೆ ಪರಿಹಾರ ಏನಿದೆ? ಇಂಥ ಸಮಸ್ಯೆ ಇದೆ ಎಂದು ಹೇಳಿದ ಮೇಲೆ ಅದಕ್ಕೆ ಪರಿಹಾರ ಸೂಚಿಸಬೇಕಾಗಿರುವುದೇ ಸರ್ಕಾರದ ಮುಖ್ಯ ಕರ್ತವ್ಯವಾಗಿರಬೇಕು. ಆದರೆ ಈ ರಾಜ್ಯಪಾಲರ ಭಾಷಣದಲ್ಲಿ ಆ ರೀತಿಯಾದಂಥ ಯಾವುದೇ ಪರಿಹಾರದ ಸೂಚನೆ ಇಲ್ಲಿ ಎಂದು ನಾನು ಹೇಳಬಯಸುತ್ತೇನೆ. ಇನ್ನು ಕೃಷಿ ವಿಷಯವಾಗಿ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಏನು ಹೇಳಿದ್ದಾರೆಂದರೆ-'ರೈತವರ್ಗಕ್ಕೆ ಆಧುನಿಕ ತಂತ್ರ ಜ್ಞಾನಗಳು ದೊರೆಯುವಂತೆ ಮಾಡುವ ಮೂಲಕ ಮತ್ತು ನೀರಾವರಿ, ಸುಧಾರಿತ ಬೀಜಗಳು, ರಸಗೊಬ್ಬರಗಳು ಮುಂತಾದಂಥ ಪ್ರಮುಖ ಪರಿಕರಗಳನ್ನು ಒದಗಿಸುವ ಮೂಲಕ ಕೃಷಿ ಉತ್ಪನ್ನ ಮತ್ತು ಉತ್ಪಾದಕತೆಯನ್ನು ಅಭಿವೃದ್ಧಿಪಡಿಸಲಾಗುವುದು' ಎಂದು. ಇದು ಮಾಮೂಲಿಯಾಗಿ ಇರತಕ್ಕಂಥದ್ದು.

ರಾಜ್ಯಪಾಲರ ಭಾಷಣದಲ್ಲಿ ಇದು ಒಂದು ಕಾಟಾಚಾರಕ್ಕೆ ನಮೂದು ಆಗಿರತಕ್ಕಂಥದ್ದು ಆಗಿದೆ. ಇದಕ್ಕೆ ಏನೂ ಕೂಡ ಕಿಮ್ಮತ್ತು, ಬೆಲೆ ಇಲ್ಲದೇ ಇರತಕ್ಕಂಥ ವಿಚಾರವನ್ನು ಇವತ್ತಿನದಿವಸ ಮಾನ್ಯ ರಾಜ್ಯಪಾಲರ ಬಾಯಿಂದ ಹೇಳಿಸಿದ್ದೀರಿ. ಹಿಂದೆ ಮಾನ್ಯ ಖರ್ಗೆಯವರು ವಿರೋಧ ಪಕ್ಷದ ಸಾಲಿನಲ್ಲಿ ಎದ್ದು ನಿಂತು ಬಹಳ ದೊಡ್ಡ ದೊಡ್ಡದಾಗಿ ರೈತರ ಬಗ್ಗೆ ಮಾತನಾಡುತ್ತಿದ್ದರು, ಇವತ್ತು ರೈತನ ಪರಿಸ್ಥಿತಿ ಏನಾಗಿದೆ? ಕೆಲವು ರೈತರು ಆತ್ಮಹತೆ ಮಾಡಿಕೊಂಡಂಥ ಸಂದರ್ಭದಲ್ಲಿ, ಅದರ ಬಗ್ಗೆ ಈ ಸದನದಲ್ಲಿ ಚರ್ಚೆ ನಡೆದಂಥ ಸಂದರ್ಭದಲ್ಲಿ ಮಾನ್ಯ ಖರ್ಗೆಯವರು ಏನೇನು ಮಾತನಾಡಿದ್ದಾರೆ, ಅವರೇ ಹೇಳಿದಂಥ ಮಾತುಗಳನ್ನು ಸಂದರ್ಭ ಬಂದಾಗ ಹೇಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:-ಮಾನ್ಯ ಅಧ್ಯಕ್ಷರೆ, ಸಾಮಾನ್ಯವಾಗಿ ಒಬ್ಬರು ಮಾತನಾಡುವಾಗ ಅವರ ಮಧ್ಯೆ ನಾನು ಎದ್ದು ಮಾತನಾಡುತ್ತಿರಲಿಲ್ಲ. ನಾನು ಈಗ ಏಕೆ ಎದ್ದು ನಿಂತಿದ್ದೇನೆ ಎಂದರೆ- ರೈತರಿಗೆ ತೊಂದರೆ ಆಗಿದ್ದು ನಿಜ, ಅವರು ಆತ್ಮಹತ್ಯೆ ಮಾಡಿಕೊಂಡಿದ್ದು ಸಹ ನಿಜ, ಆದರೆ ಚರ್ಚೆ ಸಮಯದಲ್ಲಿ ಮಾನ್ಯ ಖರ್ಗೆ ಮುಂತಾದವರು ಮಾತನಾಡುತ್ತಿದ್ದಂಥ ಶೈಲಿ ಯಾವ ರೀತಿ ಇತ್ತು ಎಂದರೆ ಸರ್ಕಾರ ನಡೆಸುತ್ತಿದ್ದ ನಾವೆಲ್ಲ ಕೊಲೆಗಡುಕರೇನೋ ಎನ್ನುವ ರೀತಿಯಲ್ಲಿ ಮಾತನಾಡುತ್ತಿದ್ದರು. ನಿನ್ನೆ ಬಳ್ಳಾರಿಯಲ್ಲಿ ಒಬ್ಬ ರೈತ ಸತ್ತಿದ್ದಾನೆ. ಒಂದು ಸಲ ಮೆಣಸಿನ ಕಾಯಿ ಬಿತ್ತನೆ ಮಾಡಿದನಂತೆ ಪಾಪ, ಬೆಳೆ ಹಾಳಾಗಿ ಹೋಯಿತಂತೆ. ಈ ವರ್ಷ ಪುನಃ ಬೆಳೆ ಹಾಕಿ 40 ಸಾವಿರ ರೂ.ಗಳು ಸಾಲ ಆಯಿತಂತೆ, ಅವನು ಮೊನ್ನೆ ಆತ್ಮಹತ್ಯೆ ಮಾಡಿಕೊಂಡಂತೆ. ಮಾನ್ಯ ಖರ್ಗೆಯವರೆ, ಇದನ್ನು ಪೊಲೀಸ್ ಇಲಾಖೆಯವರೇ ಹೇಳಿರುವಂಥದ್ದು. ಆದ್ದರಿಂದ ಈಗ ಕೊಲೆಗಡುಕರು ಯಾರು?

ಶ್ರೀ ಸಿ. ಭೈರೇಗೌಡ:-ಮಾನ್ಯ ಅಧ್ಯಕ್ಷರೆ, ನಮ್ಮ ನಾಯಕರು ಹೇಳಿದ ಹಾಗೆ ರೈತರ ಆತ್ಮಹತ್ಯೆ ನಿಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಕೆಲವೇ ದಿನಗಳಲ್ಲಿ ಪ್ರಾರಂಭವಾಗಿದೆ. ಅದು ನಿಜವಾಗಿಯೂ ಬೆಳೆ ಕಳೆದುಕೊಂಡಿರುವ ಕಾರಣಕ್ಕೋಸ್ಕರವೇ ಅಥವಾ ಬೇರೆ ಬೇರೆ ಕಾರಣಗಳಿಗೆ ಕೂಡ ಆತ್ಮಹತ್ಯೆ ಮಾಡಿಕೊಂಡಿರಬಹುದು ಎನ್ನುವುದು ಕೂಡ ನನಗೆ ಗೊತ್ತಿದೆ. ಯಾವುದನ್ನು ಕೂಡ ಉತ್ಪ್ರೇಕ್ಷೆ ಮಾಡಿ ಹೇಳುವುದಕ್ಕೆ ನಾನು ಈಗ ತಯಾರಿಲ್ಲ. ನಾನು ಈ ಕೃಷಿ ಇಲಾಖೆಯನ್ನು ನಿರ್ವಹಿಸುವ ಕಾರಣದಿಂದ ಆತ್ಮಹತ್ಯೆಗೆ ಕಾರಣಗಳು ಏನು ಎನ್ನುವ ಪೂರ್ತಿ ಮಾಹಿತಿ ನನಗೆ ಇದೆ. ಆದರೆ ಇವತ್ತು ಪರಿಸ್ಥಿತಿ ಏನಾಗಿದೆ? ಇವತ್ತು ನಮ್ಮ ರಾಜ್ಯದಲ್ಲಿ ಮಾತ್ರ ಅಲ್ಲ, ಇಡೀ ದೇಶದ ರೈತ ಬೆಳೆದಂಥ ಬೆಳೆಗೆ ಯಾವುದೇ ಕೃಷಿ ಉತ್ಪನ್ನ ತೆಗೆದುಕೊಂಡರೂ ಅವನಿಗೆ ಲಾಭದಾಯಕ ಬೆಲೆ ಇಲ್ಲವೇ ಇಲ್ಲ. ಇವತ್ತಿನ ದಿವಸ ಕೇಂದ್ರಸರ್ಕಾರದ ನೀತಿ, ಕೆಲವು ರಾಜ್ಯಸರ್ಕಾರಗಳ ನೀತಿಯಿಂದಾಗಿ ರೈತನ ಹೊಟ್ಟೆಗೆ ಬೆಂಕಿ ಬೀಳುವಂಥ ಪರಿಸ್ಥಿತಿ ಉಂಟಾಗಿದೆ. ಮೊನ್ನೆಯ ದಿವಸ ಲಾರಿ ಸ್ಟ್ರೈಕ್ ಆಯಿತು.

ಲಾರಿ ಸ್ಟ್ರೈಕ್ ಆದರೆ ಅದಕ್ಕೆ ಬೇರೆ ಕಾರಣ ಇರಬಹುದು. ಅದನ್ನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಇಲ್ಲಿ ಹಿಮಾಚಲ ಪ್ರದೇಶದಿಂದ, ಕಾಶ್ಮೀರ ಪ್ರದೇಶದಿಂದ ಸೇಬು ಬರಲಿಲ್ಲ. ಆದರೆ ಆಸ್ಟ್ರೇಲಿಯಾ ದೇಶದಿಂದ ಇಲ್ಲಿ ಸೇಬು ಬರುತ್ತದೆ.

1.30 ಪಿ.ಎಂ

ಆಸ್ಟ್ರೇಲಿಯಾದಿಂದ ಬೆಂಗಳೂರಿಗೆ ಆಪಲ್ ಬರುತ್ತದೆ. ಬೆಂಗಳೂರಿನಲ್ಲಿ ಆಸ್ಟ್ರೇಲಿಯಾದ ಆಪಲ್ ಮಾರಾಟ ಆಗುತ್ತಿದೆ. ಅಷ್ಟೇ ಅಲ್ಲ ನಾನು ಸೂಪರ್ ಮಾರ್ಕೆಟ್‌ನಲ್ಲಿ ವ್ಯಾಪಾರ ಯಾವ ತರಹ ನಡೆಯುತ್ತಿದೆ, ಕೃಷಿ ಉತ್ಪನ್ನಗಳು ಯಾವ ರೀತಿಯಾಗಿ ನಡೆಯುತ್ತಿದೆ ಎಂದು ನೋಡಲು ಹೋಗಿದ್ದೆ. ಮೊನ್ನೆಯ ಸಂದರ್ಭದಲ್ಲಿ ಅಲ್ಲ, ಹಿಂದೆ ಬೇರೆ ಸಂದರ್ಭದಲ್ಲಿ ನಾನು ಬೆಂಗಳೂರಿನಲ್ಲಿರತಕ್ಕ ಕೆಲವು ಮಾರುಕಟ್ಟೆಗಳಿಗೆ ಹೋದಂತಹ ಕಾಲದಲ್ಲಿ ಅಮೇರಿಕಾದಲ್ಲಿ ತಯಾರಾದಂತಹ ಜ್ಯೂಸ್ ಇಲ್ಲಿ ಮಾರಾಟ ಆಗುತ್ತಿದೆ. ಅಮೇರಿಕಾದಲ್ಲಿ ತಯಾರಾದ ಹಣ್ಣಿನ ರಸ ಇಲ್ಲಿ ಮಾರಾಟ ಆಗುತ್ತಿದೆ. ಇಟಲಿಯಲ್ಲಿ ತಯಾರಾದಂತಹ ಕೆಲವು ಕೃಷಿ ಉತ್ಪನ್ನಗಳು ಇವತ್ತು ಬೆಂಗಳೂರಿನಲ್ಲಿ ಮಾರಾಟ ಆಗುತ್ತಿದೆ. ಇಲ್ಲಿ ಬೆಳೆದಂತಹ ರೈತ ಏನಾಗಬೇಕು? ಇಲ್ಲಿ ಹಣ್ಣು ಬೆಳೆದಂತಹ ರೈತ ಏನಾಗಬೇಕು? ತರಕಾರಿ ಬೆಳೆದಂತಹ ರೈತ ಏನಾಗಬೇಕು? ಇದಕ್ಕೆ ರಾಜ್ಯ ಸರ್ಕಾರ ನೇರವಾಗಿ ಕಾರಣ ಇಲ್ಲೇ ಇರಬಹುದು; ಅದನ್ನು ನಾನು ಒಪ್ಪುತ್ತೇನೆ. ಅದು ಕೇಂದ್ರ ಸರ್ಕಾರದ ನೀತಿ ಇದೆ. ಆ ಕೇಂದ್ರ ಸರ್ಕಾರದ ನೀತಿಯಿಂದ ಈ ರೀತಿ ಆಗಿದೆ. ಅದರಲ್ಲೂ ಕೂಡ ನೇರವಾಗಿ ಅದನ್ನು ಹೇಳಬೇಕಾಗಿಲ್ಲ, ನಿಮ್ಮ ಪಕ್ಷವೇ ಅದಕ್ಕೆ ಕಾರಣ ಎನ್ನತಕ್ಕದ್ದನ್ನು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಯಾವಾಗ ಈ ಉದಾರೀಕರಣ ಎನ್ನತಕ್ಕದ್ದು ಮತ್ತು ವಿಷಯ ವಾಣಿಜ್ಯ ವ್ಯಾಪಾರದ ಒಪ್ಪಂದಕ್ಕೆ ರುಜು ಹಾಕಿದ ಮೇಲೆ ಈ ದೇಶದಲ್ಲಿ ರೈತನ ಸಮಾಧಿ ಆಗುವುದಕ್ಕೆ ಪ್ರಾರಂಭ ಆಯಿತು. ಗ್ಯಾಟಿಗೆ ಯಾವತ್ತು ರುಜು ಮಾಡಿದರೋ, ಡಬ್ಲ್ಯುಟಿ.ಓ ಜಾರಿಗೆ ಬಂತೋ ಆವತ್ತಿನಿಂದ ಈ ದೇಶದ ರೈತನ ಸಮಾಧಿ ಆಗುವುದಕ್ಕೆ ಪ್ರಯತ್ನ ಆಗುತ್ತಿದೆ. ಇನ್ನು ಎಣ್ಣೆ ಬೀಜಗಳ ವಿಚಾರ. ಯಥೇಚ್ಛವಾಗಿ ಇವತ್ತು ಇವುಗಳನ್ನು ತರಿಸುತ್ತಿದ್ದಾರೆ. ಎಣ್ಣೆ; ಓ.ಜಿ.ಎಲ್‌ನಲ್ಲಿ ತಾಳೆ ಎಣ್ಣೆ ಏ.ಜಿ.ಎಲ್ ನಲ್ಲಿ ಬರುತ್ತಿದೆ. ಮೊದಲು ಎಣ್ಣೆ ಕಾಳು ಬರುತ್ತಿರಲಿಲ್ಲ. ಈಗ ಒಡೆದ ಎಣ್ಣೆ ಕಾಳುಗಳು ಕೂಡ ಇವತ್ತು ಹೊರ ದೇಶದಿಂದ ಈ ದೇಶಕ್ಕೆ ಬರುತ್ತಿದೆ. ಕಡಲೆಕಾಯಿ ಬೆಳೆದಂತಹ ರೈತ ಇವತ್ತು ಸಮಾಧಿ ಆದ; ಹಣ್ಣು ಬೆಳೆದಂತಹ ರೈತ ಸಹ ಸಮಾಧಿ ಆದ. ಆಹಾರ ಪದಾರ್ಥಗಳು ಇನ್ನೂ ಸ್ವಲ್ಪಮಟ್ಟಿಗೆ ಬರುತ್ತಿಲ್ಲ. ಗೋಧಿ ಸ್ವಲ್ಪ ಮಟ್ಟಿಗೆ ಬರುತ್ತಿದೆ, ಯಾದರೂ ಅದು ದೊಡ್ಡ ಪ್ರಮಾಣದಲ್ಲಿ ಬರುತ್ತಿಲ್ಲ. ಸಕ್ಕರೆ ಬರುತ್ತಿದೆ. ಕಬ್ಬು ಬೆಳೆದಂತಹ ರೈತ ಇವತ್ತು ಸಮಾಧಿ ಆದ. ಈ ರೀತಿಯಾಗಿ ಒಂದು ವರ್ಗವನ್ನು ಸಮಾಧಿ ಮಾಡತಕ್ಕದ್ದಕ್ಕೆ ಮಾತೆತ್ತಿದರೆ W.T.O. ಅದನ್ನು ತಂದಿರತಕ್ಕ ಕೀರ್ತಿ ಸತ್ಕೀರ್ತಿ ನಿಮಗೇ ಸಲ್ಲಬೇಕಾಗಿರತಕ್ಕದ್ದು. ಇಡೀ ಲಿಬರಲೈಸೇಷನ್ ನಲ್ಲಿ ಯಾರಾದರೂ ಕೂಡ ಇವತ್ತು ಈ ದೇಶದಲ್ಲಿ ಗುರಿ ಆಗಿದ್ದರೆ, ತುತ್ತಾಗಿದ್ದರೆ, ಅದಕ್ಕೆ ಸಮಾಧಿ ಆಗಿದ್ದು ಅಂದರೆ

ಅದು ರೈತ ವರ್ಗ. ಇವತ್ತು ಆ ಸಮಸ್ಯೆಯನ್ನು ತಾವು ಗುರುತಿಸುವುದರಲ್ಲಿ ವಿಫಲರಾಗಿದ್ದೀರಿ. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಕೂಡ ಏನನ್ನು ಹೇಳಿಲ್ಲ. ಈ ರಾಜ್ಯಧಲ್ಲಿ ಅವರೂ ಕೂಡ ಶೇಕಡಾ 68ರಷ್ಟು ಜನ ಇದ್ದಾರೆ.

ಶ್ರೀ ಕೆ.ಎಚ್. ರಂಗನಾಥ್:- I am sorry for the interruption. ಈಗ ಉದಾರೀಕರಣದಲ್ಲಿ ಎಲ್ಲರೂ ಭಾಗಿಗಳಾಗಿ ಬಿಟ್ಟಿದ್ದೇವಲ್ಲ; ರಾಜ್ಯದಲ್ಲಿ ಎಲ್ಲಾ ರಾಜಕೀಯ ಪಕ್ಷಗಳೂ, ಧೈರ್ಯದಿಂದ ಇದು ಬೇಡ ಎಂದು ಹೇಳತಕ್ಕ ಗಂಡಸ್ತನ ನಿಮಗೆ ಇದೆಯೋ ಎಂದು ಕೇಳಿದೆ. ಕ್ಷಮಿಸಿ, ನಿಮಗೆ ಆ ಎದೆಗಾರಿಕೆ ಇದೆಯಾ? ಇಲ್ಲಿ ನಾನು ಎದೆಗಾರಿಕೆ ಎಂತಲೇ ಬಳಸುತ್ತೇನೆ, ನಾನು ಸ್ವಲ್ಪ ಬೇಕಾಗಿಯೇ ಬಳಸಿದೆ, ದಯಮಾಡಿ ಕ್ಷಮಿಸಿ. ಏಕೆಂದರೆ ಹೇಳಿದರೆ ಅನಿವಾರ್ಯವಾದಂತಹ ಪರಿಸ್ಥಿತಿ ಬಂದಾಗ ಈ ತರಹ ಆಗುತ್ತದೆ. Coalition-it is a permanent phenomenon ಎನ್ನುವ ರೀತಿಯಲ್ಲಿ ಇವತ್ತು ನಾವು ಪ್ರಸ್ತಾಪ ಮಾಡುತ್ತಿದ್ದೇವೆ. ಹಾಗಾದರೆ ನೀವು ಅನಿವಾರ್ಯವಾಗಿ ತಲೆ ಕೊಡತಕ್ಕ ಪರಿಸ್ಥಿತಿ ಬರುತ್ತದೆ; ಇದೊಂದು. ಪ್ರಪಂಚ ವೇಗವಾಗಿ ಬೆಳೆಯುತ್ತಿರುವಾಗ ನಾನು ಎಲ್ಲೋ ಒಂದು ಮೂಲೆಯಲ್ಲಿರುತ್ತೇನೆಂದು ಹೇಳುವುದು ಕೂಡ ಒಂದು ತೊಂದರೆಯಾಗತಕ್ಕಂಥ ಧೋರಣೆ. ಆಗ ಪ್ರಪಂಚದ ಜೊತೆಗೆ ಓಡಬೇಕಾದರೆ ಹಂತ ಹಂತವಾಗಿ ಯಾವರೀತಿ ತಯಾರು ಮಾಡಬೇಕು ಎನ್ನುವುದನ್ನು ಕೂಡ ನಾವು ವಿಚಾರ ಮಾಡಬೇಕಾಗುತ್ತದೆ. ಈ ವ್ಯವಸಾಯದ ವಿಚಾರ ತೆಗೆದುಕೊಳ್ಳೋಣ, ಸಕ್ಕರೆಯ ವಿಚಾರ ತೆಗೆದುಕೊಳ್ಳೋಣ. ಕಬ್ಬಿನ ಪ್ರಶ್ನೆಯೇ ತೆಗೆದುಕೊಳ್ಳೋಣ. ನಿಮ್ಮ ಸಕ್ಕರೆ ಹೊರ ದೇಶದ ಮಾರುಕಟ್ಟೆಯಲ್ಲಿ ಬಳಸತಕ್ಕ ರೀತಿಯಲ್ಲಿ ನಾವು ಮಾಡುತ್ತಿದ್ದೇವೆಯೋ? ಇಷ್ಟು ಕಬ್ಬಿನ ಲೈಸೆನ್ಸನ್ನು ನಾವು ಸಕ್ಕರೆ ಕಂಪನಿಗಳಿಗೆ ಕೊಟ್ಟಿದ್ದೇನೆ. ನಮ್ಮ ಆ ಸಕ್ಕರೆ, ಇಲ್ಲಿ ತಯಾರು ಆದಂತಹ ಸಕ್ಕರೆ ಹೊರ ದೇಶದಲ್ಲಿ ಮಾರಾಟ ಮಾಡುವುದಕ್ಕೆ ಮಾರುಕಟ್ಟೆ ಇದೆಯೋ? ಆ ರೀತಿ ನಾವು ವ್ಯವಸ್ಥೆ ಮಾಡಿಕೊಂಡಿದ್ದರೆ We would have also been competitors in the world market. ಗ್ಯಾಟ್ ನಮಗೆ ತೊಂದರೆ ಮಾಡಿದೆ. ಅದರಿಂದ ಇನ್ನೂ ತೊಂದರೆ ಆಗುತ್ತದೆ. ಇವತ್ತು ಅಷ್ಟೇ ಅಲ್ಲ, ಇನ್ನೂ ತೊಂದರೆ ಆಗುತ್ತದೆ. ಅದನ್ನು ನಾವು ಗಮನದಲ್ಲಿಟ್ಟುಕೊಳ್ಳುವಾಗ ಹೇಗೆ ತಯಾರಾಗಬೇಕು ಎನ್ನುವುದನ್ನು ಕೂಡ ನಾವುಗಳು ವಿಚಾರ ಮಾಡಬೇಕಾಗುತ್ತದೆ. ನಾವೆಲ್ಲ ರಾಜಕೀಯ ಪಕ್ಷಗಳು ವಿಚಾರ ಮಾಡಬೇಕಾಗುತ್ತದೆ. ಇದು ಇಲ್ಲದೇ ಹೋದರೆ ಏನೂ ಪ್ರಯೋಜನ ಆಗುವುದಿಲ್ಲ. ತಾವು ಹೆಚ್ಚು ಒತ್ತನ್ನು ಆ ವಿಚಾರಕ್ಕೆ ಕೊಟ್ಟಿದ್ದರಿಂದ ನಾನು ಪ್ರಸ್ತಾಪ ಮಾಡಿದೆ. ಉದಾರೀಕರಣಕ್ಕೆ, ಆ ನೀತಿಗೆ, ಅದು ಎಲ್ಲಾ ರೀತಿಯಲ್ಲಿ ಬರುತ್ತಿರುವ ವಿಚಾರವನ್ನು ತಾವು ಪ್ರಸ್ತಾಪ ಮಾಡಿದಿರಿ. ಆಸ್ಟ್ರೇಲಿಯಾದಿಂದ ಜ್ಯೂಸ್ ಬರುತ್ತಿದೆ ಎಂದು ಹೇಳಿದಿರಿ. ಅದನ್ನು ಬಳಸತಕ್ಕಂಥವರ ಸಂಖ್ಯೆಯನ್ನು ನಾವು ಬೇರೆ ಮಾಡಿದ್ದೇವಲ್ಲ. ನಾನೂ ನೀವು ಇವತ್ತಿನ ದಿವಸ ಬಳಸದೇ

ಇರಬಹುದು. ಇವತ್ತು ಬಾಸುಮತಿ ಅಕ್ಕಿ ಬೆಲೆ ಎಷ್ಟಾಗಿದೆ? ಇವತ್ತು ಐದು ರೂಪಾಯಿ ಮೇಲೆ ಇದ್ದುದು 50 ರೂಪಾಯಿ 60 ರೂಪಾಯಿಗೆ ಹೋಗಿದೆ. ಅದನ್ನೇ ಬಳಸಿಕೊಂಡು ಮದುವೆ ಮಾಡತಕ್ಕಂಥ ಜನಸಂಖ್ಯೆ ಕೂಡ ಇವತ್ತು ಜಾಸ್ತಿ ಆಗಿದೆ. ಈ ದೃಷ್ಟಿಕೋನದಿಂದ ಇದನ್ನೂ ಕೂಡ ಆ ಒಂದು ವ್ಯವಸ್ಥೆಯಲ್ಲಿ ವಿಚಾರ ಮಾಡಿ ಮಾಡಬೇಕಾಗುತ್ತದೆ. ಈಗ ತಮ್ಮದೇ ಜಿಲ್ಲೆ ಇದೆ. ತಮ್ಮ ಜಿಲ್ಲೆಯ ರೈತರು ಅನುಕರಣೀಯವಾಗಿರತಕ್ಕಂಥವರು. ಎರಡು ಎಕರೆ, ಎಂದು ಎಕರೆ ಇರತಕ್ಕಂಥ ರೈತರು. ಒಂದಾನೊಂದು ಕಾಲದಲ್ಲಿ ಈ ಭೂ ಸುಧಾರಣೆ ತರುವಾಗ ಸಣ್ಣ ಹಿಡುವಳಿ ಇದ್ದರೆ ವ್ಯವಸಾಯ ಅಭಿವೃದ್ಧಿ ಆಗುವುದಿಲ್ಲ ಎಂದು ಹೇಳುತ್ತಿದ್ದರು. ಅದಕ್ಕೆ ಅಪವಾದ ಆ ಮಾತಿಗೆ. ಕೋಲಾರ ಜಿಲ್ಲೆಯಲ್ಲಿ ಅದನ್ನು ಮಾಡಿ ತೋರಿಸಿದ್ದಾರೆ, ಮಂಡ್ಯ ಜಿಲ್ಲೆಯಲ್ಲಿ ಅದನ್ನು ಮಾಡಿ ತೋರಿಸಿದ್ದಾರೆ. ಮಂಡ್ಯದಲ್ಲಿರತಕ್ಕ ರೈತರು ಮಾಡಿ ತೋರಿಸಿದ್ದಾರೆ. ಅಲ್ಲೇನು 60 ಎಕರೆ, 70 ಎಕರೆ, 80 ಎಕರೆ ಹಿಡುವಳಿ ಇಲ್ಲ. ಆದರೆ ಒಂದು ಎಕರೆ ಇರತಕ್ಕಂಥ ಒಬ್ಬ ರೈತ ಕನಿಷ್ಟ 20,25,30 ಸಾವಿರ ರೂಪಾಯಿ ನಿಮ್ಮಲ್ಲಿ ಮಾಡುತ್ತಾರೆ. ಇವತ್ತು ಅದನ್ನು ಇಟ್ಟುಕೊಂಡು ಹಾಲಿನ ಹೊಳೆ ಕೋಲಾರದಲ್ಲಿ ಹರಿಯುತ್ತಿದೆ. ಅಲ್ಲಿ ದೊಡ್ಡ ದೊಡ್ಡ ರೈತರೇನೂ ಇಲ್ಲ. ಆದರೆ ಅದನ್ನು ಬಳಕೆ ಹೇಗೆ ಮಾಡಿಕೊಳ್ಳಬೇಕು ಎನ್ನುವುದರ ಬಗ್ಗೆ ನಮ್ಮಲ್ಲಿ ನೀತಿ ಇಲ್ಲ. ಈ ಬಗ್ಗೆ ಸ್ವಲ್ಪ ಯೋಚನೆ ಮಾಡಬೇಕು. ನಾವು ಯಾವುದೋ ಒಂದು ಎಳೆ ಹಿಡಿದುಕೊಂಡು ಉದಾರೀಕರಣದ ಪ್ರಸ್ತಾಪ ಮಾಡತಕ್ಕದ್ದು ಅಲ್ಲ. ಇದರ ಬಗ್ಗೆ ಈ ಮನೆ ವಿಚಾರ ಮಾಡಬೇಕಾಗುತ್ತದೆ. ಎಲ್ಲಾ ಪಕ್ಷಗಳೂ ಇದನ್ನು ವಿಚಾರ ಮಾಡಬೇಕಾಗುತ್ತದೆ. ಒಂದು ಕಡೆ ಅದು ಸರಿ ಎಂದು ಹೇಳತಕ್ಕವರು ಇದ್ದಾರಲ್ಲ. ಈಗ ರೇಷ್ಮೆ ತಮಗೆ ಗೊತ್ತಿರುವ ಹಾಗೆ ಏಕೆ ಇಂಪೋರ್ಟ್ ಆಯಿತು? ನಾವು ಈಗ ಸಕ್ಕರೆ ಮಾರಾಟ ಮಾಡುವುದಕ್ಕೆ ಆಗುವುದಿಲ್ಲ, ಏಕೆ ಆಯಿತು? ಕ್ರೂಡ್ ಆಯಿಲ್ ವಿಚಾರ, ಅನಿವಾರ್ಯವಾಗಿ ಏರಿಸಿದ್ದೇವೆ ಎಂದು ಹೇಳಿದರು. ಏನು ಇತ್ತೋ ಅನೂ ಗೊತ್ತಾಗುವ ಹಾಗೆ ಇಲ್ಲ. ಇದೆಲ್ಲ ದೊಡ್ಡ ವಿಚಾರ ಇದೆ. ಎಂಟು ದಿವಸದಲ್ಲಿ ತಯಾರಾದ ರಾಜ್ಯಪಾಲರ ಭಾಷಣದಲ್ಲಿ ತಾವು ಪ್ರಸ್ತಾಪ ಮಾಡಿದರೆ ಕಷ್ಟವಾಗಬಹುದೇನೋ?

ಶ್ರೀ ವೈ.ಕೆ. ರಾಮಯ್ಯ:- ಮಾನ್ಯ ಅಧ್ಯಕ್ಷರೆ, ಮಾನ್ಯ ಭೈರೇಗೌಡರು ಈ ರಾಜ್ಯದ, ಈ ರಾಷ್ಟ್ರದ ರೈತರ ಬಗ್ಗೆ ವ್ಯಕ್ತ ಮಾಡುತ್ತಿರುವಂತಹ ಅಭಿಪ್ರಾಯಕ್ಕಾಗಿ ನಾನು ಅವರನ್ನು, ಹೃದಯಪೂರ್ವಕವಾಗಿ ಅಭಿನಂದಿಸುತ್ತೇನೆ. ಆದರೆ ತಲೆ ಮೇಲೆ ಕಲ್ಲು ಎಳೆದಿದ್ದಾರೆ, ಹೊಟ್ಟೆಗೆ ಬೆಂಕಿ ಬಿದ್ದಿದೆ, ಅವರೆಲ್ಲಾ ನಾಶ ಆಗಿ ಹೋಗಿದ್ದಾರೆ, ಗುಲ್ಬರ್ಗದಲ್ಲಿ ವಿಷ ತೆಗೆದುಕೊಂಡರು ಎಂದು ಹೇಳಿದರು. ಇದನ್ನೆಲ್ಲಾ ವಿಚಾರಣೆ ಮಾಡುವಂತಹ ಸ್ಥಾನದಲ್ಲಿ ಮಾನ್ಯ ಭೈರೇಗೌಡರು ಅಧಿಕಾರದಲ್ಲಿ ಆವತ್ತು ಇದ್ದರು. ಅವರ ಸರ್ಕಾರವೇ ಇಲ್ಲಿ ಇತ್ತು. ಕೇಂದ್ರದಲ್ಲಿ ಅವರ ಸರ್ಕಾರ ಇತ್ತು. ರೈತರನ್ನು ಇಂತಹ ಪರಿಸ್ಥಿತಿಗೆ ಇತ್ತೀಚೆಗೆ

ಮಾಡಿದವರು ಯಾರು? ಎರಡನೆಯ ಪ್ರಶ್ನೆ. ನಾನು ಇನ್ನೂ ಐದು ವರ್ಷ ಭಾಷಣ ಮಾಡುವುದು ಬಹಳ ಇದೆ, ನಾನು ಹೇಳುತ್ತೇನೆ; ಬಹುಶಃ ಈ ರಾಜ್ಯದಲ್ಲಿ ಜನತಾ ದಳದ ಸರ್ಕಾರ ಈ ಸಾರಿ ಚುನಾವಣೆಯಲ್ಲಿ ಏನಾದರೂ ಸೋತಿದ್ದರೆ, ನೀವು ತೆಗೆದುಕೊಂಡಂತಹ ರೈತ ವಿರೋಧಿ ಧೋರಣೆಗಳ ಒಂದೇ ಒಂದು ಕಾರಣಕ್ಕಾಗಿ ಜನ ನಿಮ್ಮನ್ನು ಸೋಲಿಸಿದ್ದಾರೆ. ಮುಂದಿನ ದಿನಗಳಲ್ಲಿ ಅದನ್ನು ನಾನು ಪಟ್ಟಿ ಮಾಡಿ ಹೇಳುತ್ತೇನೆ. ಇಲ್ಲಿಗೆ ನಿಲ್ಲಿಸುತ್ತೇನೆ. ಇದು ಎರಡನೆಯದು. ಉದಾರೀಕರಣದ ಬಗ್ಗೆ ಅವರು ಹೇಳಿದರು. ಉದಾರೀಕರಣದಿಂದ ಒಳ್ಳೆಯದಾಯಿತೋ ಅಥವಾ ಕೆಟ್ಟದ್ದು ಆಯಿತೋ ಎಂದು ಮುಂದೆ ಚರ್ಚೆ ಮಾಡೋಣ. ಇವತ್ತಿಗೆ ನನ್ನ ಪ್ರಶ್ನೆ ಇಷ್ಟೆ. ಉದಾರೀಕರಣವನ್ನು ಕಾಂಗ್ರೆಸ್‌ನವರು ತಂದು ಬಿಟ್ಟರು, ಅನ್ಯಾಯ ಮಾಡಿದರು, ಎಂದು ಹೇಳುತ್ತಿದ್ದೀರಿ. ತಮ್ಮ ಪಕ್ಷವೇ ಅಧಿಕಾರದಲ್ಲಿ ಇತ್ತು ಸ್ವಾಮಿ. ತಾವೇಕೆ ಅದನ್ನು ಕಿತ್ತು ಹಾಕಲಿಲ್ಲ?

ಶ್ರೀ ಸಿ. ಬೈರೇಗೌಡ:- ಮಾನ್ಯ ಹಿರಿಯ ಸದಸ್ಯರಾದಂತಹ ಮಾನ್ಯ ಕೆ.ಹೆಚ್. ರಂಗನಾಥ್ ಅವರನ್ನು ನಾನು ಅಭಿನಂದಿಸುತ್ತೇನೆ. ಅವರು ನನ್ನ ವಾದವನ್ನು ಪುಷ್ಟೀಕರಿಸಿ ಮಾತನಾಡಿದ್ದಾರೆ. ನಾನು ಹೇಳತಕ್ಕದ್ದು ಏನೆಂದರೆ first impression is the best impression ಎನ್ನತಕ್ಕ ದೃಷ್ಟಿಯಿಂದ ಇಂತಹ ಮೂಲಭೂತವಾದಂತಹ ವಿಚಾರಗಳು ಇಲ್ಲಿ ಪ್ರಸ್ತಾಪ ಆಗಬೇಕಾಗಿತ್ತು. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ. ಇದರಿಂದ ಯಾವ ದಿಕ್ಕಿಗೆ ದೇಶ ಹೋಗುತ್ತಿದೆ? ಉದಾರೀಕರಣ ಒಂದೇ ಅಲ್ಲ. ಇನ್ನೂ ಅನೇಕ ಸಮಸ್ಯೆಗಳು ಈ ದೇಶದಲ್ಲಿ ಭ್ರಷ್ಟಾಚಾರ ಇದೆ. ಅದಕ್ಕೆ ಆಮೇಲೆ ಬರುತ್ತೇನೆ. ಈ ದೇಶವನ್ನು ಕಿತ್ತು ಕಾಡುತ್ತಿರತಕ್ಕಂಥ ಸಮಸ್ಯೆಗಳನ್ನು ತಾವು ಮೊದಲನೇ ಭಾಷಣದಲ್ಲಿ ಹೇಳಬೇಕಾಗಿತ್ತು. ತಮ್ಮ ಅನಿಸಿಕೆಗಳೇನು ಇವೆ, ಆಲೋಚನೆಗಳೇನು ಇವೆ, ಅದು ಮೂಡಿ ಬರಬೇಕಾಗಿತ್ತು. ಅದು ಬರದೇನೆ ಇವತ್ತು ಉದಾರೀಕರಣದಿಂದ ಏನಾಗುತ್ತದೆ ಎನ್ನುವ ಬಗ್ಗೆ ಪ್ರಸ್ತಾಪ ಆಗಬೇಕಾಗಿತ್ತು. ಇವರು ರೈತರ ಬಗ್ಗೆ ಮಾತನಾಡಿರತಕ್ಕ ಮಾಮೂಲಿ ಪ್ರಸ್ತಾಪ ಅಲ್ಲ- ಇದು ಮೂಲಭೂತವಾದಂತಹ ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡಬೇಕಾಗಿತ್ತು ಎನ್ನುವುದು ನನ್ನ ವಾದ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಬೈರೇಗೌಡರೇ, ತಾವು ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಅದರ ಮೇಲೆ ಪಾಲಿಸೀಸ್ ಮತ್ತು ಪ್ರೋಗ್ರಾಮ್ ಏನೂ ಇಲ್ಲ, ಪ್ರಣಾಳಿಕೆ ಪ್ರಕಾರ ಅದರಲ್ಲಿ ಏನೂ ಹೇಳಿಲ್ಲ ಎನ್ನುವ ಮಾತನ್ನು ಪ್ರಸ್ತಾಪ ಮಾಡಿದಿರಿ. ತಮಗೆ ಇದು ಕೂಡ ಗೊತ್ತಿದೆ. ಜನವರಿ ತಿಂಗಳಲ್ಲಿ ನಾವು ಪುನಃ ಸಭೆ ಸೇರುತ್ತೇವೆ. ಇದು ಇರತಕ್ಕದ್ದು 60 ದಿವಸಗಳಿಗಾಗಿ. ನಮ್ಮ ಪ್ರಣಾಳಿಕೆ ಏನು ಇದೆ, ಅದು ಎಲ್ಲವನ್ನೂ ಕೂಡ ಆಗ ಹೇಳುತ್ತೇನೆ. ನೀವು ನಮ್ಮ ಸರ್ಕಾರದ ಮೇಲೆ ಟೀಕೆಗಳನ್ನು ಮಾಡುತ್ತಿದ್ದೀರಿ. ನಾವಿನ್ನೂ ಅಧಿಕಾರಕ್ಕೆ ಬಂದು ಇನ್ನೂ 60 ದಿವಸಗಳೂ

ಆಗಿಲ್ಲ. ಈ 60 ದಿವಸಗಳಲ್ಲೇ ಪ್ರಪಂಚದಲ್ಲಿರತಕ್ಕ ಎಲ್ಲರನ್ನೂ ಕೂಡ ಮಾಡುತ್ತೇವೆ ಎಂದು ಹೇಳುವುದಕ್ಕಾಗುತ್ತದೆಯೇ? ನಾವು ಇಲ್ಲಿ ಪ್ರಾಕ್ಟಿಕಲ್ಲಾಗಿ ಮಾತನಾಡೋಣ. ನಾವಿನ್ನೂ ಅಧಿಕಾರ ವಹಿಸಿಕೊಂಡು 30 ದಿವಸಗಳೂ ಆಗಲಿಲ್ಲ, ಬಹುಶಃ ನಾಳೆಗೆ 30 ದಿವಸಗಳಾಗಬಹುದು. ಅದರಲ್ಲೂ ಮಂತ್ರಿಗಳು ಅಧಿಕಾರ ವಹಿಸಿಕೊಂಡು ಇನ್ನೂ 20 ದಿನಗಳೂ ಆಗಿಲ್ಲ. ಹೀಗಿರುವಾಗ ಮಾನ್ಯ ಬೈರೇಗೌಡರೂ ಸೇರಿ ಸುಮಾರು 23-30 ಜನ ನಮ್ಮ ಸರ್ಕಾರದ ಮೇಲೆ ಟೀಕೆಗಳನ್ನು ಮಾಡುತ್ತಿದ್ದೀರಿ. ನೀವು ನಮ್ಮನ್ನು ಹೊಗಳುತ್ತಿರಬೇಕೆಂಬುದು ನಮ್ಮ ಅಪೇಕ್ಷೆಯಲ್ಲ. ನೀವು ಸಲಹೆ ಕೊಡಿ, ಅದನ್ನು ನಾವು ಸ್ವಾಗತಿಸುತ್ತೇವೆ. ನಾವು ತಪ್ಪಿದಾಗ ನಮ್ಮನ್ನು ನೀವು ತಿದ್ದಬೇಕು, ಸೂಕ್ತ ಸಲಹೆ ಕೊಡಬೇಕು. ಆದರೆ ಇಷ್ಟೊಂದು ಜನ ನಮ್ಮ ಸರ್ಕಾರದ ಮೇಲೆ ಟೀಕೆ ಮಾಡಿದರೆ ಅದನ್ನು ತಾಳಿಕೊಳ್ಳುವುದಾದರೂ ಹೇಗೆ?

ಶ್ರೀ ವಿ. ಮುನಿಯಪ್ಪ:- ಮಾನ್ಯ ಅಧ್ಯಕ್ಷರೇ, ಮಾನ್ಯ ಬೈರೇಗೌಡರು ಕೃಷಿ ಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಹೊರ ರಾಜ್ಯಕ್ಕೆ ಕಳುಹಿಸುವಂತಹ ಗುಲಾಬಿ, ಈರುಳ್ಳಿ ಬೆಲೆಯ ಗತಿ ಏನಾಯಿತು ಎಂಬುದು ಅವರಿಗೆ ಚೆನ್ನಾಗಿ ಗೊತ್ತಿದೆ. ಕೆಲವೊಂದು ಬೇರೆ ಬೇರೆ ವಿಚಾರಗಳಿವೆ, ನಾವು ಅವುಗಳನ್ನು ಬೇರೆ ಬೇರೆ ಸಂದರ್ಭಗಳಲ್ಲಿ ಮಾತನಾಡೋಣ. ಮಾನ್ಯ ಬೈರೇಗೌಡರು ಕೃಷಿ ಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಕೇಂದ್ರ ವಾಣಿಜ್ಯ ಸಚಿವರ ಪಕ್ಷದ ಜೊತೆ ಅವರ ಪಕ್ಷದ ಮೈತ್ರಿಯಾಯಿತು. ಆ ಸಂದರ್ಭದಲ್ಲಾದರೂ ಇದಕ್ಕೇನಾದರೂ ಪರಿಹಾರ ಕೊಡಿಸತಕ್ಕಂತಹ ಪ್ರಯತ್ನ ನಿಮ್ಮಿಂದಾಯಿತೇ? ಎಂದು ನಾನು ಅವರನ್ನು ಕೇಳಬಯಸುತ್ತೇನೆ.

ಶ್ರೀ ಸಿ. ಬೈರೇಗೌಡ:- ನನ್ನ ವೈಯಕ್ತಿಕ ಪ್ರಯತ್ನದಿಂದಾಗಿಯೇ ಗುಲಾಬಿ, ಈರುಳ್ಳಿಯನ್ನು ನಾವು ಹೊರ ದೇಶಕ್ಕೆ ಕಳುಹಿಸುವುದಕ್ಕೆ ಸಾಧ್ಯವಾಯಿತು ಎಂಬುದನ್ನು ನಾನು ಬಹಳ ಹೆಮ್ಮೆಯಿಂದ, ಜಂಭದಿಂದ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಮಾನ್ಯ ವೈ.ಕೆ. ರಾಮಯ್ಯನವರು ಆಗಲೇ ಮಾತನಾಡುತ್ತಾ ಒಂದು ವಿಚಾರವನ್ನು ಪ್ರಸ್ತಾಪ ಮಾಡಿ, 'ನೀವೂ ಕೂಡ ಐದು ವರ್ಷ ಕೃಷಿ ಮಂತ್ರಿಗಳಾಗಿದ್ದಿರಿ' ಎಂಬ ಮಾತನ್ನು ಹೇಳಿದರು. ಕೃಷಿ ಪ್ರಧಾನವಾದಂತಹ ದೇಶದಲ್ಲಿ ಎಲ್ಲಾ ಆದ್ಯತೆಯನ್ನೂ ಕೂಡ ಕೃಷಿಗೇ ಕೊಡಬೇಕಾಗಿತ್ತು. ಈ ದೇಶದಲ್ಲಿ ಯೋಜನಾ ಬದ್ಧವಾದ ಅಭಿವೃದ್ಧಿಯನ್ನು ಸಾಧಿಸುವ ಸಲುವಾಗಿ ರೂಪಿಸಿಕೊಳ್ಳಲಾದ ಪಂಚವಾರ್ಷಿಕ ಯೋಜನೆಗಳಲ್ಲಿ ಮೊದಲನೆಯ ಪಂಚ ವಾರ್ಷಿಕ ಯೋಜನೆಯಲ್ಲಿಯೇ ಕೃಷಿಗೆ ಒತ್ತು ಕೊಡತಕ್ಕಂತಹ ಪ್ರಯತ್ನ ನಡೆಯಬೇಕಾಗಿತ್ತು. ಆದರೆ ಇವತ್ತು ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲೇ ಈ ದೇಶವನ್ನು ದಾರಿ ತಪ್ಪಿಸಿ ಅಡ್ಡಗಾಲು ಹಾಕಲಾಗಿದೆ. ಮೊದಲನೇ ಪಂಚವಾರ್ಷಿಕ ಯೋಜನೆ ಮುನ್ನುಡಿಯಲ್ಲಿ ಕೃಷಿ ಕೈಗಾರಿಕೆಗಳಿಗೆ ಅನುಗುಣವಾಗಿ ಇರಬೇಕೆಂದು ಹೇಳಿದ್ದಾರೆ. ಇದನ್ನು ನಾವು ನಮ್ಮ ಸರ್ಕಾರ

ಇದ್ದಾಗ ಬಿಡುಗಡೆ ಮಾಡಿದ ಕೃಷಿ ನೀತಿಯಲ್ಲಿ ಉಲ್ಲೇಖ ಮಾಡಿದ್ದೇವೆ. ಅದೇ ನಮ್ಮ ಕೃಷಿ ನೀತಿಗೆ ಮೂಲಾಧಾರವಾಗಿತ್ತು. ಕೈಗಾರಿಕೆಗಳಿಗೆ ಕಚ್ಚಾ ಸಾಮಗ್ರಿಗಳನ್ನು ಒದಗಿಸತಕ್ಕಂತಹ ಹಂತಕ್ಕೆ ಮಾತ್ರ ಸೀಮಿತಗೊಳಿಸಿ ಕೈಗಾರಿಕೆಗಳನ್ನು ಹೆಚ್ಚಿಸತಕ್ಕಂತಹ, ಕೈಗಾರಿಕಾ ರಂಗಕ್ಕೆ ಹೆಚ್ಚಿನ ಪ್ರಾಶಸ್ತ್ಯಕೊಡತಕ್ಕ ನೀತಿಯನ್ನು ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ಏನು ಹೇಳಿದ್ದಾರೋ ಅದನ್ನೇ ಇವತ್ತಿನವರೆಗೂ ಅನುಸರಿಸಿಕೊಂಡು ಬರಲಾಗಿದೆ. ಹಿಂದಿದ್ದಂತಹ ಎಲ್ಲಾ ಸರ್ಕಾರಗಳೂ ಇದನ್ನೇ ಅನುಸರಿಸಿಕೊಂಡು ಬಂದಿವೆ. ಇದರಲ್ಲಿ ಆ ಸರ್ಕಾರ ಈ ಸರ್ಕಾರ ಎಂಬುದು ಇಲ್ಲ. ಎಲ್ಲೋ ಕೇವಲ 11 ತಿಂಗಳು ಪ್ರಧಾನ ಮಂತ್ರಿಗಳಾದ ಮಾತ್ರಕ್ಕೆ ಇಡೀ ಪ್ರಪಂಚವನ್ನು ತಲೆಕೆಳಕು ಮಾಡುವುದಕ್ಕಾಗುವುದಿಲ್ಲ. ಈ ದೇಶಕ್ಕಾಗಿ ಯಾವ ರೀತಿಯಾದಂತಹ ಹಿತಾಸಕ್ತಿಗಳು ಕೆಲಸ ಮಾಡುತ್ತಿವೆ ಎಂಬುದರ ಬಗ್ಗೆ ಸುಮಾರು 30-35 ವರ್ಷಗಳ ಅನುಭವ ಇರತಕ್ಕ ಮಾನ್ಯ ರಾಮಯ್ಯನವರಿಗೆ ಗೊತ್ತಿದೆ. ಅವರಿಗೆ ಅವುಗಳ ಬಗ್ಗೆ ಪರಿಚಯ ಇಲ್ಲವೆಂದು ನಾನು ಹೇಳುವುದಿಲ್ಲ. ದೇಶದ ಹಿತಾಸಕ್ತಿಗಳನ್ನು ಕಾಪಾಡಲಿಕ್ಕೆ ಒಂದು ವ್ಯವಸ್ಥೆಯನ್ನು ನಾವು ರೂಢಿಸಿಕೊಂಡಿದ್ದೇವೆ. ನಾನು ಐದು ವರ್ಷ ರಾಜ್ಯ ಸರ್ಕಾರವೊಂದರಲ್ಲಿ ಕೃಷಿ ಮಂತ್ರಿಯಾಗಿದ್ದೆ. ಇಡೀ ದೇಶಕ್ಕೆ ಹೋಲಿಸಿದರೆ ಒಂದು ರಾಜ್ಯ ಸರ್ಕಾರ ಒಂದು ಮುನಿಸಿಪಾಲಿಟಿ, ಗ್ರಾಮ ಪಂಚಾಯಿತಿ ಇದ್ದ ಹಾಗೆ. ರಾಜ್ಯ ಸರ್ಕಾರದಲ್ಲಿ ಕೃಷಿ ಮಂತ್ರಿಯಾಗಿರುವವನಿಗೆ ಏನಾದರೂ ಆಮೂಲಾಗ್ರವಾಗಿ ಬದಲಾವಣೆ ಮಾಡುವುದಕ್ಕೆ ಸಾಧ್ಯವಿದೆಯೇ? ಅದು ಖಂಡಿತಾ ಸಾಧ್ಯವಿಲ್ಲ. ಆ ರೀತಿಯಾದಂತಹ ಚಿಂತನೆಯನ್ನು ....

ಶ್ರೀ ವೈ.ಕೆ. ರಾಮಯ್ಯ:- ಹಾಗಾದರೆ ಈ ವ್ಯವಸ್ಥೆಯನ್ನು ಬದಲಾವಣೆ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ನೀವು ಒಪ್ಪಿಕೊಂಡ ಹಾಗಾಯಿತಲ್ಲಾ?

ಶ್ರೀ ಸಿ. ಬೈರೇಗೌಡ:- ಇಡೀ ದೇಶಕ್ಕೇ ದಿಕ್ಕು ತೋರಿಸತಕ್ಕಂತಹ ರಾಜ್ಯಪಾಲರ ಭಾಷಣ ಇದು ಆಗಬೇಕಾಗಿತ್ತು ಎಂದು ನಾನು ಹೇಳುತ್ತೇನೆ. 'ಸವಾಲುಗಳು' ಎಂದು ನೀವು ಹೇಳಿಕೊಂಡಿದ್ದೀರಿ. ಆ ಸವಾಲುಗಳು ಯಾವುವು ಎಂಬುದನ್ನು ಗುರುತಿಸಿ, ಆ ಸವಾಲುಗಳನ್ನು ಪರಿಹಾರ ಮಾಡತಕ್ಕ ಅಂಶಗಳನ್ನು ಈ ರಾಜ್ಯಪಾಲರ ಭಾಷಣ ಹೊಂದಿರಬೇಕಾಗಿತ್ತು. ಆದರೆ ಇಲ್ಲಿ ಆ ಕೆಲಸ ಆಗಿಲ್ಲ. ರೈತರನ್ನು ಮೂಲಭೂತವಾಗಿ ಕಾಡತಕ್ಕ ಸಮಸ್ಯೆಗಳೇನಿವೆ, ಆ ರೈತರ ಸಮಸ್ಯೆಗಳಿಗೆ ತೇಪೆ ಹಾಕತಕ್ಕ ಕೆಲಸವೂ ಕೂಡ ಈ ಭಾಷಣದಲ್ಲಿ ಇಲ್ಲ. ಏನೋ ಕಾಟಾಚಾರಕ್ಕೆ ಒಂದು ರಾಜ್ಯಪಾಲರ ಭಾಷಣ ಇರಬೇಕು ಎಂದು ಭಾವಿಸಿ ತಯಾರು ಮಾಡಿದಂತೆ ಕಾಣುತ್ತದೆ.

ಉಪಾಧ್ಯಕ್ಷರು:- ಮಾನ್ಯ ಬೈರೇಗೌಡರೇ, ಭೋಜನ ವಿರಾಮವಾದ ನಂತರ ಮಧ್ಯಾಹ್ನ 2.45ಕ್ಕೆ ತಾವು ಮಾತನಾಡುವುದನ್ನು ಮುಂದುವರೆಸಬಹುದು. ಈಗ ನಾನು ಸದನವನ್ನು ಮುಂದೂಡುತ್ತಿದ್ದೇನೆ. ಸದನವು ಮತ್ತೆ ಮಧ್ಯಾಹ್ನ 2.45ಕ್ಕೆ ಸಮಾವೇಶಗೊಳ್ಳಲಿದೆ.

(ಸದನವು ಮಧ್ಯಾಹ್ನ 1.45ಕ್ಕೆ ಭೋಜನ ವಿರಾಮಕ್ಕಾಗಿ ಮುಂದೂಡಲ್ಪಟ್ಟಿತು)

(ಮತ್ತೆ ಸಭೆಯು ಮಧ್ಯಾಹ್ನ 3.00ಗಂಟೆಗೆ ಪುನರ್ ಸಮಾವೇಶಗೊಂಡಿತು ಸಭಾಧ್ಯಕ್ಷರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಿದ್ದರು)

5. ಪ್ರಮಾಣ ವಚನ ಸ್ವೀಕಾರ

ಶ್ರೀ ರವಿಕಾಂತ ಪಾಟೀಲ್ : ಇಂಡಿ ವಿಧಾನಸಭಾ ಕ್ಷೇತ್ರ

6. ಮಾನ್ಯ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲಿನ ಳ(ಮುಂದು)

ಶ್ರೀ ಸಿ. ಬೈರೇಗೌಡ:- ಮಾನ್ಯ ಅಧ್ಯಕ್ಷರೆ, ಈ ರಾಜ್ಯದ ಮತ್ತು ದೇಶದ ರೈತರ ಪರಿಸ್ಥಿತಿ ಬಗ್ಗೆ ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಯಾವ ರೀತಿಯಾಗಿ ಕೆಲಸ ಮಾಡುತ್ತಿದೆ. ಇವರ ಆದ್ಯತೆ ಏನು ಎಂಬ ಬಗ್ಗೆ ನಾನು ಬಹಳ ಕುತೂಹಲದಿಂದ ನೋಡುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಯವರನ್ನು ಜನರು five-star, elitist, Aristocrat ಎಂದು ಕರೆಯುವಂಥಾದ್ದು ವಾಡಿಕೆ ಇದೆ. ಇವರ ಅಭಿರುಚಿಗೆ ತಕ್ಕಂತೆ ಈ ದೇಶದ ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ಏನು ತಪ್ಪು ಮಾಡಿದ್ದಾರೆಂದರೆ ವ್ಯವಸಾಯವನ್ನು ಬಿಟ್ಟು ಕೈಗಾರಿಕೆಗೆ ಒತ್ತು ಕೊಡುವಂತಹ ತಪ್ಪು ಹಾಗೂ ಅಪರಾಧವಾಗಿದೆ. ಈ ಅಪರಾಧವನ್ನೆ ಮುಂದುವರೆಸಿಕೊಂಡು ಹೋಗುವಂತಹ ಪ್ರಯತ್ನವನ್ನು ಮಾನ್ಯ ಮುಖ್ಯಮಂತ್ರಿಯವರು ಮಾಡುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರು ಟಿ.ವಿ.ಯಲ್ಲಿ ಸಂದರ್ಶನ ನೀಡಿದ್ದನ್ನು ನೋಡಿದೆ. ಅವರು ಏನು ಹೇಳಿದ್ದಾರೆಂದರೆ ಬ್ಯುರೊಕ್ರಾಟ್ಸ್ ಇಂಡಸ್ಟ್ರಿಯಲಿಸ್ಟ್ ಅನ್ನು ಅದರಲ್ಲೂ ಸಾಫ್ಟ್‌ವೇರ್ ಸೆಕ್ಟಾರ್‌ನಲ್ಲಿರುವವರನ್ನು they have hundred reasons not to meet industralists but I will tell them I have thousand reasons to meet them personally,- ಎಂದು ಹೇಳಿದ್ದಾರೆ. but it is most unfortunate, ಒಬ್ಬ ರೈತನಾಗಿ ನಾನು ಹೇಳಬಯಸುತ್ತೇನೆ. ಮಾನ್ಯ ಮುಖ್ಯಮಂತ್ರಿಯವರು ರೈತನನ್ನು ಭೇಟಿ ಮಾಡುತ್ತೇವೆಂದು ಹೇಳಲಿಲ್ಲ. ಅವರು ಇಂಡಸ್ಟ್ರಿಯಲಿಸ್ಟ್ ಅನ್ನು ಭೇಟಿ ಮಾಡುತ್ತೇನೆನ್ನುವಂತಹ ಮಾತನ್ನು ಹೇಳಿದ್ದಾರೆಯೇ ವಿನಃ ರೈತನ ಕಣ್ಣೀರನ್ನು ಒರೆಸುತ್ತೇನೆಂದು ಹೇಳಿಲ್ಲ. ಅವರು ರೈತ ಮನೆತನದವರಾಗಿರುವವರು, ನಾನು ಅವರಿಂದ ಈ ರೀತಿಯಾಗಿ ನಿರೀಕ್ಷೆ ಮಾಡಿರಲಿಲ್ಲ. ಮಾನ್ಯ ಮುಖ್ಯಮಂತ್ರಿಯವರು ಆಲೋಚನೆ, ಚಿಂತನೆ, ಎಲ್ಲವೂ ಈ ರಾಜ್ಯದ, ದೇಶದ ರೈತರ ಬಗ್ಗೆ ಇರಬೇಕಾಗಿತ್ತು. ಆ ದೃಷ್ಟಿಯನ್ನು ಇನ್ನು ಮುಂದಾದರೂ ತಾವು ದಯಮಾಡಿ ಬೆಳೆಸಿಕೊಳ್ಳಬೇಕೆಂದು ಹೇಳುತ್ತೇನೆ. ರೈತರು ಈ ದೇಶಕ್ಕೆ ಅನ್ನ, ಬಟ್ಟೆ ಕೊಡುವಂಥವರು, ಈ ಸಮಾಜವನ್ನು ಸೃಷ್ಟಿ ಮಾಡುವವರಾಗಿದ್ದಾರೆ. ಆದರೂ ಈ 52-53 ವರ್ಷಗಳಿಂದ ಅಭಿವೃದ್ಧಿಯ ಪ್ರತಿಫಲ ಏನಾಗಿದೆ ಎಂದರೆ ಅವನಿಗೆ ಈ ಭೂಮಿಯ ಮೇಲೆ ಜೀವನ ಸಾಕು, ನನ್ನ ಉಸಿರು ಕೊನೆಗೊಳಿಸಬೇಕು, ಈ ಭೂಮಿಯ ಮೇಲೆ ಭಾರವಾಗಿ

ಬದುಕಿರುವಂಥಾದ್ದು ಸರಿಯಲ್ಲವೆಂದು ಅವನು ಆತ್ಮಹತ್ಯೆ ಮಾಡಿಕೊಳ್ಳುವಂಥಾದ್ದು ಈ ರಾಜ್ಯದಲ್ಲಿ ಮಾತ್ರವಲ್ಲ, ದೇಶದಾದ್ಯಂತ ನಡೆಯುತ್ತಿದೆ. ಇದಕ್ಕೆ ಬೇರೆ ಬೇರೆ ಕಾರಣಗಳು ಇರಬಹುದು, ಅದನ್ನು ನಾನು ಆಗಲೇ ಹೇಳಿದ್ದೇನೆ. ಒಟ್ಟಾರೆ ಇವರ ಪರಿಸ್ಥಿತಿ ಏನಾಗಿದೆ ಎಂದರೆ ಇವರು ಆತ್ಮಹತ್ಯೆ ಮಾಡಿಕೊಳ್ಳುವಂತಹ ಆಲೋಚನೆಗೆ ದೂಡಿದೆ, ಅದನ್ನು ಚಿಂತನೆ ಮಾಡುವಂತಹದ್ದು ಅವಶ್ಯಕವಾಗಿದೆ. ತಾವು ಕೈಗಾರಿಕೆಗೆ ಒತ್ತು ಕೊಡಬಾರದೆಂದು ನಾನು ಹೇಳುವುದಿಲ್ಲ, ಈ ಎರಡು ಕ್ಷೇತ್ರಗಳು ಬೆಳೆಯಬೇಕು. ತಾವು ಕೈಗಾರಿಕೆಗೆ ಯಾವ ರೀತಿಯಾಗಿ ಒತ್ತು ಕೊಡುತ್ತೀರಿ, ಕೃಷಿಗೆ ಅದಕ್ಕಿಂತ ಹೆಚ್ಚಿನ ಒತ್ತು ಕೊಡುವಂಥಾದ್ದು ಅತೀ ಅವಶ್ಯಕವೆಂದು ಹೇಳಬಯಸುತ್ತೇನೆ. ದಯಮಾಡಿ ತಾವು ಈ ರೀತಿಯಾಗಿ ಬದಲಾಯಿಸಿಕೊಳ್ಳಬೇಕೆನ್ನುವಂತಹ ಮನವಿಯನ್ನು ತಮ್ಮ ಮೂಲಕ ಮಾನ್ಯ ಮುಖ್ಯ ಮಂತ್ರಿಯವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ವಿದ್ಯುಚ್ಛಕ್ತಿ ವಲಯದಲ್ಲಿ ಪಾರದರ್ಶಕವನ್ನು ತರುತ್ತೇವೆನ್ನುವ ದೃಷ್ಟಿಯಲ್ಲಿ ಖಾಸಗಿ ಬಂಡವಾಳ ಹೂಡಿಕೆದಾರರನ್ನು ಆಕರ್ಷಿಸಲು ಕಾರ್ಯವಿಧಾನವನ್ನು ಸರಳ ಹಾಗೂ ಪಾರದರ್ಶಕಗೊಳಿಸುತ್ತೇವೆನ್ನುವುದನ್ನು ಹೇಳಿದ್ದಾರೆ. ಇದನ್ನೇ ನಾವುಮಾಡಿರುವಂಥಾದ್ದು, ಈ ದೇಶದಲ್ಲಿರುವಂತಹ ಪರಿಸ್ಥಿತಿಯನ್ನು ನಾನು ಇಲ್ಲಿ ಉಲ್ಲೇಖ ಮಾಡುವಂಥಾದ್ದು ಸೂಕ್ತವೆಂದು ಅನಿಸುತ್ತದೆ. ನಾನು ಚೈನಾ ದೇಶಕ್ಕೆ ಎರಡು ಸಾರಿ ಹೋಗಿ ಬಂದಿದ್ದೇನೆ. ಅಲ್ಲಿ ಯಾವುದಾದರೂ ಯೋಜನೆಗೆ ಸರ್ಕಾರದಿಂದ ಮಂಜೂರಾತಿ ಬರಬೇಕೆಂದರೆ ಹದಿನೈದು ದಿವಸಗಳಲ್ಲಿ ಕೊಡುತ್ತಾರೆ. ಅಲ್ಲಿ ಕೆಲವು ಇಂಡಸ್ಟ್ರಿಯಲಿಸ್ಟ್‌ಗಳನ್ನು ಭೇಟಿ ಮಾಡಿದೆವು. ಅಲ್ಲಿ ಪವರ್‌ಗೆ ಎನ್‌ವಿರಾನ್‌ಮೆಂಟ್ ಕ್ಲಿಯರೆನ್ಸ್ ಯಾವ ರೀತಿಯಾಗುತ್ತದೆಂದರೆ ಟೈಮ್ ಟೇಬಲ್ ಪ್ರಕಾರ ಹೋಗುತ್ತಾರೆ. ಅವೆಲ್ಲವನ್ನು 15 ದಿವಸಗಳಲ್ಲಿ ಕೊಡುತ್ತಾರೆಂದು ಅವರು ಹೇಳಿದರು. ಇದು ನಿಜವೋ, ಉತ್ಪ್ರೇಕ್ಷೆಯೋ ಎಂದು ನಾನು ಹೇಳಲಾರೆ. ಈಗ ನಮ್ಮಲ್ಲೆ ಕೊಜೆಂಟ್ರಿಕ್ಸ್ ಯೋಜನೆಯ ಬಗ್ಗೆ ವರ್ಷಾನುಗಟ್ಟಲೆ ಹಿಂದಿನ ಸರ್ಕಾರದಲ್ಲಿ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರಿದ್ದಂತಹ ಕಾಲದಲ್ಲಿ ಪ್ರಯತ್ನವಾಗಿರುವಂಥಾದ್ದು. ನಮ್ಮ ಸರ್ಕಾರ ಬಂದ ಕಾಲದಲ್ಲೂ ಇದು ಆಗಲಿಲ್ಲ. ಈಗ ಇದರ ಬಗ್ಗೆ ಯಾರೋ ಅರ್ಜಿ ಹಾಕಿದರು, ಇದು ಈಗ ನ್ಯಾಯಾಲಯದ ಮುಂದಿದೆ. ಈ ವಿಚಾರವಾಗಿ ಮುಂದಿನ ಕ್ರಮ ತೆಗೆದುಕೊಳ್ಳಬಾರದೆಂದು ತಡೆಯಾಜ್ಞೆ ಇರುವ ಕಾರಣ ಹಾಗೆ ನಿಂತಿದೆ. ಈ ವಿದ್ಯುಚ್ಛಕ್ತಿ ಇಲ್ಲವೆಂದರೆ ನಾವು ಏನನ್ನು ಸಾಧನೆ ಮಾಡುವುದಕ್ಕಾಗುವುದಿಲ್ಲ. ಇವತ್ತಿನ ದಿವಸ ಅದು ವ್ಯವಸಾಯಕ್ಕೆ ಬೇಕೆ ಬೇಕು, ಶೇ. 42ರಷ್ಟು ವಿದ್ಯುತ್ತನ್ನು ಬಳಸುತ್ತಿದ್ದಾರೆ. ಅದು ಯಾವ ರೀತಿಯಾಗಿ ಎಂದು ವಿವರವಾಗಿ ನಾನು ಹೇಳುವುದಕ್ಕೆ ಹೋಗುವುದಿಲ್ಲ. ನಾವು ಪ್ರಯತ್ನ ಮಾಡಲಿಲ್ಲವೆಂದು ಹೇಳುವುದಿಲ್ಲ, ನಾವು ಎಲ್ಲಾ ಪ್ರಯತ್ನವನ್ನು ಈ ವಿದ್ಯುಚ್ಛಕ್ತಿಯನ್ನು ಅಭಿವೃದ್ಧಿ ಪಡಿಸಬೇಕು, ಬಲಪಡಿಸಬೇಕೆಂದು ತೀವ್ರವಾದಂತಹ ಪ್ರಯತ್ನವನ್ನು ಮಾಡಿದ್ದೆವು.

ಆದರೆ ಕೆಲವು ಕಾರಣಗಳಿಂದ ಈ ಪ್ರಯತ್ನಕ್ಕೆ ತಕ್ಕ ಪ್ರತಿಫಲ ದೊರೆಯಲಿಲ್ಲ. ಇದರ ಬಗ್ಗೆ ಇವತ್ತು ನೀವಾದರೂ ಯಶಸ್ಸನ್ನು ಸಾಧಿಸಬೇಕೆಂಬುದು ನನ್ನ ಬಯಕೆ ಎಂದು ನಾನು ಹೇಳಬಯಸುತ್ತೇನೆ. ಇನ್ನು ರಾಜ್ಯಪಾಲರ ಭಾಷಣದಲ್ಲಿ ತಾವು ಇವೆಲ್ಲವನ್ನು ಸಾಧಿಸಬೇಕೆಂದರೆ ರಾಜ್ಯದ ಆಡಳಿತವನ್ನು ಆಧುನೀಕರಣಗೊಳಿಸಲು ವ್ಯಾಪಕವಾಗಿ ಗಣಕೀಕರಣಗೊಳಿಸಬೇಕೆಂದು ಹೇಳಿದ್ದಾರೆ. ತಾವು ಎಲ್ಲವನ್ನು ಗಣಕೀಕರಣದಿಂದಲೇ ಸಾಧಿಸುತ್ತೇವೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಈ ಗಣಕೀಕರಣ ಯಂತ್ರದ ಮುಂದೆ ಕುಳಿತುಕೊಳ್ಳುವವರ ರಿಪೇರಿಯಾಗಬೇಕು. ಈ ವಿಲೇಜ್ ಅಕೌಂಟೆಂಟ್, ಗ್ರಾಮ ಪಂಚಾಯತ್ ಕಾರ್ಯದರ್ಶಿಗಳು, ರೆವಿನ್ಯೂ ಇನ್‌ಸ್ಪೆಕ್ಟರ್‌ಗಳು, ಇವರು ಸ್ಥಳದಲ್ಲಿ ಇದ್ದು ಕೆಲಸ ಮಾಡುವಂತೆ ಆಗಬೇಕು. ಇದಕ್ಕೆ ಯಾವ ಗಣಕೀಕರಣ ಯಂತ್ರವೂ ಬೇಕಾಗಿಲ್ಲ. ಈ ಗಣಕೀಕರಣ ಯಂತ್ರ ಬೆಳಕಿಗೆ ಬರಬೇಕು, ಇದನ್ನು ನಾನು ವಿರೋಧ ಮಾಡುತ್ತಿಲ್ಲ, ಇದು ಖಂಡಿತವಾಗಿ ಆಗಲೇ ಬೇಕು. ಈ ಸ್ಥಳದಲ್ಲಿರುವವರು ಸಾರ್ವಜನಿಕರು ಬಂದಂತಹ ಕಾಲದಲ್ಲಿ ಇವರಿಗೆ ಆ ವ್ಯಕ್ತಿಗಳು ಸಿಗಬೇಕು. ಸಾರ್ವಜನಿಕರು ಏನು ಹೇಳುತ್ತಾರೆಂಬುದನ್ನು ಇವರು ಕೇಳುವುದಕ್ಕೆ ತಯಾರು ಇರಬೇಕು. ನಾವು ಕೂಡ ಈ ವಿಷಯವಾಗಿ ಪ್ರಯತ್ನ ಮಾಡಿದೆವು. ಆದರಲ್ಲಿ ಪೂರ್ತಿಯಾಗಿ ನಾವು ಸಫಲವಾಗಲಿಲ್ಲ. ಆದುದರಿಂದ ನೀವಾದರೂ ಇದನ್ನು ಮಾಡಿ ಆ ಸಫಲತೆಯನ್ನು ದಯಮಾಡಿ ಜನತೆಗೆ ಒದಗಿಸಬೇಕೆಂದು ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೆ, ಇನ್ನು ಅವರ ಪ್ರಣಾಳಿಕೆಯಲ್ಲಿ ನೀರಾವರಿಯ ಬಗ್ಗೆ ಬಹಳಷ್ಟು ಹೇಳಿದ್ದಾರೆ. ಬಚಾವತ್ "ಬಿ" ಸ್ಕೀಂ ಪ್ರಕಾರ ಕೆಲವು ಜಿಲ್ಲೆಗಳಿಗೆ ನೀರನ್ನು ಕೊಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಆದರಲ್ಲೂ ಮುಖ್ಯವಾಗಿ, ಸದಾ ಬರಗಾಲಪೀಡಿತ ಜಿಲ್ಲೆಗಳಾದ ಕೋಲಾರ, ತುಮಕೂರು, ಚಿತ್ರದುರ್ಗಾ ಮತ್ತು ಬಳ್ಳಾರಿ ಜಿಲ್ಲೆಗಳ ಬಗ್ಗೆ ನಾವು ಇದನ್ನು ಪರಿಶೀಲನೆ ಮಾಡಿ ಒಂದು ಸರ್ಕಾರಿ ಆಜ್ಞೆಯನ್ನು ಮಾಡಿ, ಇದನ್ನು ಇನ್ವೆಸ್ಟಿಗೇಷನ್ ಮತ್ತೊಂದು ಮಾಡಬೇಕಾಗುತ್ತದೆನ್ನುವ ಒಂದು ತೀರ್ಮಾನವನ್ನು ನಾವು ತೆಗೆದುಕೊಂಡಿದ್ದೇವೆ. ಅವರು ಪ್ರಣಾಳಿಕೆಯಲ್ಲಿ ಆ ಬಗ್ಗೆ ಒತ್ತುಕೊಡುತ್ತೇವೆಂದು ಹೇಳಿದ್ದಾರೆ. ಬಚಾವತ್ (ಆಯೋಗದ (ಬಿ) ಸ್ಕೀಂಗೆ ಅನುಗುಣವಾಗಿ ಮರು ಹಂಚಿಕೆಯಾಗುವ ನೀರನ್ನು ಪದೇ ಪದೇ ಬರಗಾಲಕ್ಕೆ ತುತ್ತಾಗುತ್ತಿರುವ ಪ್ರದೇಶಗಳಾದ ಬಳ್ಳಾರಿ, ಚಿತ್ರದುರ್ಗಾ, ಕೋಲಾರ ಹಾಗೂ ತುಮಕೂರು ಅಕ್ಕಪಕ್ಕದ ಪ್ರದೇಶಗಳಿಗೆ ಹಂಚಲು ಸೂಕ್ತ ಯೋಜನೆಗಳನ್ನು ರೂಪಿಸಲಾಗುವುದು. ಇದರಿಂದಾಗಿ ಈ ಪ್ರದೇಶದ ರೈತರ ಸ್ಥಿತಿ ಉತ್ತಮಗೊಳ್ಳುವುದಲ್ಲದೆ ಹೆಚ್ಚಿನ ಆಹಾರೋತ್ಪಾದನೆಯನ್ನು ಸಾಧಿಸಲಾಗುವುದು ಎಂದು ಪ್ರಣಾಳಿಕೆಯಲ್ಲಿ ಹೇಳಿದ್ದಾರೆ. ನಾನು ಮಾನ್ಯ ರಾಜ್ಯಪಾಲರ ಭಾಷಣದ ಪ್ರತಿಯನ್ನು ಮೊದಲನೇ ಪುಟದಿಂದ ಕೊನೆಯಪುಟಕ್ಕೆ ಕೊನೆಯ ಪುಟದಿಂದ ಮೊದಲನೇ ಪುಟಕ್ಕೆ ಸುಮಾರು ಹತ್ತುಸಾರಿ ತಿರುಗಿಸಿ ಈ "ಬಿ" ಸ್ಕೀಂ ವಿಚಾರವೇನಾದರೂ ಇದೆಯೇ ಎಂದು ನೋಡಿದ್ದೇನೆ, ಕೃಷ್ಣಾ-ಕಾವೇರಿ ಎನ್ನುವುದು

ಬಿಟ್ಟರೆ "ಬಿ" ಸ್ಕೀಂ ನಲ್ಲಿ ಇದರ ಬಗ್ಗೆ ಒಂದು ಚಕಾರವನ್ನು ಕೂಡ ಎತ್ತಿಲ್ಲ. ಅಷ್ಟೇ ಅಲ್ಲದೆ, ಪ್ರಣಾಳಿಕೆಯಲ್ಲಿ ಹೇಳಿರುವುದೇನೆಂದರೆ ನಮ್ಮ ರಾಜ್ಯದ ಪಶ್ಚಿಮ ದಿಕ್ಕಿಗೆ ಹರಿಯುತ್ತಿರುವ ನದಿಗಳನ್ನು ಪೂರ್ವದಿಕ್ಕಿಗೆ ಹರಿಯುವಂತೆ ಮಾಡಲು ಪ್ರಯತ್ನ ಪಡುತ್ತೇವೆ ಎಂದು ಕೂಡ ಹೇಳಿದ್ದಾರೆ. ಅದರಿಂದ ರಾಜ್ಯದ ಪ್ರತಿಯೊಂದು ಅಂಗುಲವನ್ನು ಕೂಡ ಈ ಡ್ರೈ ವರ್ಷನ್‌ನಿಂದ ನೀರಾವರಿಗೊಳಿಸಲು ಸಾಧ್ಯವಾಗುತ್ತದೆ, ಅದರ ಬಗ್ಗೆ ಕೂಡ ಎಲ್ಲಿಯೂ ಚಕಾರವನ್ನು ಎತ್ತಿಲ್ಲ. ನಾನು ಅದಕೋಸ್ಕರ ಪ್ರಾರಂಭದಲ್ಲಿ ಹೇಳಿದ್ದೇನೆಂದರೆ,ಇಷ್ಟು ಬೇಗ ನಿಮಗೇಕೆ ಮರವು ಬಂತು? ಪ್ರಣಾಳಿಕೆಯಲ್ಲಿ ಇದನ್ನು ಜನತೆಯ ಮುಂದೆ ಇಟ್ಟಿದ್ದೀರಿ, ಇದನ್ನು ಜನ ಮೆಚ್ಚಿ ಒಪ್ಪಿದ್ದಾರೆ; ಅವರು ಒಪ್ಪಿದ್ದು ಸರಿಯೋ ತಪ್ಪೋ, ನಮ್ಮ ಪ್ರಕಾರ ಅದು ತಪ್ಪು, ನಿಮ್ಮ ಪ್ರಕಾರ ಅದು ಸರಿಯಾಯಿತು, ನಿಮ್ಮ ಹದ್ದುಬಸ್ತಿನಲ್ಲಿ ನಿಮಗೆ ಓಟು ಕೊಟ್ಟಿದ್ದಾರೆ, ಆದರೆ ನೀವು ಇಷ್ಟು ಬೇಗ ಮರೆತಿದ್ದೀರಲ್ಲ? ನೀವು ಬಚಾವತ್ ತೀರ್ಪಿನ ಪ್ರಕಾರ "ಬಿ" ಸ್ಕೀಂ ಬಗ್ಗೆ ಪ್ರಣಾಳಿಕೆಯಲ್ಲಿ, ಪಶ್ಚಿಮಕ್ಕೆ ಹರಿಯುವ ನದಿಗಳ ನೀರನ್ನು ಪೂರ್ವಕ್ಕೆ ತಿರುಗಿಸುತ್ತೇವೆಂದು ಹೇಳಿದ್ದೀರಿ. ನಾನು ಮಾನ್ಯ ರಾಜ್ಯಪಾಲರ ಭಾಷಣವನ್ನು ಪರಿಶೀಲಿಸಿದಾಗ ಎಲ್ಲೂ ಕೂಡ ಇದರ ಬಗ್ಗೆ ಚಕಾರವನ್ನು ಎತ್ತಿಲ್ಲ. ನೀವು ಪ್ರಣಾಳಿಕೆಯಲ್ಲಿ ತಾವೇನು ಹೇಳಿದ್ದೀರಿ ಅದನ್ನು ಇಷ್ಟು ಬೇಗ ಮರೆಯಬಾರದಾಗಿತ್ತು. ಆಗಲೇ ಶ್ರೀ ರಂಗನಾಥ್ ಹಾಗೂ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ನಾವು ಅಧಿಕಾರಕ್ಕೆ ಬಂದು ಇನ್ನೂ ಮೂವತ್ತು ದಿವಸವಾಗಿಲ್ಲ, ಇಷ್ಟು ಬೇಗ ನಮ್ಮನ್ನು ಸುತ್ತುವರಿದರೆ ಹೇಗೆ ಎನ್ನುವ ಮಾತನ್ನು ಕೂಡ ಹೇಳಿದರು. ಇದನ್ನು ನಾಳೆಯೇ ಮಾಡಿಬಿಡಿ ಎನ್ನುವುದಿಲ್ಲ, ಆದರೆ ಆ ದಿಕ್ಕಿನಲ್ಲಿ ತಾವು ಆಲೋಚನೆ ಮಾಡಬೇಕಾಗಿತ್ತು, ಆ ಆಲೋಚನೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಇಲ್ಲವೆಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

ಶ್ರೀ ವೈ.ಕೆ. ರಾಮಯ್ಯ:- ನಮ್ಮ ಪ್ರಣಾಳಿಕೆಯಲ್ಲಿ ಬಚಾವತ್ ಅವಾರ್ಡಿನ "ಬಿ" ಸ್ಕೀಂನ ನೀರಿನ ವಿತರಣೆಯ ಬಗ್ಗೆ ನಾವು ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಅದನ್ನು ಕೈಬಿಟ್ಟು ಲೋಪವನ್ನು ಮಾಡಿದ್ದಾರೆನ್ನುವ ವಾದವನ್ನು ಒಪ್ಪಿದರೂ ಕೂಡ ಅದು ಮುಂದಿನದು. ತಮ್ಮ ಸರ್ಕಾರವಿದ್ದಾಗ "ಎ" ಸ್ಕೀಂನ ನೀರಿನ ಬಗ್ಗೆ ಏನು ಮಾಡಿದ್ದೀರೆಂದು ಈ ಸದನದ ಮುಖಾಂತರ ರಾಜ್ಯದ ಜನತೆಗೆ ನಾನು ಸ್ವಲ್ಪ ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಪಡುತ್ತೇನೆ. ಬಚಾವತ್ ತೀರ್ಪಿನ ಪ್ರಕಾರ "ಎ" ಸ್ಕೀಂನಲ್ಲಿ ಕರ್ನಾಟಕ ರಾಜ್ಯಕ್ಕೆ ಬರಬೇಕಾದ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ತಮ್ಮ ಸರ್ಕಾರ ಏನು ಮಾಡಿತು ಎನ್ನುವುದರ ಬಗ್ಗೆ ನಾನು ತಮ್ಮ ಮುಖಾಂತರ ತಿಳಿದುಕೊಳ್ಳುವುದಕ್ಕೆ ಇಷ್ಟಪಡುತ್ತೇನೆ; ಸುಪ್ರೀಂ ಕೋರ್ಟಿಗೆ ಅರ್ಜಿ ಹಾಕಿದ್ದೀರಿ.

ಶ್ರೀ ಸಿ. ಬೈರೇಗೌಡ:- ಆ ವಿವರವನ್ನು ಬೇರೆ ಸಂದರ್ಭದಲ್ಲಿ ಹೇಳುತ್ತೇನೆ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರ ಮಾನ್ಯ ಯಡಿಯುರಪ್ಪ, ಇತರರೆಲ್ಲಾ ಮಾತನಾಡಿರುವ

ಕೊನೆ ಅಧಿವೇಶನದ ಕೊನೆಯ ದಿವಸದ ಭಾಷಣವಿದೆ. ಬಹುಶಃ ಅದು ಈಗಾಗಲೇ ಅಚ್ಚಾಗಿರಬಹುದು, ಅದರಲ್ಲಿ ನಿಮ್ಮ ಪ್ರಭಾವಿ ಮಂತ್ರಿಗಳು ಮಾತನಾಡಿರುವುದಿರುತ್ತದೆ, ಅದರಲ್ಲಿ ನಿಮ್ಮ ಪ್ರಶ್ನೆಗೆ ಉತ್ತರ ಸಿಗುತ್ತದೆನ್ನುವ ನಂಬಿಕೆ ನನ್ನದಾಗಿದೆ.

ಶ್ರೀ ವೈ.ಕೆ. ರಾಮಯ್ಯ:- "ಎ" ಸ್ಕೀಂನ ನೀರನ್ನು ಉಪಯೋಗಿಸಿಕೊಳ್ಳಲು ಸಾಧ್ಯವಾಗಿಲ್ಲವೆಂದು ಸುಪ್ರೀಂ ಕೋರ್ಟ್‌ಗೆ ನಿಮ್ಮ ಸರ್ಕಾರ ಅಫಿಡಿವೇಟ್ ಹಾಕಿರುವುದು ನಿಜವೇ, ಸುಳ್ಳೆ ಆ ರೀತಿ ನಿಜವಾಗಿದ್ದರೆ ಕರ್ನಾಟಕದ ಕೃಷ್ಣಾ ಕೊಳ್ಳದ ಜನರ ಮೇಲೆ ಚಪ್ಪಡಿಯನ್ನು ಎಳೆದಂತಹ ಪಾಪ ನಿಮ್ಮದು.

ಶ್ರೀ ಸಿ. ಬೈರೇಗೌಡ:- ನೀವು ಹೇಳಿದ್ದನ್ನೆಲ್ಲಾ ಮಾಡಿದ್ದಕ್ಕೆ ನಾವು ಇಲ್ಲಿ ಬಂದು ಕುಳಿತಿದ್ದೇವೆ, ಈ ಕಡೆ ಕುಳಿತಿದ್ದವರು ನೀವು ಆ ಕಡೆ ಕುಳಿತಿದ್ದೀರಿ, ಈಗ ಅದನ್ನು ನೀವು ಮಾಡಿ ಎಂದು ಹೇಳುತ್ತಿದ್ದೇವೆ. ಆಡಳಿತವನ್ನು ಚುರುಕುಗೊಳಿಸುವುದು, ಭ್ರಷ್ಟಾಚಾರ ರಹಿತ ಆಡಳಿತವನ್ನು ನೀಡುವುದು ಬಹಳ ಮುಖ್ಯವಾದುದು. ಇವತ್ತು ಈ ದೇಶವನ್ನು ಬಹಳವಾಗಿ ಕಾಡುತ್ತಿರುವ ಹಾಗೂ ಬಹಳ ಭೀಕರವಾದ ಸಮಸ್ಯೆ ಎಂದರೆ ಭ್ರಷ್ಟಾಚಾರ. ಭ್ರಷ್ಟಾಚಾರದಲ್ಲಿ, ಅದರಲ್ಲೂ ಅಧಿಕಾರಿಗಳ ಮಟ್ಟದಲ್ಲಿ ಅಫಿಷಿಯಲ್ ಕರಪ್ಷನ್ ಮತ್ತು ಪೊಲಿಟಿಕಲ್ ಕರಪ್ಷನ್. ಈ ಇವೆರಡು ಇವತ್ತು ಈ ದೇಶವನ್ನು ಭೀಕರವಾಗಿ ಕಿತ್ತು ತಿನ್ನುತ್ತಿರುವ ಸಮಸ್ಯೆಯಾಗಿದೆ. ಒಂದು ಕಡೆ ಈ ಬಗ್ಗೆ ನೀವು ಪ್ರಸ್ತಾಪ ಮಾಡಿದ್ದೀರಿ. ಆದರೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಏನು ಹೇಳಿದ್ದಾರೆಂದು ತೆಗೆದು ನೋಡಿದರೆ, ಪ್ರಣಾಳಿಕೆ ಹಾಗೂ ರಾಜ್ಯಪಾಲರ ಭಾಷಣವನ್ನು ನಾಲ್ಕೈದು ಸಾರಿ ಓದಿ ನೋಡಿದೆ, ಎಲ್ಲೂ ಕೂಡ ಈ ಬಗ್ಗೆ ಉತ್ತರ ಸಿಕ್ಕಿಲ್ಲ, ಒಂದು ಉಲ್ಲೇಖ ಕೂಡ ಇಲ್ಲ. ಆದಕ್ಕೆ ತಾವು ಹೇಳುವುದೇನೆಂದರೆ, ಆಡಳಿತ ಸುಧಾರಣೆಗೆ ಕಂಪ್ಯೂಟರೀಕರಣ; ಆದರೆ ಗಣಕಯಂತ್ರದ ಮುಂದೆ ಕುಳಿತುಕೊಳ್ಳುವುದು, ರಾಜಕಾರಣಿ ಇರಬಹುದು, ಅಧಿಕಾರಿ ಇರಬಹುದು, ಅವರು ತಮ್ಮ ಕೈಚಳಕವನ್ನು ತೋರಿಸುತ್ತಾರಲ್ಲ, ಅವರನ್ನು ಏನು ಮಾಡುತ್ತೀರಿ? ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಈ ಸಂದರ್ಭದಲ್ಲಿ ನಾನು ಒಂದನ್ನು ಉಲ್ಲೇಖ ಮಾಡುವುದು ಸೂಕ್ತವೆಂದು ಕಾಣುತ್ತದೆ. ಮಾನ್ಯ ಮುಖ್ಯಮಂತ್ರಿಗಳಾದ ಕೃಷ್ಣಾರವರು ಬಹಳ ಎತ್ತರಕ್ಕೆ ಹೋಗಬೇಕೆಂದು ನಾನು ನಿರೀಕ್ಷೆ ಮಾಡಿದ್ದೆ. ಮಾನ್ಯ ಎನ್.ಟಿ. ರಾಮರಾವ್‌ರವರು ಎರಡನೇ ಸಾರಿ ಮುಖ್ಯಮಂತ್ರಿಗಳಾದ ಮೇಲೆ ಮೊದಲನೆ ಸಹಿ ಏತಕ್ಕೆ ಹಾಕಿದ್ದರೆಂದರೆ ಆಂಧ್ರಪ್ರದೇಶದಲ್ಲಿ ಪಾನನಿಷೇಧವನ್ನು ಜಾರಿಗೆ ತರುವುದಕ್ಕೆ ಅದು ಸರಿಯೋ ತಪ್ಪೋ ಅದು ಬೇರೆ ವಿಚಾರ; ಅಂತಹ ಕ್ರಮವನ್ನು ಈ ನಮ್ಮ ಮಾನ್ಯ ಮುಖ್ಯಮಂತ್ರಿಗಳು ತೆಗೆದುಕೊಳ್ಳುತ್ತಾರೆ ಎಂದು ನಾವು ನಿರೀಕ್ಷೆ ಮಾಡಿದ್ದೆವು. ಏಕೆಂದರೆ ಅವರಿಗೆ ಅಪಾರವಾದ ಅನುಭವವಿದೆ, ಲೋಕಸಭೆಯಲ್ಲಿ ಕೆಲಸ ಮಾಡಿದ್ದಾರೆ, ಕೇಂದ್ರದಲ್ಲಿ ಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ, ವಿದೇಶದಲ್ಲಿ ವ್ಯಾಸಂಗ ಮಾಡಿದ್ದಾರೆ, ಅನೇಕ ಸಾರಿ ಪ್ರಪಂಚವನ್ನು ಸುತ್ತಾಡಿದ್ದಾರೆ,

ಎಲ್ಲಾ ಸಂವಿಧಾನಿಕ ಸಂಸ್ಥೆಗಳಲ್ಲಿ ಕೆಲಸ ಮಾಡುವ ಎಲ್ಲಾ ಅವಕಾಶವನ್ನು ಹೊಂದಿದವರು, ಈ ಅನುಭವದ ಆಧಾರದ ಮೇಲೆ, ಇವರು ಆಡಳಿತ ಸುಧಾರಣೆ ಮಾಡುವ ನಿಟ್ಟಿನಲ್ಲಿ, ಈ ದೇಶದಲ್ಲಿ ಕಾಡುತ್ತಿರುವ ಭ್ರಷ್ಟಾಚಾರದ ವಿಚಾರದಲ್ಲಿ ನಾವು ಇಂತಿಂಥ ದಿಟ್ಟ ಕ್ರಮಗಳನ್ನು ಅವರು ಅಧಿಕಾರಿಗಳಿರಬಹುದು, ರಾಜಕಾರಣಿಗಳಿರಬಹುದು, ಅವರ ಮೇಲೆ ತೆಗೆದುಕೊಳ್ಳುತ್ತೇವೆ ಎನ್ನುವ ಒಂದು ವಾಕ್ಯವಾದರೂ ಇದರಲ್ಲಿ ಇದ್ದಿದ್ದರೆ ನಾನಾದರೂ, ತೃಪ್ತಿ ಪಡುತ್ತಿದ್ದೆ. ದುರಾದೃಷ್ಟವಶಾತ್ ಅದರ ಪ್ರಸ್ತಾಪ ಇಲ್ಲವೆನ್ನುವ ಮಾತನ್ನು ಬಹಳ ದುಃಖದಿಂದ ಹೇಳಬೇಕಾಗಿದೆ. ನೀವು ಎಷ್ಟೇ ಜಗ್ಗಾಡಿದರೂ ಕೂಡ ಇನ್ನು ಐದು ವರ್ಷಗಳ ಕಾಲ ಅಧಿಕಾರದಲ್ಲಿ ಇರುತ್ತೀರಿ; ಇದೇನು ಕೊನೆಯಲ್ಲ. ಮುಂದೆ ಯಾವಾಗ ಅಧಿವೇಶನವನ್ನು ಕರೆಯುತ್ತೀರೊ ಗೊತ್ತಿಲ್ಲ. ಮುಂದಾದರೂ ಜನರಿಗೆ ತಿಂಗಳಲ್ಲಿ ಅಧಿವೇಶನ ಕರೆದಾಗಲಾದರು ನಿಮ್ಮ ಪ್ರಣಾಳಿಕೆಯಲ್ಲಿರುವುದನ್ನು, ನಿಮಗೆ ಪ್ರತಿಯೊಬ್ಬರಿಗೂ ಇರುವ ಅಪಾರವಾದ ಅನುಭವದ ಸಾರವನ್ನು ಮಾನ್ಯ ರಾಜ್ಯಪಾಲರ ಭಾಷಣ ಮತ್ತು ಆಯವ್ಯಯದಲ್ಲೂ ಕೂಡ ಎದ್ದು ಕಾಣುವ ರೀತಿಯಲ್ಲಿ ಮಂಡಿಸುತ್ತೀರಿ ಎನ್ನುವ ನಂಬಿಕೆ ನನ್ನದಾಗಿದೆ. ಈ ಭ್ರಷ್ಟಾಚಾರದ ಬಗ್ಗೆ ಮಾತನಾಡುತ್ತಾ, ಈ ಭ್ರಷ್ಟಾಚಾರ ಎಲ್ಲಿ ಅಡಗಿದೆ? ರಾಜಕಾರಣಿಗಳಲ್ಲಿ ಅದು ನಾನಾ ಕಾರಣ ನಾನಾ ರೀತಿಯಲ್ಲಿ ಇರುತ್ತದೆ, ಅದರ ಬಗ್ಗೆಯು ಆಮೇಲೆ ಸ್ವಲ್ಪ ಹೊತ್ತು ಮಾತನಾಡೋಣ. ಇವತ್ತು ಸರ್ಕಾರದಲ್ಲಿ ನೇಮಕ ಮಾಡಿಕೊಳ್ಳತಕ್ಕಂಥ ಸಂದರ್ಭದಲ್ಲಿ ಅಪಾರವಾದಂಥ ಭ್ರಷ್ಟಾಚಾರ ನಡೆಯುತ್ತಿದೆ. ಅದನ್ನು ತೊಡೆಯತಕ್ಕಂಥ ಕೆಲಸಕ್ಕಾಗಿ ನಾವು ನಮ್ಮ ಸರ್ಕಾರದಲ್ಲಿ ಅನೇಕ ಕ್ರಮಗಳನ್ನು ತೆಗೆದುಕೊಂಡಿದ್ದೆವು. ಸುಮಾರು ಒಂದೂಕಾಲು ಲಕ್ಷ ಪ್ರಾಥಮಿಕ ಶಾಲಾ ಮತ್ತು ಪ್ರೌಢಶಾಲಾ ಉಪಾಧ್ಯಾಯರನ್ನು ನೇಮಿಸತಕ್ಕಂಥದ್ದರಲ್ಲಿ ಒಂದು ನಯಾಪೈಸೆಯ ಭ್ರಷ್ಟಾಚಾರಕ್ಕೂ ಕೂಡ ಅವಕಾಶವಿಲ್ಲದ ರೀತಿಯಲ್ಲಿ, ಕೇವಲ ಮೆರಿಟ್ ಆಧಾರದ ಮೇಲೆಯೇ ನೇಮಕಾತಿ ಮಾಡಬೇಕು ಎನ್ನುವ ತೀರ್ಮಾನವನ್ನು ನಾವು ತೆಗೆದುಕೊಂಡು ಅದರಂತೆ ಮಾಡಿದೆವು. ಅದು ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಗಳು ಇರಬಹುದು ಅಥವಾ ಬೇರೆ ಬೇರೆ ಹುದ್ದೆಗಳನ್ನು ನೇಮಕ ಮಾಡತಕ್ಕಂಥಾದ್ದರಲ್ಲಿ ಕೂಡ ನಾವು ಆ ಕ್ರಮವನ್ನು ಅನುಸರಿಸಿದ್ದೇವೆ. ನಮ್ಮ ಸರ್ಕಾರ ಇದ್ದಂಥ ಕಾಲದಲ್ಲಿ ಸಚಿವಸಂಪುಟದ ಒಂದು ಉಪಸಮಿತಿಯನ್ನು ಕೂಡ ರಚನೆ ಮಾಡಿದ್ದೆವು. ಸರ್ಕಾರದ ಹುದ್ದೆಗಳಿಗೆ ನೇಮಕಾತಿ ಮಾಡತಕ್ಕಂಥ ಸಂದರ್ಭದಲ್ಲಿ ನಡೆಯುವ ಇಂಟರ್‌ವ್ಯೂಗಳಲ್ಲೇ ಭ್ರಷ್ಟಾಚಾರ ನಡೆಯತಕ್ಕಂಥಾದ್ದು. ಬಹಳ ಕಹಿ ಅನುಭವಗಳು ನನ್ನವು ಇವೆ. ಒಂದು ಸಂಸ್ಥೆಯಲ್ಲಿ ಇಂಟರ್‌ವ್ಯೂಗೆ 100 ಮಾರ್ಕ್ಸ್ ಇದ್ದರೆ ಕೆಲವು ಅಭ್ಯರ್ಥಿಗಳಿಗೆ 100 ಮಾರ್ಕ್ಸ್‌ಗೆ 98 ಕೊಟ್ಟಿದ್ದರೆ, ಇನ್ನು ಕೆಲವು ಅಭ್ಯರ್ಥಿಗಳಿಗೆ ಕೇವಲ 5 ಮಾರ್ಕ್ಸ್ ಕೊಡುವಂಥಾದ್ದು ಇವೆಲ್ಲವೂ ನಡೆಯುತ್ತಿದೆ. ಇದಕ್ಕೆ ಅವಕಾಶ ಇರಕೂಡದು ಇನ್ನತಕ್ಕಂಥ ರೀತಿಯಲ್ಲಿ ನಮ್ಮ ರೆಕ್ರೂಟ್‌ಮೆಂಟ್ ರೂಲ್ಸನ್ನು ಬದಲಾವಣೆ ಮಾಡಬೇಕು ಎನ್ನುವ ಬಗ್ಗೆ ಆಲೋಚನೆ ನಡೆದು

ಅದಕ್ಕೆ ಸಚಿವ ಸಂಪುಟದ ಒಂದು ಉಪ ಸಮಿತಿಯನ್ನು ನಾವು ರಚನೆ ಮಾಡಿದ್ದೆವು. ಪೂರ್ತಿಯಾಗಿ ಅದರ ವರದಿಯನ್ನು ಕೊಡಲು ಸಾಧ್ಯವಾಗಲಿಲ್ಲ. ನೀವು ನಿಮ್ಮ ಪ್ರಣಾಳಿಕೆಯಲ್ಲಿ ಹೇಳಿರತಕ್ಕಂಥಾದನ್ನು ಕಾರ್ಯರೂಪಕ್ಕೆ ತರಬೇಕಾಗಿರತಕ್ಕಂಥಾದ್ದು ನಿಮ್ಮ ಮೊದಲನೇ ಕರ್ತವ್ಯ. ಈ ಕರ್ತವ್ಯವನ್ನು ನೀವು ನಿರ್ವಹಿಸುವಂಥ ಕಾಲದಲ್ಲಿ ಭ್ರಷ್ಟಾಚಾರವನ್ನು ಮೂಲದಲ್ಲೇ ಅಡಗಿಸತಕ್ಕಂಥಾದ್ದಕ್ಕೆ ಸಾಧ್ಯವಿದೆ. ಇಲಾಖೆಯ ಸೇವೆಗೆ ಹೆಜ್ಜೆ ಇಡುವಾಗಲೇ ಒಂದು ಲಕ್ಷ, ಎರಡು ಲಕ್ಷ, ಐದು ಲಕ್ಷ ಕೊಟ್ಟು ಬಂದಂಥವನು ಕೋಟಿಗಟ್ಟಲೆ ಸಂಪಾದನೆ ಮಾಡಬೇಕು ಎಂದು ಮುಂದಾಗುತ್ತಾನೆ. ಅದಕ್ಕಾಗಿ ಎಷ್ಟು ಬೇಕಾದರೂ ಹಣ ಖರ್ಚು ಮಾಡಲು ಅವನು ಮುಂದಾಗುತ್ತಾನೆ. ಭ್ರಷ್ಟಾಚಾರಕ್ಕೆ ಅಲ್ಲೇ ಅವಕಾಶ ಇಲ್ಲದಿದ್ದರೆ ಕೊನೆಯ ಪಕ್ಷ ಅಷ್ಟರಮಟ್ಟಿಗಾದರೂ ಭ್ರಷ್ಟಾಚಾರವನ್ನು ತಡೆಗಟ್ಟತಕ್ಕಂಥಾದ್ದು ಆಗುತ್ತದೆ. ಅದು ಪೂರ್ತಿಯಾಗಿ ಹೋಗುತ್ತದೆ ಎನ್ನುವ ನಂಬಿಕೆ ನನಗೂ ಕೂಡ ಇಲ್ಲ. ಏಕೆಂದರೆ ಈ ಸಮಾಜದ ರಚನೆ, ನಮ್ಮ ಆಚಾರವಿಚಾರಗಳು, ಈ ಸಮಾಜದಲ್ಲಿರತಕ್ಕಂಥ ಓರೆಕೋರೆಗಳೆಲ್ಲವನ್ನೂ ತಿದ್ದತಕ್ಕಂಥ ಮಹಾತ್ಮರು ಯಾರಾದರೂ ಆಗುತ್ತಾರೆ ಎನ್ನುವ ನಂಬಿಕೆ ನನಗಿಲ್ಲ. ಆದರೂ ಕೂಡ ಆ ದಿಕ್ಕಿನಲ್ಲಿ ಪ್ರಯತ್ನ ನಡೆಸಬೇಕಾಗಿರತಕ್ಕಂಥಾದ್ದು ಅತಿ ಅವಶ್ಯಕ. ಆ ಪ್ರಯತ್ನ ನಡೆಸತಕ್ಕಂಥ ಕಾಲದಲ್ಲಿ ಈ ರೀತಿಯಾದಂಥ ಕ್ರಮಗಳನ್ನು, ಎಲ್ಲಿ ಭ್ರಷ್ಟಾಚಾರದಿಂದ ಪ್ರವೇಶ ಪಡೆಯುತ್ತಾರೆ, ಆ ಪ್ರದೇಶದ ಹಂತದಲ್ಲಿಯೇ ತೊಡೆದುಹಾಕತಕ್ಕಂಥಾದ್ದಕ್ಕೆ ತಾವು ಪ್ರಯತ್ನಪಟ್ಟರೆ ಅದು ಸ್ವಲ್ಪಮಟ್ಟಿಗಾದರೂ ಕೂಡ ಸಾರ್ಥಕತೆಯನ್ನು ಸಾಧಿಸಿದ ಹಾಗೆ ಆಗುತ್ತದೆ. ಆ ಕೆಲಸವನ್ನು ತಾವು ದಯವಿಟ್ಟು ಮುಂದೆ ಬರತಕ್ಕಂಥ ದಿನಗಳಲ್ಲಿ ಆಲೋಚನೆ ಮಾಡಬೇಕು ಎನ್ನುವಂಥ ಮಾತನ್ನು ಸಹ ಈ ಸಂದರ್ಭದಲ್ಲಿ ಹೇಳಲು ಇಚ್ಛಿಪಡುತ್ತೇನೆ. ಇವತ್ತು ಬೆಳಿಗ್ಗೆಯೇ ಬಸ್ ಪ್ರಯಾಣದ ದರ ಏರಿಕೆಯ ಬಗ್ಗೆ ಚರ್ಚೆ ಮಾಡಿದ್ದೇವೆ. ನಾನು ಆಗಲೇ ಇದನ್ನು ಹೇಳಬೇಕಾಗಿತ್ತು, ಅದನ್ನು ಮರೆತಿದ್ದೆ, ಈ ಡೀಸೆಲ್ ಬೆಲೆ ಏರಿಕೆಯಿಂದ ಬಹಳ ತೊಂದರೆ ಸಿಕ್ಕಿಹಾಕಿಕೊಂಡಿರತಕ್ಕಂಥವನು ಎಂದರೆ ರೈತ. ನನ್ನದೇ ಸ್ವಂತ ಅನುಭವ ಹೇಳಬೇಕೆಂದರೆ, ನಮ್ಮ ಊರಿನಿಂದ ಒಂದು ಟೆಂಪೋದಲ್ಲಿ ಬೆಂಗಳೂರಿಗೆ ತರಕಾರಿ ತರಬೇಕಿದ್ದರೆ ಆರುನೂರು ರೂಪಾಯಿಕೊಡುತ್ತಿದ್ದೆವು. ಬೆಳಗಾಗುವಷ್ಟರಲ್ಲಿ ದಿಢೀರನೆ ಆರುನೂರರಿಂದ ಎಂಟುನೂರು ರೂಪಾಯಿ ಕೊಡಿ ಎಂದು ಕುಳಿತಿದ್ದಾನೆ ಟೆಂಪೋದವನು. ಐದು ರೂಪಾಯಿಗೆ ಒಂದು ಕೆಜಿಯ ಮಾರಾಟವಾಗುತ್ತಿದ್ದ ಬಾಳೆಕಾಯಿ ನಾಲ್ಕು ರೂಪಾಯಿಗೆ ಬಂತು. ಆರುನೂರು ಇದ್ದದ್ದು ಎಂಟುನೂರು ರೂಪಾಯಿಗೆ ಹೋಯಿತು. ಬೆಲೆ ಐದು ರೂಪಾಯಿ ಇದ್ದದ್ದು ನಾಲ್ಕು ರೂಪಾಯಿಗೆ ಇಳಿಯಿತು. ಇದು ಇವತ್ತಿನ ದಿವಸ ಇರುವ ಪರಿಸ್ಥಿತಿ. ಇದರ ಬಗ್ಗೆಯೂ ಕೂಡ ತಾವು ತೀವ್ರವಾಗಿ ಯೋಚನೆ ಮಾಡಬೇಕಾಗುತ್ತದೆ. ರಾಜಕೀಯದ ಭ್ರಷ್ಟಾಚಾರದ ಬಗ್ಗೆಯೂ ಸಹ ನೀವು ಇಲ್ಲಿ ಎಲ್ಲಿಯೂ ಕೂಡ ಪ್ರಸ್ತಾಪ ಮಾಡಿಲ್ಲ. ಈಗಾಗಲೇ ಚುನಾವಣೆಗಳು ನಡೆದಿವೆ. ಮಾನ್ಯ ಖರ್ಗೆಯವರು ಒಂದು ಸಾರಿ ಭಾಷಣ ಮಾಡಿದ್ದಾರೆ.

ಚುನಾವಣೆಗಳು ರಾಜ್ಯದಲ್ಲಿ ಯಾವ ರೀತಿ ನಡೆಯುತ್ತವೆ ಎನ್ನುವ ಬಗ್ಗೆ ಮಾನ್ಯ ಖರ್ಗೆಯವರು ಭಾಷಣ ಮಾಡಿದ್ದಾರೆ. ನಾನು ನಿಮ್ಮ ಮಾತುಗಳನ್ನೇ ಬಳಸಿಕೊಳ್ಳಬೇಕು ಎಂದು ಹುಡುಕಿದೆ, ಅದು ಸಿಗಲಿಲ್ಲ. ಮುಂದೆ ನಿಮ್ಮ ಮಾತುಗಳನ್ನೇ ಬಳಸಿಕೊಳ್ಳುತ್ತೇನೆ. ಇವತ್ತು ಚುನಾವಣೆಗಳು ನಡೆದು ತೀರ್ಪು ಬಂದಿದೆ. ಅದು ಜನತೆಯ ತೀರ್ಪು. ಸುಪ್ರೀಂ ಕೋರ್ಟ್‌ಗಿಂತ ಮೇಲೆ ಯಾವುದಾದರೂ ಕೋರ್ಟು ಇದ್ದರೆ ಅದು ಜನತಾ ಕೋರ್ಟು; ಜನತಾ ನ್ಯಾಯಾಲಯ. ಇವತ್ತು ಜನತಾ ನ್ಯಾಯಾಲಯದಲ್ಲಿ ಆ ತೀರ್ಪು ಬಂದಿದೆ. ಈ ಕಡೆ ನೋಡಿದಾಗ ನನಗೆ ಬಹಳ ವ್ಯಸನವಾಯಿತು. ನಾವು 18 ಜನ ಮಾತ್ರ ಇಲ್ಲಿ ಕುಳಿತುಕೊಳ್ಳಲು ಸಾಧ್ಯವಾಗಿದೆ. ಆಯಿತು, ಏನು ಮಾಡುವುದು? ಜನತೆ ಆ ತೀರ್ಪು ಕೊಟ್ಟುಬಿಟ್ಟಿದ್ದಾರೆ. ಅದರ ಬಗ್ಗೆ ಅಪೀಲ್ ಇಲ್ಲ. ನಾವು 18 ಜನ ಇಲ್ಲಿ ಕುಳಿತಿದ್ದೇವೆ, ಆ ತೀರ್ಪನ್ನು ನಾವು ಒಪ್ಪಿಕೊಂಡಿದ್ದೇವೆ. ಈ ಪ್ರಜಾಪ್ರಭುತ್ವದಲ್ಲಿ ಅದನ್ನು ಒಪ್ಪಿಕೊಳ್ಳದೇ ಬೇರೆ ವ್ಯವಧಾನವೇ ಇಲ್ಲ. ಆದರೆ ಇವತ್ತಿನ ದಿವಸ ನಾವೆಲ್ಲರೂ ಕೂಡ ಯೋಚನೆ ಮಾಡಬೇಕಾಗಿರತಕ್ಕಂಥಾದ್ದು ಏನೆಂದರೆ, ಚುನಾವಣೆಗಳು ನಡೆದಂಥ ರೀತಿ. ಇವತ್ತು ಯಾರಾದರೂ ಸಾಮಾನ್ಯನಾಗಿರತಕ್ಕಂಥವನು ಯಾರಾದರೂ ಚುನಾವಣೆಯಲ್ಲಿ ಗೆದ್ದು ಬರಲು ಸಾಧ್ಯವಿದೆಯೇ ಎನ್ನತಕ್ಕಂಥಾದ್ದನ್ನು ಯೋಚನೆ ಮಾಡಬೇಕಾಗಿರತಕ್ಕಂಥಾದ್ದು ಅತಿ ಅವಶ್ಯಕ. ಇದೇ ರೀತಿಯಲ್ಲಿ ಚುನಾವಣೆಗಳು ನಡೆಯುತ್ತಾ ಹೋದರೆ ಏನಾಗುತ್ತದೆ ಎಂದರೆ, ಪಾಕಿಸ್ತಾನದಲ್ಲಿ ಮಿಲಿಟರಿ ಆಡಳಿತ ಬಂದಂಥ ಕಾಲದಲ್ಲಿ ಅಲ್ಲಿನ ಜನ ಸಿಹಿ ಹಂಚಿದರು. ಏಕೆಂದರೆ ಅಲ್ಲೂ ಕೂಡ ಚುನಾವಣೆ ಮೇಲೆ ಚುನಾವಣೆಗಳು ನಡೆದಿದ್ದೇ ನಡೆದಿದ್ದು. ಆ ಹಂತಕ್ಕೆ ನಮ್ಮ ದೇಶ ಹೋಗುವುದು ಬೇಡ. ರಾಜಕೀಯವಾದಂಥ ಭ್ರಷ್ಟಾಚಾರ ಏನು ನಡೆಯುತ್ತಿದೆ ಇದರ ಮೇಲೆ ಕಡಿವಾಣ ಹಾಕತಕ್ಕಂಥಾದ್ದು, ಆ ದಿಕ್ಕಿನಲ್ಲಿ ಆಲೋಚನೆ ಮಾಡಬೇಕಾಗಿರತಕ್ಕಂಥಾದ್ದು ಅತಿ ಅವಶ್ಯಕ. ಅದಕ್ಕೋಸ್ಕರವೇ ನಾನು ಪ್ರಥಮದಲ್ಲಿ ಹೇಳಿದ್ದು, ಈ ದೇಶಕ್ಕೆ ಗಂಡಾಂತರ ತರತಕ್ಕಂಥಾದ್ದು ಎಂದರೆ ಈ ಭ್ರಷ್ಟಾಚಾರ ಎಂದು. ಈ ಭ್ರಷ್ಟಾಚಾರವನ್ನು ತೊಡೆಯಬೇಕಾದರೆ ಚುನಾವಣೆಗಳು ನಡೆಯತಕ್ಕಂಥ ರೀತಿ ನೀತಿ ವಿಧಾನಗಳನ್ನು ಮಾರ್ಪಾಟು ಮಾಡಬೇಕಾಗಿರತಕ್ಕಂಥಾದ್ದು, ಈ ಪದ್ಧತಿಯನ್ನು ಮಾರ್ಪಾಟು ಮಾಡಬೇಕಾಗಿರತಕ್ಕಂಥಾದ್ದು ಅತಿ ಅವಶ್ಯಕವಾಗಿದೆ. ಅದರ ಬಗ್ಗೆಯೂ ಕೂಡ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಏನೂ ಚಕಾರವೆತ್ತಲಿಲ್ಲ. ಆದರೆ ಮಾನ್ಯ ಖರ್ಗೆಯವರು ವಿರೋಧ ಪಕ್ಷದಲ್ಲಿ ಕುಳಿತಿದ್ದಂಥ ಕಾಲದಲ್ಲಿ ಬಹಳ ಮಾತನಾಡಿದ್ದಾರೆ. ನನ್ನ ಕ್ಷೇತ್ರದಲ್ಲೂ ಕೂಡ ಸ್ವಲ್ಪ ಹೆಚ್ಚು ಕಡಿಮೆ ಅದೇ ಪರಿಸ್ಥಿತಿ ಇತ್ತು. ಆದರೆ ಈ ವರ್ಷ ಅವರ ಬೇಳೆಕಾಳು ಬೇಯಲಿಲ್ಲ. ಅದರ ವಿವರಗಳಿಗೆ ನಾನು ಹೋಗುವುದಿಲ್ಲ. ಒಂದು ನಯಾಪೈಸೆಯನ್ನೂ ಖರ್ಚುಮಾಡಿ ನಮಗೆ ಅಭ್ಯಾಸವಿಲ್ಲ, ಮಾಡಿದ್ದೂ ಇಲ್ಲ. ಆದರೆ ಇದೇ ರೀತಿಯಲ್ಲಿ ಚುನಾವಣೆಗಳು ನಡೆಯುತ್ತಾ ಹೋದರೆ ಏನಾಗುತ್ತದೆ ಎನ್ನತಕ್ಕಂಥಾದ್ದನ್ನು ಸಹ ನಾವೆಲ್ಲರೂ ಯೋಚನೆ ಮಾಡಬೇಕಾಗಿದೆ. ನಾನು ಆಗಲೇ ಹೇಳಿದೆ, ಇಲ್ಲಿ 18 ಜನರನ್ನು ನೋಡಿದರೆ

ನನಗೆ ಬಹಳ ದುಃಖವಾಗುತ್ತದೆ, ನಾವು 18ಕ್ಕೆ ಬಂದು ಬಿಟ್ಟೆವಲ್ಲಾ ಎಂದು. ಆದರೆ ನಿಮ್ಮಿಂದಾಗಿ ನೀವು ಅಲ್ಲಿ ಬಂದು ಕುಳಿತಿದ್ದೀರಿ ಎಂದು ದಯವಿಟ್ಟು ತಿಳಿದುಕೊಳ್ಳಬೇಡಿ. ನಿಮ್ಮಿಂದ ನೀವು ಅಲ್ಲಿ ಬಂದು ಕುಳಿತುಕೊಳ್ಳಲಿಲ್ಲ. ಅದಕ್ಕೆ ನಾವೇ ಕಾರಣ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ನಿಮ್ಮಿಂದಲೇ ನಾವು ಇಲ್ಲಿ ಕುಳಿತಿದ್ದೇವೆ ಎಂದು ಹೇಳುತ್ತಿದ್ದೇವೆ.

ಶ್ರೀ ಸಿ. ಬೈರೇಗೌಡ:- ತಾವು ಅದನ್ನು ಒಪ್ಪಿಕೊಳ್ಳುತ್ತೀರಿ. ಅದಕ್ಕೆ ಧನ್ಯವಾದಗಳು. ಚರ್ಚೆ ಅಂದರೆ ಹೀಗಿರಬೇಕು. ನಿಜವನ್ನು ನಿಜ ಎಂದು ಹೇಳಬೇಕು, ತಪ್ಪನ್ನು ತಪ್ಪು ಎಂದು ಹೇಳಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ನಿಮ್ಮಿಂದಲೇ ಬಂದದ್ದು ಎಂದರೆ ನಿಮ್ಮ ದುರಾಡಳಿತದಿಂದ ಬಂದಿದ್ದೇವೆ ಎಂದು ನಾನು ಹೇಳಿದ್ದು.

ಶ್ರೀ ಸಿ. ಬೈರೇಗೌಡ:- ದುರಾಡಳಿತ ಎನ್ನುವುದನ್ನು ನಾನು ಒಪ್ಪುವುದಿಲ್ಲ.

ಶ್ರೀ ಎಸ್.ಎಸ್. ಪಾಟೀಲ್:-ಹಾಗೆಯೇ ಅವರೂ ಕೂಡ ಒಪ್ಪಿಕೊಳ್ಳಬೇಕು, ಹೋದಸಲ ನಿಮ್ಮಿಂದ ನಾವು ಅಲ್ಲಿ ಬಂದು ಕುಳಿತಿದ್ದೆವು ಎನ್ನುವುದನ್ನು ಕೂಡ ನೀವು ಒಪ್ಪಿಕೊಳ್ಳಬೇಕು.

ಶ್ರೀ ಸಿ. ಬೈರೇಗೌಡ:- ದುರಾಡಳಿತ ಎನ್ನುವುದನ್ನು ನಾನು ಒಪ್ಪುವುದಿಲ್ಲ. ಆದರೆ ನಮ್ಮಿಂದ ಅವರು ಅಲ್ಲಿ ಬಂದಿರತಕ್ಕಂಥಾದ್ದು ಎನ್ನುವುದನ್ನು ನಾನು ಒಪ್ಪುತ್ತೇನೆ. ತಾವು ಇಂದು ಅಲ್ಲಿ ಕುಳಿತುಕೊಳ್ಳಬೇಕಾದರೂ ನಾವೇ ಕಾರಣ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಈಗಲೂ ಜಗಳ ಮಾಡಿಕೊಳ್ಳಿ. ನಾವೇನು ಬೇಡ ಎನ್ನುವುದಿಲ್ಲ, ಕಂಟಿನ್ಯೂ ಮಾಡಿ.

ಶ್ರೀ ಸಿ. ಬೈರೇಗೌಡ:- ಯಾವುದಕ್ಕೆ ಜಗಳ ನಡೆಯಬೇಕೋ ಅದಕ್ಕೆ ಜಗಳ ನಡೆದರೆ ಜನ ಒಪ್ಪುತ್ತಾರೆ. ಆದರೆ ಅದಕ್ಕೆ ನಡೆಯಲಿಲ್ಲ. ಜನತೆಯ ಸಮಸ್ಯೆಗೋಸ್ಕರ ನಾವು ಜಗಳ ಮಾಡಿದ್ದರೆ, ಬೀದಿಗಿಳಿದಿದ್ದರೆ ಜನ ಖಂಡಿತವಾಗಿಯೂ ಕೂಡ ಮೆಚ್ಚುತ್ತಿದ್ದರು. ಆದರೆ ಅದಾಗಲಿಲ್ಲ.ಯಾವ ರೀತಿಯಾಗಿ ನಡೆಯಿತು, ಏಕೆ ನಡೆಯಿತು, ಎನ್ನುವುದು ಕೂಡ ಗೊತ್ತಿದೆ. ನಾನು ಅದೆಲ್ಲವನ್ನು ಹೇಳಿ ನನ್ನ ಚರ್ಚೆಯ ಮಟ್ಟವನ್ನು ಕಡಿಮೆ ಮಾಡಿಕೊಳ್ಳಲು ಇಷ್ಟವಿಲ್ಲ, ನಾನು ಅಷ್ಟಕ್ಕೇ ನಿಲ್ಲಿಸುತ್ತೇನೆ. ನೀವು ಅಲ್ಲಿ ಬರುವುದಕ್ಕೆ ನಾವೇ ಕಾರಣಕರ್ತರು ಎನ್ನುವುದನ್ನು ನಾವಂತೂ ಒಪ್ಪಿಕೊಂಡಿದ್ದೇವೆ. ಆದರೆ ಜನತೆಯ ತೀರ್ಪು ಇಷ್ಟು ಕ್ರೂರವಾಗಿರುತ್ತದೆ ಎಂದು ನಾವಂತೂ ಅಂದುಕೊಂಡಿರಲಿಲ್ಲ.

ಶ್ರೀ ಡಿ.ಆರ್. ಪಾಟೀಲ್:-ನೀವು ಮಾತ್ರವೇ ಅಥವಾ ಬಿ.ಜೆ.ಪಿ.ಯವರು ಮತ್ತು ನೀವು ಕೂಡಿಯೇ ನಾವು ಇಲ್ಲೇ ಬರಲು ಕಾರಣರೋ?

ಶ್ರೀ ಸಿ. ಬೈರೇಗೌಡ:- ನಾನು ನಮ್ಮ ಪಕ್ಷದ ಪರವಾಗಿ ಮಾತನಾಡುತ್ತಿದ್ದೇನೆ.

ಶ್ರೀ ಡಿ.ವಿ. ಸದಾನಂದಗೌಡ:- ಕಳೆದ ಸದನದಲ್ಲೂ ಇದೇ ನಡೆಯುತ್ತಿತ್ತು, ಅವರನ್ನು ನೀವು ಹೇಳುತ್ತಿದ್ದಿರಿ, ನಿಮ್ಮನ್ನು ಅವರು ಹೇಳುತ್ತಿದ್ದರು. ಪುನಃ ಅದನ್ನು ಇಲ್ಲಿ ತರುವುದು ಬೇಡ. ಹೊಸ ರೀತಿಯ ರಾಜಕೀಯ ಮಾಡೋಣ.

3 .30 ಪಿ.ಎಂ

ಶ್ರೀ ಸಿ. ಬೈರೇಗೌಡ:- ಆದ್ದರಿಂದ ಕಾಂಗ್ರೆಸ್ ಪಕ್ಷದವರಾದ ತಾವುಗಳು ಆಡಳಿತ ಸ್ಥಾನದಲ್ಲಿ ಕುಳಿತುಕೊಳ್ಳಬೇಕಾದರೆ ಅದಕ್ಕೆ ನಾವೇ ಕಾರಣ. ನಮ್ಮಿಂದಲೇ ತಾವು ಅಲ್ಲಿ ಕುಳಿತಿರತಕ್ಕಂಥದ್ದನ್ನು ತಾವೂ ಕೂಡ ಒಪ್ಪಿದ್ದೀರಿ; ಬಹಳ ಸಂತೋಷ. ನಾವು ಈಗ 18 ಜನ ವಿರೋಧ ಪಕ್ಷದಲ್ಲಿ ಕುಳಿತಿರಬಹುದು, ನಂತರ ಆ ಕಡೆಗೆ ಮುಂದೆ ಬರಬಹುದು, ಆದರೆ ಸರ್ಕಾರದ ಕಡೆಯಿಂದ ಇಲ್ಲಿಯವರೆಗೆ ಕೂಡ ಏನು ಹೇಳಿದ್ದೀರಿ, ತಮ್ಮ ಅನಿಸಿಕೆಗಳು ಏನಿವೆ, ತಮ್ಮ ಅನುಭವಗಳು ಏನು ಇವೆ ಇವುಗಳನ್ನು ಜನರ ಹಿತವನ್ನು ಕಾಪಾಡುವುದಕ್ಕೋಸ್ಕರ ಗಮನದಲ್ಲಿಟ್ಟುಕೊಂಡು ತಮ್ಮ ಸರ್ಕಾರದ ಆಡಳಿತವನ್ನು ಚುರುಕುಗೊಳಿಸುವುದಕ್ಕೆ ನಿಮ್ಮ ಯೋಜನೆಗಳನ್ನು ರೂಪಿಸತಕ್ಕಂಥ ನಿಟ್ಟಿನಲ್ಲಿ ನಿಮ್ಮ ಆಡಳಿತದಲ್ಲಿ ಅದು ಎದ್ದುಕಾಣತಕ್ಕಂಥ ರೀತಿಯಲ್ಲಿ ತಾವು ಆಡಳಿತವನ್ನು ನಡೆಸಬೇಕು. ನಾನು ಪ್ರಾರಂಭದಲ್ಲಿಯೇ ಹೇಳಿದ ಹಾಗೆ ಶ್ರೀಮಾನ್ ಕೃಷ್ಣರವರು ಮುಖ್ಯಮಂತ್ರಿ ಆದಾಗ ದೊಡ್ಡ ದೊಡ್ಡ ಹೆಸರುಗಳನ್ನು ಉಲ್ಲೇಖ ಮಾಡಿದ್ದಾರೆ. ಇವತ್ತು ಶ್ರೀಮಾನ್ ಕೃಷ್ಣರವರು ರಾಜ್ಯದ ಜನತೆಯ ಹಿತದೃಷ್ಟಿಯಿಂದ ಆ ಮಟ್ಟಕ್ಕೆ ಹೋಗಬೇಕು ಎನ್ನತಕ್ಕಂಥ ಸದಾಶಯವನ್ನು ನಾನು ವ್ಯಕ್ತಪಡಿಸುತ್ತೇನೆ. ಇವತ್ತು ಮಾನ್ಯ ರಾಜ್ಯಪಾಲರಿಗೆ ಗೌರವ ಕೊಡಬೇಕಾಗಿರತಕ್ಕಂಥದ್ದು ನಮ್ಮ ಕರ್ತವ್ಯ. ಆದರೆ ಇಲ್ಲಿ ತಂದಿರತಕ್ಕಂಥ ನಿರ್ಣಯ ಏನು ಇದೆ, ಆ ನಿರ್ಣಯಕ್ಕೆ ಒಳಪಟ್ಟಿರತಕ್ಕಂಥ ಭಾಷಣದಲ್ಲಿ ಏನೇನು ಉಲ್ಲೇಖ ಆಗಿದೆ, ಏನೇನು ಉಲ್ಲೇಖ ಆಗಬೇಕಾಗಿತ್ತು, ಯಾವುದು ಆಗಿಲ್ಲ ಎನ್ನುವುದನ್ನು ಸಹ ನಾನು ಹೇಳಿದ್ದೇನೆ. ಈ ಸಂದರ್ಭದಲ್ಲಿ ಮತ್ತೊಂದು ವಿಚಾರವನ್ನು ತಮ್ಮ ಗಮನಕ್ಕೆ ತರಬಯಸುವುದೇನೆಂದರೆ, ನಿಮ್ಮ ಮಂತ್ರಿಮಂಡಲದಲ್ಲಿ ಕೆಲವು ಮಂತ್ರಿಗಳು ಇನ್ನೂ ಕೂಡ ಎಲ್-ಬೋರ್ಡ್ ನಲ್ಲಿಯೇ ಇದ್ದಾರೆ. ಮಂತ್ರಿಗಳು ಮಾತನಾಡುವಾಗ, ಹೇಳಿಕೆ ಕೊಡುವಾಗ ಅದು 100ಕ್ಕೆ 100ರಷ್ಟು ನಿಜ ಇರಬೇಕು ಮತ್ತು ಗುರುತರವಾದ ವಾಸ್ತವಾಂಶದ ಉತ್ತರವನ್ನು ಕೊಡಬೇಕು. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟವಾಗಿ ಕೆಲವು ಮಂತ್ರಿಗಳಿಗೆ ತಿಳಿಸಬೇಕು. ಆ ರೀತಿಯಾದಂಥ ಗುರುತರವಾದ, ಸ್ಪಷ್ಟವಾದ ಹೇಳಿಕೆಗಳು ಮಂತ್ರಿಗಳಿಂದ ಬರಬೇಕೇ ವಿನಃ 'ಕೃಷಿ ನೀತಿಯು ಕಾಗದದ ಮೇಲೆ ಮಾತ್ರ ಜಾರಿಗೆಯಾಗಿದೆ' ಎಂದು ಪದೇ ಪದೇ ಎರಡು ಸಲ ನಿಮ್ಮ ಕೃಷಿ ಮಂತ್ರಿಗಳು ಹೇಳಿದ್ದಾರೆ. ನಾನು ಮಾನ್ಯ ಮುಖ್ಯಮಂತ್ರಿಗಳು ಮತ್ತು ಕೃಷಿ ಮಂತ್ರಿಗಳ ಗಮನಕ್ಕೆ ತರುತ್ತೇನೆ, ಈಗಿನ ಕೃಷಿ ಮಂತ್ರಿಗಳು ಆ ಕೃಷಿ ನೀತಿಯನ್ನು ಓದಿಲ್ಲ ಎಂದು ನಾನು ಇಲ್ಲಿ ಸವಾಲಾಗಿ ಹೇಳುತ್ತಿದ್ದೇನೆ. ಮತ್ತು ಆ ಕೃಷಿ ನೀತಿಯಲ್ಲಿ ಏನೇನು ನಾವು ಜಾರಿಗೊಳಿಸಿದ್ದೇವೆ ಎನ್ನುವುದನ್ನು

ಕೂಡ ಈಗಿನ ಕೃಷಿಮಂತ್ರಿಗಳು ಪರಿಶೀಲನೆ ಮಾಡಿ ನೋಡಿಲ್ಲ. ಯಾವುದೇ ರೀತಿಯ ಪರಿಶೀಲನೆ ಅಥವಾ ಓದದೆ ಹೇಳಿಕೆಗಳನ್ನು ಕೊಡುವುದು ಶೋಭೆ ತರುವುದಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ:- ಒಂದ್ನಿಮಿಷ ಕರೆದು ನೀವೇ ಅವರಿಗೆ ಹೇಳಿಕೊಟ್ಟರೆ ಆಯಿತು. ಇಲ್ಲಿ ಅದರ ಚರ್ಚೆಯ ಅವಶ್ಯಕತೇ ಇರುವುದಿಲ್ಲ.

ಶ್ರೀ ಸಿ. ಬೈರೇಗೌಡ:- ಖಂಡಿತ, ರಾಜ್ಯದ ಜನತೆಯ ಹಿತದೃಷ್ಟಿಯಿಂದ ನಾನು ಅವರಿಗೆ ಕೃಷಿ ನೀತಿಯ ಬಗ್ಗೆ ಹೇಳಿಕೊಡುವುದಕ್ಕೆ ತಯಾರಿದ್ದೇನೆ. ಅವರಿಗೆ ಎಲ್ಲಿಗೆ ಬೇಕಾದರೂ ಕರೆಯಲಿ. ನಾನು ಬಂದು ಹೇಳಿಕೊಡುವುದಕ್ಕೆ ತಯಾರಿದ್ದೇನೆ. ಆ ರೀತಿಯಾದಂಥ ಹಗುರವಾದ ಹೇಳಿಕೆಗಳನ್ನು 'ಎಲ್-ಬೋರ್ಡ್‌ನವರಿಂದ' ಅಪ್ರೆಂಟೀಸಗಳು ಕೊಡತಕ್ಕಂಥದ್ದು ಸೂಕ್ತ ಅಲ್ಲ. ಹೇಳಿಕೆಗಳನ್ನು ಕೊಡುವಾಗ ಅದಕ್ಕೆ ತೂಕ ಇರಬೇಕು, ಬೆಲೆ ಇರಬೇಕು, ಆ ರೀತಿಯಾದಂಥ ಹೇಳಿಕೆಗಳು ಇದ್ದರೆ ಮಾತ್ರ ಕೊಡಿ ಎಂದು ನಿಮ್ಮ ಮಂತ್ರಿಗಳಿಗೆ ಬುದ್ಧಿವಾದ ಹೇಳತಕ್ಕಂಥ ಅವಶ್ಯಕತೆ ಇದೆ. ದಯವಿಟ್ಟು ಇದನ್ನು ಸಂಬಂಧಪಟ್ಟ ಮಂತ್ರಿಗಳಿಗೆ ಹೇಳಬೇಕು ಎಂದು ಹೇಳಿ ಇನ್ನು ಬರತಕ್ಕಂಥ 5 ವರ್ಷದ ಆಡಳಿತದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಯಾರ್‍ಯಾರ ಹೆಸರುಗಳನ್ನು ಉಲ್ಲೇಖ ಮಾಡಿದ್ದಾರೋ ಅವರನ್ನು ಮೀರಿಸತಕ್ಕಂಥ ರೀತಿಯಲ್ಲಿ ನಿಮ್ಮ ಆಡಳಿತ ಇರಬೇಕು ಎನ್ನತಕ್ಕಂಥ ಬಯಕೆಯನ್ನು ವ್ಯಕ್ತಪಡಿಸಿ, ಈ ನಿರ್ಣಯವನ್ನು ವಿರೋಧ ಮಾಡಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ):- ಮಾನ್ಯ ಅಧ್ಯಕ್ಷರೆ, ಕಳೆದ ತಿಂಗಳು ನಮ್ಮ ಮಾನ್ಯ ರಾಜ್ಯಪಾಲರು ಮಾಡಿದ ಭಾಷಣವನ್ನು ನಾನು ಪುನಃ ಪೂರ್ವಕವಾಗಿ ಸ್ವಾಗತ ಮಾಡುತ್ತಾ, ಇದು ಕೇವಲ ರಾಜ್ಯಪಾಲರ ಭಾಷಣ ಅಲ್ಲ, ಇದು ನಮ್ಮ ಸರ್ಕಾರದ ಅಜೆಂಡಾ, ನಮ್ಮ ಸರ್ಕಾರದ ಗುರಿ ಏನು, ಸರ್ಕಾರದ ಗೋಲು ಏನು ಎನ್ನುವುದನ್ನು ಈ ಭಾಷಣದ ಮುಖಾಂತರ ಅಜೆಂಡಾವನ್ನು ನಮ್ಮ ಮುಂದಿಟ್ಟಿದ್ದಾರೆ. ಇದನ್ನು ಮನಸ್ಸುಪೂರ್ವಕವಾಗಿ ಸ್ವಾಗತಿಸುತ್ತಾ ನಾನು ಈ ಸಂದರ್ಭದಲ್ಲಿ ಮಾನ್ಯ ಸಭಾಧ್ಯಕ್ಷರಲ್ಲಿ ಒಂದು ಮನವಿಯನ್ನು ಮಾಡುತ್ತೇನೆ. ನಾವೆಲ್ಲಾ ಕೊನೆಯ ಬೆಂಚಿನಲ್ಲಿ ಕುಳಿತಿರುವುದರಿಂದ ಚರ್ಚೆಯಲ್ಲಿ ಪಾಲ್ಗೊಳ್ಳುವುದಕ್ಕೆ ಸ್ವಲ್ಪ ಕಡಿಮೆ ಅವಕಾಶ ಸಿಗುತ್ತದೆ ಎನ್ನುವ ವಿಚಾರ ನಮ್ಮ ಮನಸ್ಸಿಗೆ ಬಂದುಬಿಟ್ಟಿದೆ. ಆದ್ದರಿಂದ ದಯಮಾಡಿ ನಮಗೆಲ್ಲ ಹೆಚ್ಚು ಹೆಚ್ಚು ಅವಕಾಶಗಳನ್ನು ಕಲ್ಪಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ನಮ್ಮ ಮುಖ್ಯಮಂತ್ರಿಗಳಾದಂಥ ಶ್ರೀಮಾನ್ ಕೃಷ್ಣರವರ ನೇತೃತ್ವದಲ್ಲಿ, ಅವರ ಕ್ಯಾಪ್ಟೆನ್ಶಿಪ್‌ನಲ್ಲಿ ನಮ್ಮ ರಾಜ್ಯದ ಜನತೆಯನ್ನು 21ನೇ ಶತಮಾನಕ್ಕೆ ತೆಗೆದುಕೊಂಡು ಹೋಗುತ್ತಿದ್ದಾರೆ. ಬಹುಶಃ 21ನೇ ಶತಮಾನಕ್ಕೆ ತೆಗೆದುಕೊಂಡು ಹೋಗತಕ್ಕಂಥ ಅವಕಾಶ ಬೇರೆ ಯಾರಿಗೂ ಸಿಕ್ಕಿಲ್ಲ, ಆ ಸದಾವಕಾಶ ನಮ್ಮ ಸರ್ಕಾರಕ್ಕೆ ಮಾತ್ರ ಸಿಕ್ಕಿದೆ. ಅಂದರೆ ಹೊಸ ಯುಗಕ್ಕೆ ತೆಗೆದುಕೊಂಡು ಹೋಗುತ್ತೇವೆ ಎನ್ನುವ

ಧಾಟಿಯಲ್ಲಿ ಈಗಾಗಲೇ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಹೆಜ್ಜೆಗಳನ್ನು ಇಟ್ಟಿದ್ದಾರೆ. ಹೊಸದಾಗಿ ಯಾವ ಯಾವ ಯೋಜನೆಗಳನ್ನು, ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ ಎನ್ನುವುದನ್ನು ಈ ರಾಜ್ಯಪಾಲರ ಭಾಷಣವನ್ನು ನೋಡಿದರೆ ಗೊತ್ತಾಗುತ್ತದೆ ಈ 12 ಪುಟಗಳಲ್ಲಿ ಇರತಕ್ಕಂಥದ್ದು ಆ್ಯಕ್ಷನ್ ಓರಿಯೆಂಟೆಡ್ ಹೊರತು ಕೇವಲ ಭರವಸೆಗಳನ್ನು ಹೊಂದಿರತಕ್ಕಂಥ ಒಂದು ಅಭಿನಂದನಾ ಭಾಷಣ ಅಲ್ಲ. each one is a practical one. ಇದನ್ನು ಮಾಡುವುದಕ್ಕೆ ಸಾಧ್ಯವಿರುವಂಥದ್ದೇ ಆಗಿದ್ದು ಯೋಚನೆ ಮಾಡಿ ನಮ್ಮ ಸರ್ಕಾರ ಸಭೆಯ ಮುಂದೆ ಇಟ್ಟಿದೆ ಎನ್ನತಕ್ಕಂಥದ್ದನ್ನು My Government with privilege, ನಾನು ಹೇಳಬೇಕಾಗುತ್ತದೆ, ಬೇರೆ ಬೇರೆ ರಾಜ್ಯಗಳಲ್ಲಿ ಬೇರೆ ಬೇರೆ ಪಕ್ಷಗಳು ಸೇರಿ ಸರ್ಕಾರ ನಡೆಸುವಂಥ ಅವಕಾಶ ಇತ್ತು, ಆದರೆ ನಮ್ಮ ರಾಜ್ಯದಲ್ಲಿ ಒಂದೇ ಪಕ್ಷ ಮೆಜಾರಿಟಿಗೆ ಬಂದು ಕಾರ್ಯಕ್ರಮವನ್ನು ರೂಪಿಸಿಕೊಂಡು ಮಾಡತಕ್ಕಂಥದ್ದು we are going to achieve it. ಅದನ್ನು ಸಾಧನೆ ಮಾಡಿಯೇ ಮಾಡುತ್ತೇವೆ. ಏಕೆಂದರೆ ಬೇರೆ ಪಕ್ಷದವರಿಂದ ನಮಗೆ ನೋವು ಇಲ್ಲ. ಬೇರೆ ಪಕ್ಷದವರ ಅಜೆಂಡಾ ಕೇಳಬೇಕಾಗಿಲ್ಲ. ಯಾವ ಯಾವ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆದು ಕೇಳುವಂಥದ್ದು ಇಲ್ಲ. ಆದರೆ ವಿರೋಧ ಪಕ್ಷದ ಮಿತ್ರರು ಏನೇನು ಸಲಹೆಗಳನ್ನು ಕೊಡುತ್ತಾರೆ ಆ ಸಲಹೆಗಳನ್ನು ಗಮನಕ್ಕೆ ತೆಗೆದುಕೊಂಡು ಸರ್ಕಾರ ನಡೆಸುವಂಥ ಧಾಟಿಯಲ್ಲಿ ಮುಂದುವರಿಯುತ್ತೇವೆ ಎನ್ನುವುದು ನಮಗೆ ಪೂರ್ವ ಮನವರಿಕೆಯಾಗಿದೆ. single party is hopefully going to do better things to all the people Sir. ನಾವು ಈ ಹೊಸ ಶತಮಾನಕ್ಕೆ ಕಾಲಿಡುವ ಸಂದರ್ಭದಲ್ಲಿ ಒಂದು ಡೈನಾಮಿಕ್ ಫ್ಯೂಚರ್ ಮಾಡಬೇಕೆಂದು ನಾವು ಏನು ಗುರಿ ಇಟ್ಟುಕೊಂಡಿದ್ದೇವೆ ಇದನ್ನು ಸಾಧನೆ ಮಾಡುತ್ತೇವೆ, ಇದರಲ್ಲಿ ಎರಡು ಮಾತಿಲ್ಲ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ದೇಶದಲ್ಲಿ ಮ್ಯಾನ್‌ಪವರ್, ಇನ್‌ಫ್ರಾಸ್ಟ್ರಕ್ಚರ್, ಹ್ಯೂಮನ್ ರಿಸೋರ್ಸಸ್ ಅಗಾಧವಾಗಿ ಸಿಗುತ್ತದೆ, ಅದರಂತೆ ನಮ್ಮ ರಾಜ್ಯದಲ್ಲಿ ಕೂಡ ಈ ಸಂಪತ್ತುಗಳು ಅಗಾಧವಾಗಿ ಸಿಗುತ್ತಿದ್ದು ಇದನ್ನು ಯಾವ ರೀತಿ ಬಳಸಿಕೊಳ್ಳಬೇಕು ಎನ್ನುವುದನ್ನು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ, ಆ ಅಜೆಂಡಾದಲ್ಲಿ ಅದನ್ನು ಪ್ರಸೆಂಟ್ ಮಾಡಿದ್ದಾರೆ. ಇದು ಸುಳ್ಳು ಭರವಸೆ ಕೊಡುವಂಥದ್ದೇನೂ ಅಲ್ಲ. ನೂರು ಸುಳ್ಳು ಭರವಸೆಗಳನ್ನು ಕೊಟ್ಟು ಅದರಲ್ಲಿ ಎರಡು ಭರವಸೆಗಳನ್ನು ಮಾತ್ರ ಈಡೇರಿಸುವಂಥ ಪರಿಸ್ಥಿತಿಯಲ್ಲಿ ನಾವು ಇಲ್ಲ. ನಾವು ಪ್ರಾಕ್ಟಿಕಲ್ ಆಗಿ ಇದ್ದೇವೆ ಎನ್ನತಕ್ಕಂಥ ಮಾತನ್ನು ಇಲ್ಲಿ ಹೇಳಬೇಕಾಗುತ್ತದೆ. ಇವತ್ತು ನಮ್ಮ ರಾಜ್ಯದಲ್ಲಿ ಮಾಡ್ರನ್ ಸೈನ್ಸ್ ಅಂಡ್ ಟೆಕ್ನಾಲಜಿಯನ್ನು ಅಳವಡಿಸಬೇಕೆಂದು ನಮ್ಮ ಮಾನ್ಯ ಮುಖ್ಯಮಂತ್ರಿಗಳು ಮತ್ತು ನಾವುಗಳು ಈ ದೇಶದಲ್ಲಿ ಮಾತ್ರ ಅಲ್ಲ ಹೊರ ದೇಶಕ್ಕೆ ಹೋಗಿ ಅಲ್ಲಿ ನೋಡಿ ಓದಿಕೊಂಡು ಬಂದು ಸಾಕಷ್ಟು ವಿಚಾರಗಳನ್ನು ಕಲೆಹಾಕಿ ಮಂಡನೆ ಮಾಡಿದ್ದೇವೆ, ಇದನ್ನು ನಮ್ಮ ರಾಜ್ಯಪಾಲರ

ಭಾಷಣವನ್ನು ನೋಡಿದರೆ ತಮಗೆಲ್ಲಾ ಗೊತ್ತಾಗುತ್ತದೆ. ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಸೈಬರ್ ಟೆಕ್ನಾಲಜಿಯನ್ನು ಮೈಸೂರಿನಲ್ಲಿ ಪ್ರಾರಂಭ ಮಾಡಿದ್ದಾರೆ, ಇಲ್ಲೂ ಕೂಡ ಮಾಡ್ರನ್ ಟೆಕ್ನಾಲಜಿಯನ್ನು ಇಂಟ್ರಡ್ಯೂಸ್ ಮಾಡುವಂಥ ಕಾಯ್ರಕ್ರಮಗಳನ್ನು ಹಾಕಿಕೊಂಡು ಮಾನ್ಯ ಮುಖ್ಯಮಂತ್ರಿಗಳ ಕಚೇರಿಯಲ್ಲಿ ಕೂಡ ಡೈರೆಕ್ಟಾಗಿ 'ಇ-ಮೇಲ್' ನಲ್ಲಿ ಕಾಂಟಾಕ್ಟ್ ಮಾಡತಕ್ಕಂಥ ಕಾರ್ಯಕ್ರಮಗಳನ್ನು ಕೂಡ ಹಾಕಿಕೊಂಡಿದ್ದಾರೆ. ಇದು ಸಾಮಾನ್ಯ ಒಬ್ಬ ಮನುಷ್ಯ ಕೂಡ ಮಾತನಾಡುವುದಕ್ಕೆ, ವಿಚಾರ ಹೇಳುವುದಕ್ಕೆ, ಸಮಸ್ಯೆಗಳನ್ನು ಪ್ರಸೆಂಟ್ ಮಾಡಲಿಕ್ಕೆ ಮತ್ತು ಸರ್ಕಾರ ಜನಗಳ ಹತ್ತಿರ ಬರುತ್ತಿದೆ ಎಂದು ಹೇಳುವುದಕ್ಕೆ ಒಂದು ಸಣ್ಣ ಉದಾಹರಣೆಯಾಗಿದೆ. ಈ ಸೈನ್ಸ್ ಅಂಡ್ ಟೆಕ್ನಾಲಜಿ ನಮ್ಮ ಜೊತೆಯಲ್ಲಿ ಬೆಳೆದು ಬಂದಿದೆ. ನಾವು ಇವತ್ತು ಬೆಳಿಗ್ಗೆಯಿಂದ ಸಂಜೆಯವರೆಗೆ ವ್ಯವಹಾರದ ಮೂಲಕ ಏನು ಮಾತುಕತೆ ಮಾಡುತ್ತೇವೆ, ಪ್ರತಿಯೊಂದು ಆಗುಹೋಗುಗಳು ಈ ಇನ್‌ಫ್ರೋಟೆಕ್ನಾಲಜಿ, ಮಾಡ್ರನ್ ಟೆಕ್ನಾಲಜಿಯೊಡನೆ ನಡೆಯುತ್ತಿದ್ದು ಇದು ಒಂದು ಅವತಾರವಾಗಿ ನಮ್ಮೊಡನೆ ಬೆಳೆದು ಬರುತ್ತಿದೆ. ಲಂಚಾವತಾಕ ಕೂಡ ಒಂದು ಅಂಗ ಎಂದು ಇಲ್ಲಿಯ ಜನ ಹೇಳುತ್ತಾರೆ, ಹಾಗೆಯೇ ಈ ಟೆಕ್ನಾಲಜಿ ಕೂಡ ನಮ್ಮ ಜೊತೆಯಲ್ಲಿ ಬೆಳೆದಿರತಕ್ಕಂಥ ಒಂದು ಅಂಗವಾಗಿದೆ. ಇದನ್ನು ಬಿಟ್ಟು ಯಾವ ಸರ್ಕಾರವೂ ಕೂಡ ವಿರುದ್ಧವಾಗಿ ಹೋಗುವುದಕ್ಕೆ ಆಗುವುದಿಲ್ಲ. 21ನೇ ಶತಮಾನಕ್ಕೆ ಹೋಗತಕ್ಕಂಥ ಸಂದರ್ಭದಲ್ಲಿ ಎತ್ತಿನಗಾಡಿಯಲ್ಲಿ ಹೋಗುವಂಥ ಜನ ನಾವು ಅಲ್ಲ. ನಾವು ನಿಮ್ಮನ್ನು ಹೊಸ ಯುಗಕ್ಕೆ ತೆಗೆದುಕೊಂಡು ಹೋಗುತ್ತೇವೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಇನ್ನು ಸ್ಥಳೀಯ ಮಟ್ಟದಲ್ಲಿಯ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವ ಸಲುವಾಗಿ ವಿಧಾನಸೌಧಕ್ಕೆ, ಶಾಸಕರ ಭವನಕ್ಕೆ ಬರತಕ್ಕಂಥ ಜನಗಳು ಆದಷ್ಟು ಕಡಿಮೆ ಆಗಬೇಕು ಎನ್ನುವ ಉದ್ದೇಶದಿಂದ ಸ್ಥಳೀಯ ಮಟ್ಟದಲ್ಲಿ ಕೂಡ ಸಮಸ್ಯೆಗಳು ಪರಿಹಾರ ಆಗಬೇಕು ಎನ್ನತಕ್ಕಂಥ ವಿಚಾರವನ್ನು ನಮ್ಮ ಸರ್ಕಾರದವರು ಈಗಾಗಲೇ ಮಂಡನೆ ಮಾಡಿ ಲೋಕಲ್ ಇಷ್ಯೂಸನ್ನು ಲೋಕಲ್ ಆಗಿಯೇ ತೀರ್ಮಾನ ಮಾಡಬೇಕು, ಬೆಂಗಳೂರಿಗೆ ಬರಬೇಕಾದುದಿಲ್ಲ ಎನ್ನುವ ತೀರ್ಮಾನಕ್ಕೆ ಬಂದು ಈಗಾಗಲೇ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ. ಸ್ಥಳೀಯ ಮಟ್ಟದಲ್ಲಿಯೇ ಹೆಚ್ಚಿನ ಅಧಿಕಾರವನ್ನು ಕೊಡುವಂಥ ವಿಚಾರ ಮೆಚ್ಚುವಂಥದ್ದಾಗಿದೆ. ಒಳ್ಳೆಯ ಸರ್ಕಾರ ಎನ್ನುವುದು, ಸರ್ಕಾರ ಯಾವ ರೀತಿ ಕೆಲಸ ಮಾಡುತ್ತದೆನ್ನುವುದರ ಮೇಲೆ ಆಧಾರವಾಗುತ್ತದೆಯೇ ಹೊರತು, ಬೇರೆಯಲ್ಲ ಎಂಬುದು ನಮಗೂ ನಿಮಗೂ ಗೊತ್ತಿದೆ. ಮಾನ್ಯ ಕೃಷ್ಣರವರ ನೇತೃತ್ವದಲ್ಲಿ ಇದನ್ನು ಮಾಡಬೇಕೆಂದು ನಾವು ಈಗಾಗಲೇ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ. ನಮ್ಮ ಅಜೆಂಡಾದಲ್ಲಿ ಕೂಡ ಇದರ ಬಗ್ಗೆ ವಿಷದವಾಗಿ ಹೇಳಿರುವುದು ಬಹಳ ಉತ್ತಮವಾಗಿದೆ ಮತ್ತು ಶ್ಲಾಘನೀಯವಾದುದಾಗಿದೆ ಎಂದು ಹೇಳಲು ಬಯಸುತ್ತೇನೆ. ಕರ್ನಾಟಕ ರಾಜ್ಯದಲ್ಲಿ ಅನೇಕ ಜಿಲ್ಲೆಗಳಲ್ಲಿ ಅಸಮತೋಲನವಿದೆ; ಅಭಿವೃದ್ಧಿಯಾಗಿಲ್ಲ. ನಮ್ಮಲ್ಲಿರುವ

ಅಸಮತೋಲನವನ್ನು ತೆಗೆಯುತ್ತೇವೆಂದು ಇಡೀ ರಾಜ್ಯವನ್ನು ಸಮಾನ್ಯ ದೃಷ್ಟಿಯಿಂದ ಅಭಿವೃದ್ಧಿಪಡಿಸುತ್ತೇವೆನ್ನುವ ಏಕೈಕ ಗುರಿಯನ್ನು ಇಟ್ಟುಕೊಂಡಿರುವುದನ್ನು ತಾವೆಲ್ಲರೂ ಸ್ವಾಗತ ಮಾಡುತ್ತೀರಿ ಎನ್ನುವ ಮಾತು ನನಗೆ ಸಂತೋಷ ಕೊಡುತ್ತದೆ. ನಮ್ಮ ಸರ್ಕಾರ ಹಿಂದಿನ ಸರ್ಕಾರಕ್ಕಿಂತ ಜಾಸ್ತಿ ಕುಡಿಯುವ ನೀರು ಕೊಡಬೇಕೆಂದು ಯಾಚಿಸಿದೆ. ಹಿಂದಿನ ಸರ್ಕಾರ 35 ಲೀಟರ್-40 ಲೀಟರ್ ಕೊಡಲಿಲ್ಲ. ನಾವು ಸುಮಾರು 55 ಲೀಟರ್ ಕುಡಿಯುವ ನೀರನ್ನು ಕೊಡಬೇಕೆಂಬ ಬಗ್ಗೆ ಯೋಜನೆ ಹಾಕಿಕೊಂಡಿದ್ದೇವೆ. ಬೇರೆ ಅರ್ಥದಲ್ಲಲ್ಲ, ಉತ್ತಮವಾದ ನೀರನ್ನು ಜನತೆಗೆ ಕೊಡುವ ವಿಚಾರದಲ್ಲಿ ಸರ್ಕಾರ ಮುಂದೆ ಬಂದಿದೆ ಎಂದರೆ ನಮ್ಮ ಕಾಳಜಿ ಏನು ಎನ್ನುವುದನ್ನು ತಾವು ಅರ್ಥ ಮಾಡಿಕೊಳ್ಳಬೇಕೆಂಬ ವಿಚಾರದಲ್ಲಿ ನಾನು ತಮ್ಮ ಗಮನ ಸೆಳೆಯ ಬಯಸುತ್ತೇನೆ. ವಿದ್ಯಾವಂತರ ಸಂಖ್ಯೆಯನ್ನು ಕೂಡ ಇವತ್ತು ಶೇ. 80ರವರೆಗೂ ತೆಗೆದುಕೊಂಡು ಹೋಗಬೇಕೆಂಬ ವಿಚಾರವನ್ನು ಅಜೆಂಡಾದಲ್ಲಿ ಮಂಡಿಸಿದ್ದೇವೆ, ಭಾಷಣದಲ್ಲೂ ಹೇಳಿದ್ದೇವೆ. ಇದರ ಉದ್ದೇಶವೇನೆಂದರೆ, ಎಲ್ಲರೂ ವಿದ್ಯಾವಂತರಾದರೆ ಅನೇಕ ಸಾಮಾಜಿಕ, ಆರ್ಥಿಕ ಸಮಸ್ಯೆಗಳು ಪೂರ್ಣವಾಗಿ ಬಗೆಹರಿಯುತ್ತವೆಂಬುದರಲ್ಲಿ ಎರಡು ಮಾತಿಲ್ಲ. ಎಲ್ಲಕ್ಕಿಂತ ಮೆಚ್ಚುವ ಮಾತೆಂದರೆ, Universalisation of education-Education is the right ಸಂವಿಧಾನದಲ್ಲಿ ಡೈರೆಕ್ಟಿವ್ ಪ್ರಿನ್ಸಿಪಲ್‌ನಲ್ಲಿ ಏನಿದೆ, ಅದನ್ನು ನಾವಿಲ್ಲಿ ಯುನಿವರ್ಸಲೈಜೇಷನ್ ಆಫ್ ಎಜುಕೇಷನ್ ಎನ್ನುವ ಮಾತನ್ನು ನಾವೀಗಾಗಲೇ ಕಾರ್ಯಕ್ರಮ ಹಮ್ಮಿಕ್ಕೊಂಡು ನಡೆಸಿರುವುದು ನಿಜವಾಗಲೂ ಹೆಚ್ಚಿನ ವಿದ್ಯಾಭ್ಯಾಸಕ್ಕೆ ನಾವು ಕೊಡುವ ಮಾನ್ಯತೆ ಎನ್ನುವ ಮಾತನ್ನು ಹೇಳಬೇಕಾಗುತ್ತದೆ. ಮನೆ ಇಲ್ಲದವರಿಗೆ ಮನೆ ಕೊಡುವ ಕಾರ್ಯಕ್ರಮವನ್ನು ಹಿಂದಿನ ಸರ್ಕಾರದವರೂ ಮಾಡಿದ್ದಾರೆ. ಅದಕ್ಕಿಂತ 10ರಷ್ಟು ಜಾಸ್ತಿ ಆಧುನಿಕ ಮನೆಗಳನ್ನು ಕೊಡುವ ಬಗ್ಗೆ ಯೋಚನೆ ಮಾಡಿರುವುದು ನಾವೆಲ್ಲ ಸ್ವಾಗತಿಸಬೇಕಾದ ವಿಚಾರ. ವ್ಯವಸಾಯ ಕ್ಷೇತ್ರದಲ್ಲಿ ಹಿಂದಿನವರು ಮಣ್ಣಿನ ಮಕ್ಕಳು, ಅದು ಮಾಡುತ್ತೇವೆ, ಇದು ಮಾಡುತ್ತೇವೆ ಎಂಬ ಮಾತು ಹೇಳಿರಬಹುದು. ಆದರೆ, ಇವತ್ತು ರೈತರಿಗೆ ಬೆಲೆ ಸಿಗುವುದಿಲ್ಲವೆಂಬ ಕೂಗೇನಿದೆ, ಅದಕ್ಕಾಗಿ ನಮ್ಮ ಸರ್ಕಾರ ಅವರಿಗೆ ಕ್ರಾಪ್ ಇನ್‌ಷೂರೆನ್ಸ್ ಕೊಡಬೇಕು, ಪೋಸ್ಟ್ ಹಾರ್ವೆಸ್ಟ್ ಟೆಕ್ನಾಲಜಿಯನ್ನು ಮಾಡರ್ನ್ ಸೈನ್ಸ್ ಮೂಲಕ ಅದನ್ನು ಕಾರ್ಯಗತ ಮಾಡಬೇಕೆಂಬ ವಿಚಾರವನ್ನು ಏನು ಯೋಚನೆ ಮಾಡಿದೆ, ಅದು ನಿಜಕ್ಕೂ ಮೆಚ್ಚತಕ್ಕ ವಿಚಾರ. ನಮ್ಮ ರೈತ ಬೆಳೆದ ಬೆಳೆಯನ್ನು ಮಾರ್ಕೆಟಿಂಗ್ ಮಾಡಲಿಕ್ಕಾಗುತ್ತಿಲ್ಲ. ಮಾರ್ಕೆಟಿಂಗ್ ಟೆಕ್ನಾಲಜಿಯಲ್ಲಿ ಕೂಡ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್ ಮಾಡಿ ಆ ರೈತನಿಗೆ ಮಾಹಿತಿ ಒದಗಿಸಬೇಕೆಂದು ನಮ್ಮ ಸರ್ಕಾರವೇನು ಮಾಡಲಿಕ್ಕೆ ಹೊರಟಿದೆ ಇದು ಮೆಚ್ಚುವ ವಿಚಾರ. ಆರ್ಥಿಕವಾಗಿ ರೈತನಿಗೆ ಬಹಳ ಬೆಳವಣಿಗೆ ಕೊಡುವ ವಿಚಾರ. ಅವನ ಜೋಬಿಗೆ ದುಡ್ಡು ಕೊಡುವ ವಿಚಾರವೆಂಬುದರಲ್ಲಿ ಎರಡು ಮಾತಿಲ್ಲ. ಈ ರೀತಿ ವಿಶೇಷ ಸ್ಕೀಂಗಳನ್ನು ಹಾಕಿಕೊಂಡು

ನಮ್ಮ ಸರ್ಕಾರದವರು ಈಗ ಮುಂದೆ ಬಂದಿರುವುದು ಬಹಳ ಮೆಚ್ಚತಕ್ಕ ವಿಚಾರ. ಇನ್ನು ಇಂಡಸ್ಟ್ರಿಗಳ ಬೆಳವಣಿಗೆ ಬಗ್ಗೆ ಯೋಚಿಸುವುದಾದರೆ, ಈಗಾಗಲೇ ನಮ್ಮ ಸರ್ಕಾರ ಯಾವ ದಿಕ್ಕಿನಲ್ಲಿ ಹೋಗಿದೆ ನಮ್ಮ ನೋಟ, ಗುರಿ, ಡೆಡಿಕೇಷನ್, ಕಮಿಟ್‌ಮೆಂಟ್ ಏನೆಂಬುದನ್ನು ನಾವೀಗಾಗಲೇ ಸ್ಪಷ್ಟಪಡಿಸಿದ್ದೇವೆ. ನಮ್ಮ ಗುರಿ ಹೆಚ್ಚಿನ ಬಂಡವಾಳವನ್ನು ಆಕರ್ಷಿಸಿ, ಕರ್ನಾಟಕದಲ್ಲೇ ಜಾಸ್ತಿ ಇನ್‌ವೆಸ್ಟ್ ಮಾಡುವ ರೀತಿ ಮಾಡಿ, ಹೆಚ್ಚಿನ ಜನರಿಗೆ ಎಂಪ್ಲಾಯ್‌ಮೆಂಟ್ ಜನರೇಟ್ ಮಾಡಬೇಕು, ಎಕನಾಮಿಕ್ ಡೆವಲಪ್‌ಮೆಂಟ್ ಮಾಡಬೇಕೆನ್ನುವ ನಿಟ್ಟಿನಲ್ಲಿ ಸರ್ಕಾರ ಯೋಚಿಸಿ, ಈಗಾಗಲೇ ಕ್ಯಾಪಿಟಲ್‌ನ್ನು ಆಕರ್ಷಣೆ ಮಾಡುವಂತೆ ಮಾಡಿದೆ. ಈ ಒಂದು ಸಂದರ್ಭದಲ್ಲಿ ನಾನು ಅಧ್ಯಕ್ಷರ ಮುಖಾಂತರ ಸಲಹೆ ಕೊಡಲು ಬಯಸುತ್ತೇನೆ. ಮೊನ್ನೆ ನಾನು ಹೊಸೂರಿಗೆ ಹೋಗಿದ್ದಾಗ, ಮದ್ರಾಸ್ ಸರ್ಕಾರ ಅಗಾಧವಾದ ಇನ್‌ಸೆಂಟೀವ್ ಕೊಟ್ಟು ನಮ್ಮ ಬೆಂಗಳೂರು ನಗರದಲ್ಲಿರಬೇಕಾದ ಇಂಡಸ್ಟ್ರಿಗಳು ಅಲ್ಲಿ ಹೋಗುವಂತೆ ಆಗಿದೆ. ಈ ತರಹದ ಪರಿಸ್ಥಿತಿ ಬರಬಾರದು. ಅವು ನಮ್ಮಲ್ಲೇ ಇರಬೇಕು. ನಮ್ಮ ಜನ ಬೆಳಿಗ್ಗೆ ಎದ್ದರೆ ಹೊಸೂರಿಗೆ ಹೋಗುತ್ತಿದ್ದಾರೆ. ಸಾವಿರಾರು ಜನ ಬಸ್ಸಿನಲ್ಲಿ ಹೋಗುವ ಪರಿಸ್ಥಿತಿ ಬಂದಿದೆ. ಹಿಂದಿನವರು ಯಾರು ಮಾಡಿದ್ದಾರೆಂಬುದು ಗೊತ್ತಿಲ್ಲ. ನಮ್ಮ ಬಂಡವಾಳ, ಮ್ಯಾನ್ ಪವರ್, ಇಂಟೆಲಿಜೆನ್ಸ್, ಇಂಟೆಲೆಕ್ಚುಯಲ್ ಅಬಿಲಿಟಿ ಇವತ್ತು ತಮಿಳುನಾಡಿಗೆ ಮೈಗ್ರೇಟ್ ಆಗಿದೆ ಎಂದರೆ ಇದು ಯೋಚಿಸಬೇಕಾದ ವಿಚಾರ. ಮುಖ್ಯಮಂತ್ರಿಗಳು ಈಗಾಗಲೇ ಮೈಸೂರಿನಲ್ಲಿ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿ ಕೈಗಾರಿಕಾ ಬೆಳವಣಿಗೆ ಬಗ್ಗೆ ಅತೀ ಹೆಚ್ಚಿನ ವಿಚಾರ ಅರಿತುಕೊಂಡಿದ್ದಾರೆ. ನಮ್ಮ ಅಜೆಂಡಾ ನೋಡಿದಾಗ ನನಗನ್ನಿಸುತ್ತದೆ, ನಮ್ಮದು ರಾಜನೀತಿ ಅಲ್ಲ, ಲೋಕನೀತಿ ಎಂಬುದನ್ನು ನಾವೆಲ್ಲರೂ ಒಪ್ಪಬೇಕಾಗುತ್ತದೆ. ನಮ್ಮ 12 ಪುಟಗಳ ಭಾಷಣವನ್ನು ತಾವು ನೋಡಿದರೆ, It is nothing but a ``Loka-Neethi" but not a ``Raja-neethi" ಇದರಲ್ಲಿ ಪಾಲಿಟಿಕ್ಸ್ ಇಲ್ಲ. ಪ್ರಾಕ್ಟಿಕಲ್ ಆಗಿ ಮಾಡುತ್ತೇವೆಂಬ ಮಾತು ಅದರಲ್ಲಿ ಅಡಕವಾಗಿದೆ. ಹಾಗೆಯೇ, ಹಿಂದುಳಿದ ಜನಾಂಗದ ಬಗ್ಗೆ ಕಾಳಜಿ ವಹಿಸಿ ಹೆಚ್ಚಿನ ರೀತಿಯಲ್ಲಿ ಎಂಪ್ಲಾಯ್‌ಮೆಂಟ್ ಕೊಡುವುದಕ್ಕೆ ಸರ್ಕಾರ ಮುಂದೆ ಬಂದಿದೆ ಎಂಬ ವಿಚಾರವನ್ನು ಇಲ್ಲಿ ನೋಡುತ್ತಿದ್ದೇವೆ. ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡು ಪ್ರೋಗ್ರೆಸಿವ್ ಗೌರ್ನಮೆಂಟ್ ರೀತಿಯಲ್ಲಿ ಅದನ್ನು ಜಾರಿಗೆ ತರಬೇಕೆಂಬ ಇಚ್ಛೆ ನಮ್ಮ ಸರ್ಕಾರಕ್ಕಿದೆ ಎಂಬುದರಲ್ಲಿ ಎರಡು ಮಾತಿಲ್ಲ. ನಾನು ಮತ್ತೊಮ್ಮೆ ಮಾನ್ಯ ಅಧ್ಯಕ್ಷರ ಮುಖಾಂತರ ಮನವಿ ಮಾಡುವುದೇನೆಂದರೆ, ಇನ್ನು ಮುಂದೆ ಕಂಪ್ಯೂಟರ್ ಬಿಟ್ಟು ನಾವು ಯಾರೂ ಬದುಕಲಿಕ್ಕಾಗುವುದಿಲ್ಲವೆಂಬ ಸ್ಟೇಜ್‌ನಲ್ಲಿದ್ದೇವೆ. ಕಂಪ್ಯೂಟರ್ ಎಜುಕೇಷನ್‌ನ್ನು ಮಾನ್ಯ ಮುಖ್ಯಮಂತ್ರಿಗಳು ಕಡ್ಡಾಯವಾಗಿ ಯಾವ್ಯಾವ ಲೆವೆಲ್‌ನಲ್ಲಿ, ಯಾವ್ಯಾವ ಇಂಟೆಲಿಜರೆಟ್ ಕೆಪಾಸಿಟಿ ಇರುತ್ತದೆ, ಅದರ ಮುಖಾಂತರ ಇದನ್ನು ಜಾರಿಗೆ ತಂದರೆ ನಮಗೂ, ದೇಶಕ್ಕೂ,

ಮಕ್ಕಳಿಗೂ ಬಹಳಷ್ಟು ಅನುಕೂಲವಾಗುತ್ತದೆ. ನನ್ನ ಕ್ಷೇತ್ರ ಮೈಸೂರಿನ ಸುತ್ತವಿರುವ ಕ್ಷೇತ್ರ. ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಅರ್ಧ ಭಾಗ 30 ಭಾಗದಷ್ಟು ಮೈಸೂರು ನಗರಕ್ಕೆ ಸೇರುತ್ತದೆ. ನಮ್ಮ ಮೈಸೂರು ನಗರದಲ್ಲಿರುವ ಪ್ಯಾಲೇಸ್ ಟೂರಿಸಂ ಅಕ್ಟಿವಿಟೀಸ್ ದೃಷ್ಟಿಯಿಂದ ಪ್ರಮುಖ ಆಕರ್ಷಣೆ ಇದ್ದು, ಜನರನ್ನು, ಬಂಡವಾಳವನ್ನು ಆಕರ್ಷಿಸುತ್ತಿದೆ. ಸಾವಿರಾರು ಜನರು ಇದರಿಂದಲೇ ಬದುಕುತ್ತಿದ್ದಾರೆ. ಇದು ಪ್ರಾಮುಖ್ಯವಾದ ಪ್ಯಾಲೇಸ್ ಎಂಬುದನ್ನು ನಾವು ಮರೆಯಬಾರದು. ಈ ಪ್ಯಾಲೆಸ್‌ಗೆ ಇವತ್ತು ಗಂಡಾಂತರ ಬಂದಿದೆ. ಅದರ ವಿಚಾರವನ್ನು ಇವತ್ತು ಟೂರಿಸಂ ದೃಷ್ಟಿಯಿಂದ, ಮಾನಾರ್ಕಿ ಉಳಿಯಬೇಕೆಂಬ ಪ್ರಶ್ನೆ ಅಲ್ಲ, ಉಳಿಸಿಕೊಂಡರೆ ತಪ್ಪಾಗಲಾರದು. ಇಡೀ ಪ್ರಪಂಚಕ್ಕೆ ಡೆಮಾಕ್ರಸಿ ಕೊಟ್ಟದ್ದು ಯುನೈಟೆಡ್ ಕಿಂಗ್‌ಡಂ. Today they have maintained their monarchy, they have maintained their kingship, they have maintained their queenship. ಅವರೇ ಇನ್ನೂ ಇಟ್ಟುಕೊಂಡಿದ್ದಾರೆಂದರೆ, ಜನರನ್ನು ಆಕರ್ಷಿಸುವ ದೃಷ್ಟಿಯಿಂದ, ರಾಜ್ಯದ ಬೆಳವಣಿಗೆ ದೃಷ್ಟಿಯಿಂದ ನಮ್ಮ ದೇಶದಲ್ಲಿ ಅದನ್ನು ಇಟ್ಟುಕೊಂಡರೆ ತಪ್ಪಾಗಲಾರದು. ನಮ್ಮ ಮೈಸೂರ್‍ಯಾ ಪ್ಯಾಲೇಸ್‌ಗೆ ಬಂದಿರುವ ಗಂಡಾಂತರ ಏನಿದೆ ಇದರ ಬಗ್ಗೆ ಕಾಳಜಿ ವಹಿಸಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಮೈಸೂರು ಜಿಲ್ಲೆಯ ಜನರಿಗೆ ಅನ್ನ ಕೊಡುವುದು ವರುಣಾ ಚಾನೆಲ್. ಇದು 20 ವರ್ಷಗಳ ಹಿಂದೆ ಹುಟ್ಟಿದ ಕೂಸು. ಇನ್ನೂ ನಡೆಯಲಿಕ್ಕೇ ಸಾಧ್ಯವಾಗುತ್ತಿಲ್ಲ. ಈಗ ನೀರು ಕೊಡುವ ಪರಿಸ್ಥಿತಿ ಬಂದಿದೆ. 2000ನೇ ಇಸವಿಗೆ ನೀರು ಕೊಡುವ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಅಷ್ಟರಲ್ಲಿ ನೀರು ಹರಿಯುತ್ತದೆ, 20001ನೇ ಇಸವಿಗೆ ಅದನ್ನು ಮುಗಿಸಬೇಕು. ಬೇರೆ ದಾರಿ ಇಲ್ಲ. ಮೈಸೂರಿನ ಸೌತ್ ಝೋನ್‌ನಲ್ಲಿ ನೀರು ಕೊಡಲು ಸಿದ್ಧವಾಗಿರುವ ಪ್ರಾಜೆಕ್ಟ್ ಎಂದರೆ ಅದು ವರುಣಾ ನಾಲೆಯೊಂದೆ. ನನ್ನ ಕ್ಷೇತ್ರದ ಕೆಲಸವಾದರೆ, ಜನ ಆರ್ಥಿಕವಾಗಿ ಮುಂದುವರೆದು, ಬೆಳವಣಿಗೆಯಾಗುತ್ತದೆನ್ನುವ ಮಾತನ್ನು ಹೇಳುತ್ತಿದ್ದೇನೆ. ಮಾನ್ಯ ದೇವರಾಜು ಅರಸುರವರ ಕಾಲದಲ್ಲಿದ್ದ 2-3 ಕಾರ್ಯಕ್ರಮಗಳನ್ನು ಮಾನ್ಯ ಅಧ್ಯಕ್ಷರ ಮುಖಾಂತರ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಹಳ್ಳಿಗಾಡಿನಲ್ಲಿ ಪರಿವರ್ತನೆಯಾಗಿದೆ. ಹಿಂದುಳಿದ ಜನಾಂಗ ರಾಜಕೀಯವಾಗಿ ಮುಂದೆ ಬಂದಿದೆ. ಇವರ ಮೇಲೆ ಅಲ್ಲೆಲ್ಲ ದಬಾವಣೆಗಳಾಗುತ್ತಿವೆ. ವಿಲೇಜ್ ಡಿಫೆನ್ಸ್ ಫೋರ್ಸ್ ಎಂದು ಮಾಡಿದ್ದರು. ಈ ಡಿ.ಡಿ.ಎಫ್. ಅನ್ನು ಈ ಸಾರಿ ರಿವ್ಯುವ್ ಮಾಡಿದಾಗ ಹಿಂದುಳಿದ ಜನಾಂಗಕ್ಕೆ ಒಂದು ನೆಮ್ಮದಿ ಬರುತ್ತದೆ ಎನ್ನತಕ್ಕಂಥ ಮಾತನ್ನು ಹೇಳುತ್ತಾ, ಮದ್ರಾಸ್ ಅಡ್ಮಿಸ್ಟ್ರೇಷನಲ್ಲಿ ವಿಲೇಜ್ ಮುನ್ಸೀಫ್ ಎನ್ನುವ ಒಂದು ಸಿಸ್ಟಂ ಇದೆ, ಇವರು ಹಳ್ಳಿಗಾಡಿನ ಸಮಸ್ಯೆಗಳನ್ನು ಬಗೆಹರಿಸುತ್ತಾರೆ. Village Munsiffs are nothing but Arbitrators, they are appointed on honorarium. ಇದನ್ನು ಪರಿಶೀಲಿಸಬೇಕು ಎನ್ನುವ ಸಲಹೆಗಳನ್ನು ನಾನು ಕೊಡಬಯಸುತ್ತೇನೆ. ಜನತೆಯ

ಕಷ್ಟಗಳನ್ನು ಬಿಡುಗಡೆಗೊಳಿಸಲು ನಮ್ಮ ಸರ್ಕಾರ ಉತ್ಸಾಹದಿಂದ ಇದೆ. ಸರ್ಕಾರವನ್ನು ಜನತೆಯ ಮುಂದೆ ತೆಗೆದುಕೊಂಡು ಹೋಗತಕ್ಕಂಥ ವ್ಯವಸ್ಥೆ ಮಾಡಬೇಕು ಎನ್ನುವ ಮಾತನ್ನು ಹೇಳುತ್ತಾ ಮಾನ್ಯ ರಾಜ್ಯಪಾಲರು ದಿ:27ರಂದು ಏನು ಭಾಷಣ ನೀಡಿದ್ದಾರೆ ಅದನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸಿ ನಮ್ಮ ಮಾನ್ಯ ಕೃಷ್ಣಾರವರ ನೇತೃತ್ವದಲ್ಲಿರತಕ್ಕಂಥ ಸರ್ಕಾರ ಚೆನ್ನಾಗಿ ಕೆಲಸ ಮಾಡುತ್ತದೆ ಎಂದು ಹೇಳುತ್ತಾ ಇಲ್ಲಿ ಮಾತನಾಡಲು ಅವಕಾಶ ಕಲ್ಪಿಸಿ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಭಕ್ತವತ್ಸಲಂ (ಕೆಜಿಎಫ್):- ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ನನಗೆ ಮಾತನಾಡಲು ಅವಕಾಶ ಕಲ್ಪಿಸಿ ಕೊಟ್ಟಿದ್ದಕ್ಕೆ ನಾನು ತಮಗೆ ನನ್ನ ಪರವಾಗಿ ಹಾಗೂ ನನ್ನ ಕ್ಷೇತ್ರದ ಜನತೆಯ ಪರವಾಗಿ ತಮಗೆ ವಂದಿಸುತ್ತೇನೆ. ಮಾನ್ಯ ಎಸ್.ಎಂ. ಕೃಷ್ಣಾರವರ ನೇತೃತ್ವದ ಜನಪ್ರಿಯ ಕಾಂಗ್ರೆಸ್ ಸರ್ಕಾರ ಒಳ್ಳೆಯ ಯೋಜನೆಗಳನ್ನು ಈ ಭಾಷಣದಲ್ಲಿ ಹೇಳಿಸಿದ್ದಾರೆ. ಈ ಭಾಷಣದ ಬಗ್ಗೆ ಮಾತನಾಡುವ ಮುಂದೆ ನಾನು ಒಂದು ವಿಚಾರವನ್ನು ಇಲ್ಲಿ ಹೇಳಬಯಸುತ್ತೇನೆ. ಅದೇನೆಂದರೆ, ಇಲ್ಲಿರುವ ಕೆಲವು 19 ಜನ ಶಾಸಕರು ಸೇರಿಕೊಂಡು ಒಂದು ಗುಂಪು ರಚಿಸಿದ್ದಾರೆ. ಈ ಗುಂಪಿನಲ್ಲಿ ನನ್ನ ಹೆಸರು ಸೇರಿರುವುದರಿಂದ ಸ್ವಲ್ಪ ನನಗೆ ಇರಿಸುಮುರಿಸು ಉಂಟಾಗಿದೆ. ಏಕೆಂದರೆ, ಕೆಲವು ಪ್ರೆಸ್‌ನವರು ಹಾಗೂ ಕೆಲವು ಶಾಸಕರು ಆ ಗುಂಪಿನಲ್ಲಿ ನಿಮ್ಮ ಹೆಸರು ಇದೆ ಎಂದು ಹೇಳಿದ್ದಾರೆ. ನಾನು ಒಂದು ಪಕ್ಷದ ವತಿಯಿಂದ ಇಲ್ಲಿಗೆ ಗೆದ್ದು ಬಂದಿರುತ್ತೇನೆ. ಆ ಗುಂಪಿಗೂ ನನಗೂ ಏನೂ ಸಂಬಂಧವಿಲ್ಲ. ಈ ಸಭೆಯಲ್ಲಿ ನಾನು ಈ ವಿಚಾರವನ್ನು ಕ್ಲಿಯರ್ ಮಾಡಬೇಕಾಗಿದೆ. ಏಕೆಂದರೆ, ನಾವು ಆಲ್ ಇಂಡಿಯಾ ಲೆವಲ್‌ನಲ್ಲಿ ಕಾಂಗ್ರೆಸ್ ಜೊತೆಗೆ ಅಲೆಯನ್ಸ್ ಮಾಡಿಕೊಂಡಿದ್ದೇವೆ. ಅಲೆಯನ್ಸ್ ಪಾರ್ಟಿಯಾಗಿ ನಾವು ಇರುತ್ತೇವೆ. ಆದರೆ ಇಲ್ಲಿ ಏನಾಗಿದೆ ಎಂದರೆ ಈ ಇಂಡಿಪೆಂಡೆಂಟ್ಸ್ ಗ್ರೂಪ್‌ನಲ್ಲಿ ನನ್ನ ಹೆಸರು ಸೇರಿರುವುದರಿಂದ, ಕೋಲಾರ ಲೋಕಲ್ ಪೇಪರ್‌ನಲ್ಲಿ ಈ ವಿಚಾರ ಬಂದಿರುವುದರಿಂದ ಪ್ರೆಸ್‌ನವರು ಕೂಡ ನನ್ನನ್ನು ಪ್ರಶ್ನಿಸುತ್ತಾರೆ. ಆದ್ದರಿಂದ ನಾನು ಅದನ್ನು ಇಲ್ಲಿ ಕ್ಲಿಯರ್ ಮಾಡಲು ಇಚ್ಛಿಸುತ್ತೇನೆ.

ಅಧ್ಯಕ್ಷರು:- ನೀವು ಇದನ್ನು ಕ್ಲಾರಿಫೈ ಮಾಡಿರುವುದರಿಂದ ಅದನ್ನು ತೆಗೆದುಹಾಕುತ್ತಾರೆ ಬಿಡಿ. ಈಗ ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಿ.

ಶ್ರೀ ಎಂ. ಭಕ್ತವತ್ಸಲಂ:- ಈ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಕುಡಿಯುವ ನೀರಿನ ವ್ಯವಸ್ಥೆ, ರಸ್ತೆಗಳ ವ್ಯವಸ್ಥೆ, ಹಾಗೂ ಈ ಸ್ಲಮ್ ಏರಿಯಾಗಳನ್ನು ಅಭಿವೃದ್ಧಿ ಮಾಡುತ್ತೇವೆಂದು ಹೇಳಿದ್ದಾರೆ. ಯಾರ್ಯಾರಿಗೆ ಅಂದರೆ ಬಡವರಿಗೆ ಮನೆ ಇಲ್ಲವೋ ಅಂಥವರಿಗೆಲ್ಲ ಮನೆಗಳನ್ನು ಕೊಡಿಸತಕ್ಕಂಥ ವ್ಯವಸ್ಥೆ ಮಾಡುತ್ತೇವೆಂದು ಹೇಳಿದ್ದಾರೆ. ಎಸ್‌ಸಿ:ಎಸ್‌ಟಿಗಳನ್ನು ಡೆವಲಪ್ ಮಾಡುತ್ತೇವೆಂದು ಹೇಳಿದ್ದಾರೆ. ಶಿಕ್ಷಣದಲ್ಲಿ ಹಾಗೂ

ಸರ್ಕಾರಿ ಉದ್ಯೋಗಗಳಲ್ಲಿ ಮಹಿಳೆಯರಿಗೆ ಸಮಾನತೆ ಕೊಡುತ್ತೇವೆಂದು ಹೇಳಿದ್ದಾರೆ. ನಾನು ಈ ಮೊದಲು 1983 ಮತ್ತು 1989ರಲ್ಲಿ ಎಂದು ಬಾರಿ ವಿಧಾನಸಭೆಗೆ ಆಯ್ಕೆಯಾಗಿರುತ್ತೇನೆ. ಈ ಎರಡು ಟರ್ಮ್‌ನಲ್ಲಿ ಡಿಫ್‌ರೆನ್ಸ್ ಸರ್ಕಾರವನ್ನು ನೋಡಿದ್ದೇನೆ. ಅಂದರೆ 1983ರಲ್ಲಿ ಜನತಾ ಸರ್ಕಾರ ಹಾಗೂ 1989ರಲ್ಲಿ ಕಾಂಗ್ರೆಸ್ ಸರ್ಕಾರವನ್ನು ನೋಡಿದ್ದೇನೆ. ಈ ಎರಡು ಸರ್ಕಾರದಲ್ಲಿ ಕಾಂಗ್ರೆಸ್ ಸರ್ಕಾರದವರು ಜನತೆಗೆ ಮತ್ತು ಈ ದೇಶಕ್ಕೆ ಹಾಗೂ ಈ ರಾಜ್ಯಕ್ಕೆ ಏನು ಹೇಳಿರುತ್ತಾರೋ ಅದನ್ನು ಮಾಡುತ್ತಾರೆ, ಏನು ಮಾಡುತ್ತಾರೋ ಅದನ್ನು ಹೇಳುತ್ತಾರೆ. ಇವರೇನು ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ ಅದನ್ನೆಲ್ಲಾ ಇಂಪ್ಲಿಮೆಂಟ್ ಮಾಡುತ್ತಾರೋ ಎನ್ನುವ ಡೌಟ್ ಜನರಿಗೆ ಬಂದಿದೆ. ಹೊಸ ಸರ್ಕಾರ ಬಂದ ಮೇಲೆ ಖಂಡಿತವಾಗಿ ತಾವು ಹೇಳಿರುವ ಹೊಸ ಹೊಸ ಯೋಜನೆಗಳನ್ನು ಇಂಪ್ಲಿಮೆಂಟ್ ಮಾಡುತ್ತಾರೆ ಎನ್ನುವ ನಂಬಿಕೆಯನ್ನು ನಾವು ಇಟ್ಟುಕೊಂಡಿದ್ದೇವೆ. ನನ್ನ ಕ್ಷೇತ್ರದಲ್ಲಿ ಬಹಳ ತೊಂದರೆ ಇದೆ, ಅದರಲ್ಲಿ ಕುಡಿಯುವ ನೀರಿನ ತೊಂದರೆಯಂತೂ ಬಹಳ ಇದೆ. ಬೆಂಗಳೂರಿನಲ್ಲಿ ತಿಂಗಳಿಗೆ ಕುಡಿಯುವ ನೀರಿಗಾಗಿ ನಲವತ್ತು ರೂಪಾಯಿಗಳನ್ನು ತೆಗೆದುಕೊಳ್ಳುತ್ತಾರೆ ಒಂದು ದಿವಸ ಬಿಟ್ಟು ಒಂದು ದಿವಸ ಕಾವೇರಿ ನೀರನ್ನು ಸರಬರಾಜು ಮಾಡುತ್ತಾರೆ. ಆದರೆ ನಮ್ಮ ಕೆ.ಜಿ.ಎಫ್.ನಲ್ಲಿ ಬೇತಮಂಗಲ ಕೆರೆಯ ನೀರು ಮತ್ತು ಬೋರ್‌ವೆಲ್ ನೀರು ಎರಡನ್ನು ಮಿಕ್ಸ್ ಮಾಡಿ ವಾರಕ್ಕೆ ಒಂದು ದಿವಸ ನೀರು ಸರಬರಾಜು ಮಾಡಿ ಅದು ಅರ್ಧ ಗಂಟೆ ಮಾತ್ರ ಸರಬರಾಜು ಮಾಡಿ ತಿಂಗಳಿಗೆ ನಲವತ್ತು ರೂಪಾಯಿಗಳನ್ನು ಕಲೆಕ್ಟ್ ಮಾಡುತ್ತಾರೆ. ನಮ್ಮ ಹೊಸ ಸರ್ಕಾರ ಎಲ್ಲೆಲ್ಲಿ ಕುಡಿಯುವ ನೀರಿನ ತೊಂದರೆ ಇದೆ ಅದನ್ನು ಸರಿ ಮಾಡುತ್ತೇವೆ ಎನ್ನುವ ಮಾತನ್ನು ಈ ಭಾಷಣದಲ್ಲಿ ಹೇಳಿದ್ದಾರೆ. ಖಂಡಿತವಾಗಿ ಈ ಸರ್ಕಾರ ನಮ್ಮ ಕೆ.ಜಿ.ಎಫ್.ನಲ್ಲಿ ಕುಡಿಯುವ ನೀರಿನ ಬಗ್ಗೆ ಗಮನ ನೀಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಹಿಂದಿನ ಸರ್ಕಾರದವರು ತಮ್ಮ ಐದು ವರ್ಷಗಳ ಅವಧಿಯಲ್ಲಿ ಆಶ್ರಯ ಯೋಜನೆಯಲ್ಲಿ, ಅಂಬೇಡ್ಕರ್ ಯೋಜನೆಯಲ್ಲಿ ನಮ್ಮ ಕೆ.ಜಿ.ಎಫ್.ನಲ್ಲಿ ಒಂದೇ ಒಂದು ಮನೆಯನ್ನು ಕಟ್ಟಿ ಕೊಟ್ಟಿಲ್ಲ. ಅಲ್ಲಿ ಸುಮಾರು 60 ಪರ್ಸೆಂಟ್ ಎಸ್.ಸಿ.ಗಳು ಇದ್ದಾರೆ. ಅದರಲ್ಲೂ ಜಾಸ್ತಿ ಬಡವರು ಇದ್ದಾರೆ. ಆದ್ದರಿಂದ, ಈ ಸರ್ಕಾರದವರು ತಮ್ಮ ಭಾಷಣದಲ್ಲಿ ಹೆಚ್ಚು ಮನೆಗಳನ್ನು ಕಟ್ಟಿಸಿಕೊಡುತ್ತೇವೆ ಎನ್ನುವ ಏನೊಂದು ಭರವಸೆಯನ್ನು ಕೊಟ್ಟಿದ್ದಾರೆ ಆ ನಿಟ್ಟಿನಲ್ಲಿ ನಮ್ಮ ಕ್ಷೇತ್ರಕ್ಕೆ ಹೆಚ್ಚು ಮನೆಗಳನ್ನು ಕಟ್ಟಿಸಿ ಕೊಡುವಂಥ ಪ್ರೀತಿ ನಮ್ಮ ಮಾನ್ಯ ಮುಖ್ಯ ಮಂತ್ರಿಗಳಿಗೆ ಇರಬೇಕು ಎಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ನಮ್ಮ ಕ್ಷೇತ್ರದಿಂದ ಸುಮಾರು 25 ಕಿಲೋ ಮೀಟರ್ ಹೋದರೆ ಪಕ್ಷದ ರಾಜ್ಯದ ಆಂಧ್ರ ಪ್ರದೇಶದ ಮುಖ್ಯಮಂತ್ರಿ ಮಾನ್ಯ ಚಂದ್ರಬಾಬು ನಾಯ್ಡುರವರ ಕ್ಷೇತ್ರ ಬರುತ್ತದೆ. ಅಲ್ಲಿ ಎಲ್ಲಾ ರಸ್ತೆಗಳನ್ನು ಡಬಲ್ ರೋಡ್ ಮಾಡಿ ಟಾರ್ ಹಾಕಿಸಿ ಅಭಿವೃದ್ಧಿ ಮಾಡಿದ್ದಾರೆ; ಕುಪ್ಪಂ ಎನ್ನುವ ಹಳ್ಳಿಯಲ್ಲಿ ಸಿ ಸುಮಾರು

ಎಲ್ಲಾ ರಸ್ತೆಗಳು ಚೆನ್ನಾಗಿವೆ. ಆದರೆ ಅದರ ಪಕ್ಕದಲ್ಲಿರುವ ನಮ್ಮ ಕ್ಷೇತ್ರದಲ್ಲಿ ಎಲ್ಲಾ ರಸ್ತೆಗಳು ಹಾಳಾಗಿವೆ. ಆದ್ದರಿಂದ ಕೆಟ್ಟು ಹೋಗಿರುವ ಎಲ್ಲಾ ರಸ್ತೆಗಳನ್ನು ಅಭಿವೃದ್ಧಿಪಡಿಸಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ನಾನು ಕೇಳಿಕೊಳ್ಳುತ್ತೇನೆ. ಇದರ ಜೊತೆಗೆ ಕೆ.ಜಿ.ಎಫ್.ನಲ್ಲಿ ಸುಮಾರು 60 ಪರ್ಸೆಂಟ್ ಎಸ್ ಸಿ ಜನಾಂಗದವರು ಇದ್ದಾರೆ, ಹಿಂದಿನ ಸರ್ಕಾರದವರು ಇವರಿಗೇನೂ ಮಾಡಲಿಲ್ಲ, ಇಲ್ಲಿನ ಸುಮಾರು ಐದು ಸಾವಿರ, ಆರು ಸಾವಿರ ಜನಗಳುಪ್ರತಿ ದಿನ ಬೆಂಗಳೂರಿಗೆ ಪ್ರಯಾಣ ಮಾಡುತ್ತಾರೆ, ಏಕೆಂದರೆ ಅವರಿಗೆ ಏನೂ ಕೆಲಸವಿರುವುದಿಲ್ಲ. ಅದಕ್ಕೋಸ್ಕರವಾಗಿಯೇ ಈ ಸರ್ಕಾರದವರು ನಮ್ಮ ಕ್ಷೇತ್ರದಲ್ಲಿ ಸಣ್ಣ ಕೈಗಾರಿಕೆಗಳನ್ನು ಬೆಳೆಯುವುದಕ್ಕೆ ಅವಕಾಶ ಮಾಡಿಕೊಟ್ಟು ನಿರುದ್ಯೋಗ ನಿವಾರಣೆಗೆ ಕ್ರಮ ತೆಗೆದುಕೊಳ್ಳಬೇಕು ಎಂದು ಕೇಳಿಕೊಳ್ಳುತ್ತೇನೆ. ಇದರ ಜೊತೆಗೆ ಮಹಿಳೆಯರಿಗೆ ಶಿಕ್ಷಣದಲ್ಲಿ ಮತ್ತು ಉದ್ಯೋಗದಲ್ಲಿ ಆದ್ಯತೆ ಕೊಡಬೇಕು. ಕೆ.ಜಿ.ಎಫ್.ನಲ್ಲಿ ಅಸಿಸ್ಟೆಂಟ್ ತಹಸೀಲ್ದಾರ್ ಇದ್ದಾರೆ. ಈ ಸಂದರ್ಭದಲ್ಲಿ ಪ್ರತ್ಯೇಕ ತಾಲ್ಲೂಕು ಅನ್ನು ಮಾಡಿಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಏಕೆಂದರೆ, ಒಂದು ಜಿಲ್ಲೆಗೆ ಏನೇನು ಇರಬೇಕು ಅವೆಲ್ಲವು ನಮ್ಮ ಕೆ.ಜಿ.ಎಫ್.ನಲ್ಲಿ ಇವೆ. ಬಹುಶಃ ಮಾನ್ಯ ಸಭಾಧ್ಯಕ್ಷರಿಗೆ ಗೊತ್ತಿರುವಂತೆ ಇಡೀ ಕರ್ನಾಟಕ ರಾಜ್ಯದಲ್ಲಿ ಮೈಸೂರು ರಾಜ್ಯ ಎಂದು ಹಿಂದೆ ಏನು ಇತ್ತು ಆ ಸಂದರ್ಭದಲ್ಲಿ ಮೊಟ್ಟಮೊದಲ ಬಾರಿಗೆ ನಮ್ಮ ಕೆ.ಜಿ.ಎಫ್.ಗೆ ಶಿವನಸಮುದ್ರದಿಂದ ಕರೆಂಟ್‌ನ್ನು ಕೊಟ್ಟಿರತಕ್ಕಂಥ ಇತಿಹಾಸವಿದೆ. ಕರ್ನಾಟಕದಲ್ಲಿ ಮೊಟ್ಟಮೊದಲ ಮುಖ್ಯಮಂತ್ರಿಯಾಗಿದ್ದೇ ನಮ್ಮ ಕ್ಷೇತ್ರದ ಕೆ.ಸಿ.ರೆಡ್ಡಿಯವರು. ಹೀಗಿರುವಾಗ ನಮ್ಮ ಕೆ.ಜಿ.ಎಫ್. ಪ್ರತ್ಯಕ ತಾಲ್ಲೂಕು ಮಾಡಬೇಕು ಎಂದು ನಮ್ಮ ಬೇಡಿಕೆ. ನಮ್ಮ ಜಿಲ್ಲೆಯಲ್ಲಿ ಹನ್ನೊಂದು ಶಾಸಕರು ಇದ್ದಾರೆ, ಎಲ್ಲಾ ಎಂ.ಎಲ್.ಎ.ಗಳಿಗೆ ಒಂದೊಂದು ತಾಲ್ಲೂಕು ಇದೆ, ಬಂಗಾರಪೇಟೆ ತಾಲ್ಲೂಕಿನಲ್ಲಿ ಮಾತ್ರ ಇಬ್ಬರು ಎಂ.ಎಲ್.ಎ.ಗಳು ಇದ್ದಾರೆ. ಆದ್ದರಿಂದ ಕೆ.ಜಿ.ಎಫ್.ಪ್ರತ್ಯಕ ತಾಲ್ಲೂಕು ಮಾಡಿಕೊಡುವಲ್ಲಿ ಮಾನ್ಯ ಮುಖ್ಯಮಂತ್ರಿಗಳು ದೊಡ್ಡ ಮನಸ್ಸು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಕೆ.ಜಿ.ಎಫ್.ನಲ್ಲಿ ಸ್ಪೆಷಲ್ ಸೂಪರಿಡೆಂಟೆಂಟ್ ಆಫ್ ಪೊಲೀಸ್ ಇದ್ದಾರೆ, ಕೆ.ಇ.ಬಿ.ಯಲ್ಲಿ ಇ.ಇ.ಯವರು ಇದ್ದಾರೆ. ಡಿಸ್ಟ್ರಿಕ್ಟ್ ಸರ್ಜನ್ ಇದ್ದಾರೆ ಇದರ ಜೊತೆಗೆ ಬೆಂಗಳೂರನ್ನು ಬಿಟ್ಟರೆ ನೆಕ್ಸ್ಟ್ ನಮ್ಮ ಕೆ.ಜಿ.ಎಫ್.ನಲ್ಲಿರುವ ಫಸ್ಟ್‌ಗ್ರೇಡ್ ಕಾಲೇಜಿನಲ್ಲಿ ಸುಮಾರು ಏಳು ಸಾವಿರ ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಾರೆ. ಫಸ್ಟ್ ಗ್ರೇಡ್ ಕಾಲೇಜ್, ಇಂಜಿನೀಯರಿಂದ ಕಾಲೇಜ್ ಇದೆ, ಸಿಎಂಸಿ ಇದೆ, ಬಿ.ಜಿ.ಎಂ.ಎಲ್, ಬಿಎಂಎಲ್, ಮೇಜರ್ ಇಂಡಸ್ಟ್ರೀಸ್ ಇದೆ, ಇಷ್ಟೆಲ್ಲಾ ನಲವತ್ತು ಇದ್ದರೂ ಕೂಡ ನಮ್ಮ ಕ್ಷೇತ್ರವನ್ನು ಪ್ರತ್ಯೇಕ ತಾಲ್ಲೂಕನ್ನಾಗಿ ಮಾಡಿಲ್ಲ. 1989ರಲ್ಲಿ ಕಾಂಗ್ರೆಸ್ ಸರ್ಕಾರ ಇದ್ದಂಥ ಸಂದರ್ಭದಲ್ಲಿ ಕೆ.ಜಿ.ಎಫ್.ಅನ್ನು ಪ್ರತ್ಯೇಕ ತಾಲ್ಲೂಕು ಆಗಿ ಮಾಡಬೇಕು ಎಂದು ತಹಸೀಲ್ದಾರ್ ಕಛೇರಿಯಿಂದ ಸರ್ಕಾರಕ್ಕೆ ಒಂದು ವರದಿ ಬಂದಿದೆ. ಈ

4.00 ಪಿ.ಎಂ

ವರದಿಯಾಧಾರದ ಮೇಲೆ ನಮ್ಮ ಕೆ.ಜಿ.ಎಫ್.ನ್ನು ಖಂಡಿತವಾಗಿ ಈ ಸರ್ಕಾರದವರು ಪ್ರತ್ಯೇಕ ತಾಲ್ಲೂಕನ್ನಾಗಿ ಮಾಡಬೇಕು ಎಂದು ಕೇಳಿಕೊಳ್ಳುತ್ತೇವೆ. ನಮ್ಮ ಕೆ.ಜಿ.ಎಫ್.ನಲ್ಲಿ ಬಿ.ಜಿ.ಎಂ.ಎಲ್.ಎನ್ನುವ ಒಂದು ಆಸ್ಪತ್ರೆ ಇದೆ. ಇಡೀ ಕರ್ನಾಟಕದಲ್ಲಿ ಇಷ್ಟು ದೊಡ್ಡ ಆಸ್ಪತ್ರೆ ಎಲ್ಲೂ ಇಲ್ಲ. ಈ ಆಸ್ಪತ್ರೆಯಲ್ಲಿರತಕ್ಕಂಥ ವ್ಯವಸ್ಥೆ ಮತ್ತು ಅಪರೇಷನ್ ಥಿಯೇಟರ್ ಇಡೀ ರಾಜ್ಯದಲ್ಲಿ ಯಾವುದೇ ಆಸ್ಪತ್ರೆಯಲಿಲ್ಲ. ಈ ಆಸ್ಪತ್ರೆಯ ನಿರ್ವಹಣೆಯನ್ನು ಸರ್ಕಾರ ಕೇಳಿದರೆ, ಬಿ.ಜಿ.ಎಂ.ಎಲ್. ಮ್ಯಾನೇಜ್‌ಮೆಂಟ್ ಕೊಡುವುದಕ್ಕೆ ತಯಾರಿದ್ದಾರೆ. ಆದ್ದರಿಂದ ಈ ಆಸ್ಪತ್ರೆಯ ನಿರ್ವಹಣೆಯನ್ನು ಸರ್ಕಾರ ವಹಿಸಿಕೊಂಡು ಜನತೆಗೆ ಒಳ್ಳೆಯದನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ತಮ್ಮ ಮುಖಾಂತರ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಇವತ್ತಿನದಿವಸ 12 ಸಾವಿರ ಎಕರೆಯಷ್ಟು ಉಚಿತ ಜಮೀನು ಕೆ.ಜಿ.ಎಫ್.ನಲ್ಲಿದೆ. ಇದು ವ್ಯವಸಾಯ ಮಾಡುವುದಕ್ಕೆ ಯೋಗ್ಯವಾಗಿದೆ. ಅಂತರ್ಜಲ ಸಿಗುತ್ತದೆ, ಹಾಗೂ ಉಚಿತ ಲ್ಯಾಂಡ್ ಆಗಿರುವುದರಿಂದ ಸರ್ಕಾರ ಇದನ್ನು ಉಪಯೋಗ ಮಾಡಬಹುದೆಂದು ರಿಪೋರ್ಟ್ ಕೊಟ್ಟಿದ್ದಾರೆ. ಆದ್ದರಿಂದ, ಇಲ್ಲಿ ಒಂದು ಕೃಷಿ ವಿಶ್ವವಿದ್ಯಾಲಯವನ್ನು ಪ್ರಾರಂಭ ಮಾಡಿ ಈ ಜಮೀನನ್ನು ಉಪಯೋಗ ಮಾಡಬೇಕೆಂದು ಸರ್ಕಾರಕ್ಕೆ ಕಳಕಳಿಯ ಮನವಿ ಮಾಡಿಕೊಳ್ಳುತ್ತೇನೆ. ಹಿಂದೆ ಮಾನ್ಯ ಸಿಂಧ್ಯಾರವರು ಸಾರಿಗೆ ಸಚಿವರಾಗಿದ್ದಂಥ ಸಂದರ್ಭದಲ್ಲಿ ಕೆ.ಜಿ.ಎಫ್.ನಲ್ಲಿ ಬಸ್ ಸ್ಟ್ಯಾಂಡ್‌ನ್ನು ಪ್ರಾರಂಭ ಮಾಡಿದ್ದರು, ಇದೊಂದು ಓಪನ್ ಗ್ರೌಂಡ್ ರೀತಿಯಲ್ಲಿದೆಯೇ ಹೊರತು ಬಸ್ ಸ್ಟ್ಯಾಂಡ್‌ಗೆ ಇರಬೇಕಾದ ಸೌಲಭ್ಯಗಳು ಒಂದೂ ಇಲ್ಲ. ಇವತ್ತಿನದಿವಸ ಇಲ್ಲಿ ಮಳೆ ಬಂದಾಗ ಜನ ನಿಂತುಕೊಳ್ಳುವುದಕ್ಕೆ ಒಂದು ಕಲ್ಚರ್ ವ್ಯವಸ್ಥೆ ಕೂಡ ಇಲ್ಲ, ಹಾಗೆಯೇ ಕುಡಿಯುವ ನೀರಿನ ವ್ಯವಸ್ಥೆ ಮತ್ತು ಶೌಚಾಲಯದ ವ್ಯವಸ್ಥೆ, ದೂರಾವಣಿ ವ್ಯವಸ್ಥೆ ಹಾಗೂ ಟೀ ಅಂಗಡಿ ಕೂಡ ಇಲ್ಲ. ಈ ರೀತಿಯಾದ ಒಂದು ಓಪನ್ ಬಸ್ ಸ್ಟ್ಯಾಂಡ್‌ನ್ನು ಮಾಡಿದ್ದಾರೆ.

ಅಧ್ಯಕ್ಷರು:- ಈ ಎಲ್ಲಾ ಸೌಕರ್ಯಗಳನ್ನು ಮುನಿಸಿಪಾಲಿಟಿಯವರು ಮಾಡಬೇಕು.

ಶ್ರೀ ಎಂ. ಭಕ್ತವತ್ಸಲಂ:- ಮೊದಲು ಇದ್ದಂಥ ಮುನಿಸಿಪಾಲಿಟಿ ಬಸ್ ಸ್ಟ್ಯಾಂಡ್‌ನ್ನು ಮುಚ್ಚಿ, ಇದೇ ಜಾಗದಲ್ಲಿ ಕೆ.ಎಸ್.ಆರ್.ಟಿ.ಸಿ. ಬಸ್ ಸ್ಟ್ಯಾಂಡ್ ಮಾಡಿದ್ದಾರೆ. ಇಲ್ಲಿ ಜನತೆಗೆ ಮೂಲಭೂತವಾಗಿ ಬೇಕಾಗಿರತಕ್ಕಂಥ ಒಂದೇ ಒಂದು ಸೌಲಭ್ಯವನ್ನು ಮಾಡಿಲ್ಲ. ಆದ್ದರಿಂದ ಮಾನ್ಯ ಸಾರಿಗೆ ಸಚಿವರು ಕೆ.ಜಿ.ಎಫ್.ಗೆ ಭೇಟಿ ಮಾಡಿ, ಇಲ್ಲಿರತಕ್ಕಂಥ ಬಸ್ ಸ್ಟ್ಯಾಂಡ್‌ಗೆ ಮುಖ್ಯವಾಗಿ ಬೇಕಾಗಿರತಕ್ಕಂಥ ಸೌಲಭ್ಯಗಳನ್ನೆಲ್ಲಾ ಮಾಡಿ ಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಹಾಗೆಯೇ ಕೆ.ಜಿ.ಎಫ್.ನಲ್ಲಿ ಇದ್ದಂಥ ಸಿಟಿ ಮುನಿಸಿಪಾಲಿಟಿಯನ್ನು ಹಿಂದಿನ ಸರ್ಕಾರದವರು ಡಿಸಾಲ್ವ್ ಮಾಡಿದ್ದಾರೆ. ಅಲ್ಲಿ 35 ಜನ ಕೌನ್ಸಿಲರ್‌ಗಳಿದ್ದಾರೆ, ಹಿಂದೆ ನಾನು ಸಹ ಕೌನ್ಸಿಲರ್ ಆಗಿದ್ದೆ, ಈ 35 ಜನ

ಕೌನ್ಸಿಲರ್‌ಗಳು ಜನ ಪ್ರತಿನಿಧಿಯಾಗಿ ಆಯ್ಕೆಗೊಂಡು ಒಂದೂವರೆ ವರ್ಷಗಳಾಗಿತ್ತು, ಇಲ್ಲಿನ ಜನತೆಗೆ ಒಂದು ಚಿಕ್ಕ ಕೆಲಸವನ್ನು ಸಹ ಮಾಡಿಲ್ಲ. ಈ ಸಂದರ್ಭದಲ್ಲಿ ಹಿಂದಿನ ಸರ್ಕಾರ ಮುನಿಸಿಪಾಲಿಟಿಯನ್ನು ತೆಗೆದು ಹಾಕಿದ ಮೇಲೆ 35 ಜನ ಕೌನ್ಸಿಲರ್‌ಗಳು ಹೈಕೋರ್ಟ್‌ಗೆ ಹೋದರು. ಹೈ ಕೋರ್ಟ್‌ನಲ್ಲಿ ಸರ್ಕಾರ ಮಾಡಿದ್ದು ಸರಿಯಿಲ್ಲ, 20 ವರ್ಷಗಳ ಹಿಂದೆ ಯಾರೋ ತಪ್ಪು ಮಾಡಿದ್ದಕ್ಕೆ ಈಗ ಮುನಿಸಿಪಾಲಿಟಿಯನ್ನು ಡಿಸಾಲ್ವ್ ಮಾಡಿರುವುದು ಸರಿಯಲ್ಲವೆಂದು ಹೈಕೋರ್ಟ್ ಜಡ್ಜ್‌ಮೆಂಟ್ ಕೊಟ್ಟಿದೆ. ಈಗ ಜಡ್ಜ್‌ಮೆಂಟ್ ಪೆಂಡಿಂಗ್ ಇದೆ, ಇವತ್ತು ಹೈಕೋರ್ಟ್ ಕೂಡ ಏನು ಮಾಡಿಲ್ಲ, 35 ಜನ ಕೌನ್ಸಿಲರ್‌ಗಳು ಜನ ಪ್ರತಿನಿಧಿಯಾಗಿ ಆಯ್ಕೆ ಮಾಡಿದ್ದರೂ ಸಹ ಅಲ್ಲಿನ ಜನತೆಗೆ ಯಾವುದೇ ರೀತಿಯ ಅಭಿವೃದ್ಧಿ ಕೆಲಸಗಳು ಆಗಿಲ್ಲ. ಇದು ಕೋರ್ಟ್‌ನಲ್ಲಿದೆ, ಆದ್ದರಿಂದ ನಮ್ಮ ಸರ್ಕಾರ ಅದನ್ನು ವಿಥ್‌ಡ್ರಾ ಮಾಡಬೇಕೆಂದು ಈ ಸದನದ ಮೂಲಕ ಕೇಳಿಕೊಳ್ಳುತ್ತೇನೆ. ಇವತ್ತು ಹೈಕೋರ್ಟ್ ಸರ್ಕಾರದ ವಿರುದ್ಧವಾಗಿ ಜಡ್ಜ್‌ಮೆಂಟ್ ಕೊಟ್ಟಿದೆ, ಇದನ್ನು ಸರ್ಕಾರ ಪರಿಶೀಲನೆ ಮಾಡಿ ಕೆ.ಜಿ.ಎಫ್. ಮುನಿಸಿಪಾಲಿಟಿಗೆ ಸ್ವತಂತ್ರ ಕೊಡಬೇಕೆಂದು ಈ ಮೂಲಕ ಸರ್ಕಾರವನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇದಕ್ಕೆಲ್ಲಾ ಮುಖ್ಯ ಕಾರಣಕರ್ತರು ಯಾರೆಂದರೆ, ಹಿಂದೆ ಹೆಚ್ಚುವರಿ ಕಾರ್ಯದರ್ಶಿಯಾಗಿದ್ದ ಶ್ರೀಮತಿ ಮೀರಾಸಕ್ಸೇನರವರು ರಾಜಕೀಯ ಆಧಾರದ ಮೇಲೆ ಇಲ್ಲಿರತಕ್ಕಂಥ ಮುನಿಸಿಪಾಲಿಟಿಯನ್ನು ಕ್ಯಾನ್ಸಲ್ ಮಾಡಿದ್ದರು. ಆದ್ದರಿಂದ ಈಗ ಮುನಿಸಿಪಾಲಿಟಿಯಲ್ಲಿ ಕೆಲಸ ಮಾಡುವಂಥ ಅವಶ್ಯಕತೆ ಇದೆ. ಮುನಿಸಿಪಾಲಿಟಿ ಕೆಲಸಗಳೆಲ್ಲಾ ಹೆಚ್.ಯು.ಡಿ.ಅಧೀನದಲ್ಲಿ ಬರುತ್ತವೆ. ಕೆ.ಜಿ.ಎಫ್.ನಲ್ಲಿ ಒಂದು ಸಣ್ಣ ಕೆಲಸ ಕೂಡ ಮುನಿಸಿಪಾಲಿಟಿ ಮೂಲಕ ಆಗಬೇಕು. ಆದ್ದರಿಂದ ಮುನಿಸಿಪಾಲ್ ಮಿನಿಸ್ಟರ್‌ವರು ಅದನ್ನು ವಿಥ್‌ಡ್ರಾ ಮಾಡಿಕೊಳ್ಳಬೇಕೆಂದು ತಮ್ಮ ಮುಖಾಂತರ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಸಂದರ್ಭದಲ್ಲಿ ಒಂದು ಸಿನಿಮಾ ಹಾಡನ್ನು ಈ ಸದನದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಅದು ಏನೆಂದರೆ, ಕೇಳಿದ್ದೆಲ್ಲಾ ಇಲ್ಲಾ ಅನ್ನಿ, ಹೇಳಿದ್ದೆಲ್ಲಾ ಇಲ್ಲಾಂದ್ರೆ ಇಲ್ಲಾ, ಹೇಳಿದ್ದನ್ನು ಕೊಡುವವರೇ ಕೃಷ್ಣಾ ಕೃಷ್ಣ. ಆದ್ದರಿಂದ ಇದೇ ರೀತಿ ಮಾನ್ಯ ಮುಖ್ಯಮಂತ್ರಿಗಳು ನಮ್ಮ ಕೆ.ಜಿ.ಎಫ್. ಜನತೆಯು ಕೇಳಿದನ್ನೆಲ್ಲಾ ಕೊಡುವವರೇ ಎಂದು ಈ ಸಂದರ್ಭದಲ್ಲಿ ಕೇಳುತ್ತಿದ್ದೇನೆ. ಇವತ್ತಿನ ದಿವಸ ಕೆ.ಜಿ.ಎಫ್.ನಲ್ಲಿ 60 ಪರ್ಸೆಂಟ್ ಎಸ್.ಸಿ. ಜನಾಂಗದವರಿದ್ದಾರೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಒಳ್ಳೆಯ ಮನಸ್ಸು ಮಾಡಿ ಕಾನೂನಿನ ಪ್ರಕಾರ ಕೆ.ಜಿ.ಎಫ್. ಜನತೆಗೆ ಅನುಕೂಲವಾಗುವಂಥ ಕೆಲಸ ಮಾಡಬೇಕೆಂದು ಈ ಸಂದರ್ಭದಲ್ಲಿ ಮನವಿ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ ಜೈ ಕರ್ನಾಟಕ.

ಶ್ರೀ ಎ. ರಾಮದಾಸ್(ಕೃಷ್ಣರಾಜ):- ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಿದೆ. 1984ರಲ್ಲಿ ಈ ದೇಶದ ಯುವಕರಾದ ಸನ್ಮಾನ್ಯ

ರಾಜೀವ್‌ಗಾಂಧಿಯವರು ಪ್ರಧಾನ ಮಂತ್ರಿಯಾಗಿದ್ದಾಗ ಇಡೀ ದೇಶ ಅವರಿಂದ ಕೆಲವು ವಿಷಯಗಳಲ್ಲಿ ಬಹಳ ನಿರೀಕ್ಷೆ ಮಾಡಿತ್ತು. ಭಾರತವನ್ನು ಹೈಟೆಕ್ ದೇಶವನ್ನಾಗಿ ಮಾಡಿ 21ನೇ ಶತಮಾನಕ್ಕೆ ತೆಗೆದುಕೊಂಡು ಹೋಗುತ್ತಿದ್ದೇನೆ ಎಂದು ಅವರ ಮೊದಲನೇ ಭಾಷಣದಲ್ಲಿ ಹೇಳಿದಾಗ ಇಡೀ ದೇಶ ಅವರ ಕಡೆಗೆ ನೋಡುತ್ತಿತ್ತು. ಹಾಗೆಯೇ ಮಾನ್ಯ ಕೃಷ್ಣರವರು ಈ ರಾಜ್ಯದ ಬಹಳ ಬುದ್ಧಿವಂತ ಮುಖ್ಯಮಂತ್ರಿಯಾಗಿ ಸರ್ಕಾರದ ದಿಕ್ಸೂಚಿಯನ್ನು ಮಾನ್ಯ ರಾಜ್ಯಪಾಲರ ಭಾಷಣದ ಮುಖಾಂತರ ಒತ್ತು ಕೊಡುತ್ತಿರುವುದನ್ನು ಇಡೀ ರಾಜ್ಯ ನಿರೀಕ್ಷಣೆ ಮಾಡುತ್ತಿತ್ತು.

(ಈ ಹಂತದಲ್ಲಿ ಉಪಾಧ್ಯಕ್ಷರಾದ ಮಾನ್ಯ ಮನೋಹರ್ ಹೆಚ್. ತಹಶೀಲ್ದಾರ್ ರವರು ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದರು)

ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಇರತಕ್ಕಂಥ ಕಂಪ್ಯೂಟರಿಕರಣ ಹಾಗೂ ಇಡೀ ರಾಜ್ಯದಲ್ಲಿ ಒಂದು ದಶಕದಿಂದ ಹಾಳಾಗಿರತಕ್ಕಂಥ ರಸ್ತೆಯ ಸುವ್ಯವಸ್ಥೀಕರಣ ಈ ಎರಡು ಆಶಾದಾಯಕವಾಗಿರತಕ್ಕಂಥ ವಿಷಯಗಳನ್ನು ಬಿಟ್ಟರೆ ಬೇರೆ ಯಾವುದೇ ರೀತಿಯ ಹೊಸದನ್ನು ರಾಜ್ಯಪಾಲರ ಭಾಷಣದಲ್ಲಿ ನೋಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಇವತ್ತು ರಾಜ್ಯಪಾಲರ ಭಾಷಣದ ಪ್ರತಿಯನ್ನು ನೋಡಿದಾಗ ಏನು ತಿಳಿಯುತ್ತದೆ ಎಂದರೆ, ಪ್ರಿಂಟಿಂಗ್ ಹೊಸದಾಗಿ ಆಗಿದೆ, ಹಾಗೆಯೇ ಅಚ್ಚು ಸಹ ಹೊಸದಾಗಿ ಆಗಿದೆ. 1990-91ನೇ ಸಾಲಿನಲ್ಲಿ ಮಂಡನೆ ಮಾಡಿದ ರಾಜ್ಯಪಾಲರ ಭಾಷಣದ ಪ್ರತಿಯು ಮತ್ತೆ ಹೊಸದಾಗಿ ಮುದ್ರಣವಾಗಿರತಕ್ಕಂಥ ಅವತರಣಿಕೆ ಎಂದು ನನಗನ್ನಿಸುತ್ತದೆ. 1989-90, 1990-91 ಹಾಗೂ 1991-92ನೇ ಸಾಲಿನಲ್ಲಿ ಮುದ್ರಿತವಾಗಿರುವ ರಾಜ್ಯಪಾಲರ ಭಾಷಣದಲ್ಲಿರತಕ್ಕಂಥ ವಿಚಾರಗಳೇ ಇವತ್ತು ಸಹ ಬಂದಿದೆ. ಇವತ್ತು ರಾಜ್ಯದಲ್ಲಿ ಸಂಪನ್ಮೂಲಗಳನ್ನು ಯಾವ ರೀತಿ ಬಳಸಿಕೊಳ್ಳಬೇಕೆಂಬುದನ್ನು ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಎರಡನೆಯ ಸಾಲಿನಲ್ಲಿಯೇ ಹೇಳುವಂತಹ ಒಂದು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಆದರೆ, 1991ನೇ ಇಸವಿಯಲ್ಲಿ ರಾಜ್ಯಪಾಲರ ಭಾಷಣದಲ್ಲಿ ಏನು ವಿಚಾರವನ್ನು ಹೇಳಿದ್ದರೆ ಅದೇ ವಿಚಾರವನ್ನು ಹೇಳಿ, ರಾಜ್ಯದ ಸಂಪನ್ಮೂಲವನ್ನು 5 ವರ್ಷದಲ್ಲಿ ಸಂಪೂರ್ಣವಾಗಿ ಬಳಕೆ ಮಾಡಿ ರಾಜ್ಯವನ್ನು ಉನ್ನತವಾದಂಥ ಸ್ಥಿತಿಗೆ ತೆಗೆದುಕೊಂಡು ಹೋಗುತ್ತೇವೆಂದು ಅಂದಿನ ಕಾಂಗ್ರೆಸ್ ಸರ್ಕಾರ ಏನು ಹೇಳಿತ್ತೋ ಅದನ್ನೇ ಇವತ್ತೂ ಕೂಡ ಹೇಳಿರತಕ್ಕಂಥದ್ದನ್ನು ನಾವು ಕಾಣುತ್ತಿದ್ದೇವೆ. ಇದರಲ್ಲಿ ಪ್ರಾದೇಶಿಕವಾದ ಒಂದು ತಾರತಮ್ಯದ ವಿಚಾರವನ್ನು ಬಹಳ ಪ್ರಮುಖವಾಗಿ ಪ್ರಸ್ತಾಪ ಮಾಡಿದ್ದಾರೆ. ವಿಶೇಷವಾಗಿ ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ ಆಡಳಿತ ಪಕ್ಷದ ಕಡೆಯವರಾದ ಸನ್ಮಾನ್ಯ ಸಂಜಯ್ಯನ ಮಠರವರು ನಮ್ಮ ಮುಂದೆ ಬಹಳ ಪ್ರಮುಖವಾದಂಥ ವಿಚಾರವನ್ನು ಇಟ್ಟರು. ಕಳೆದ 45 ವರ್ಷಗಳಲ್ಲಿ ಉತ್ತರ ಮತ್ತು ದಕ್ಷಿಣ ರಾಜ್ಯದ ಪ್ರಾಂತ್ಯಗಳಲ್ಲಿ ಆಗಿರತಕ್ಕಂಥ ತಾರತಮ್ಯಗಳ ಬಗ್ಗೆ ಅಂಕಿ-ಸಂಖ್ಯೆಗಳ

ಮುಖಾಂತರ ವಿಚಾರವನ್ನು ಈ ಸದನದಲ್ಲಿಟ್ಟರು. ಅವರಿಗೆ ನಾನು ಧನ್ಯವಾದಗಳನ್ನು ಹೇಳುತ್ತೇನೆ. ಏಕೆಂದರೆ, ಭಾರತೀಯ ಜನತಾ ಪಕ್ಷದ ಶಾಸಕರು ಯಾವ ಅಂಕಿ-ಸಂಖ್ಯೆಗಳನ್ನು ಕೊಡಬೇಕಾಗಿತ್ತೋ, ಅದನ್ನು ಅವರೇ ಕೊಟ್ಟಿದ್ದಾರೆ. ಈ ಸಂದರ್ಭದಲ್ಲಿ ಒಂದು ವಿಚಾರವನ್ನು ಆಡಳಿತ ಪಕ್ಷದವರಲ್ಲಿ ಕೇಳುವುದಕ್ಕೆ ನಾನು ಇಚ್ಛಿಪಡುತ್ತೇನೆ. ಅದೇನೆಂದರೆ, 1991ರ ರಾಜ್ಯಪಾಲರ ಭಾಷಣದಲ್ಲಿ ಹೇಳಿದಂಥ ವಿಚಾರವನ್ನೇ ಇವತ್ತಿನ ರಾಜ್ಯಪಾಲರ ಭಾಷಣದಲ್ಲಿಯೂ ಅದೇ ವಿಚಾರವನ್ನು ಹೇಳಿದ್ದೀರಿ. ಅಂದರೆ, 45 ವರ್ಷಗಳಲ್ಲಿ ತಾವು ಆಳ್ವಿಕೆಯನ್ನು ಮಾಡಿಕೊಂಡು ಉತ್ತರ ಮತ್ತು ದಕ್ಷಿಣ ಪ್ರಾಂತ್ಯಗಳ ಮಧ್ಯೆ ಅಂತರವನ್ನು ನಿರ್ಮಾಣ ಮಾಡಿರುವವರು ಯಾರು? ಇಷ್ಟು ವರ್ಷ ಆಡಳಿತ ಮಾಡಿದರು ಯಾರು? ಯಾರ ಮೇಲೆ ದೋಷಾರೋಹಣ ಮಾಡುವಂತಹ ವಿಚಾರ, ಅಥವಾ ಸರಿ ಮಾಡುವಂಥ ವಿಚಾರಗಳ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಹೇಳುವಾಗ ನಿರ್ದಿಷ್ಟವಾದಂಥ ರೀತಿಯಲ್ಲಿ, ಕೆಲಸಕಾರ್ಯಗಳು ಕುಂಠಿತವಾದದ್ದಕ್ಕೆ ಕಾರಣ ಏನಿತ್ತು? ಹಾಗೆ ಇದನ್ನು ಸರಿಮಾಡುವ ಮಾರ್ಗ ಏನು? ಎನ್ನುವ ವಿಚಾರಕ್ಕೆ ಹೆಚ್ಚಿನ ಒತ್ತನ್ನು ಕೊಟ್ಟಿಲ್ಲ. ಶ್ರೀಲಂಕದಿಂದ ಬಂದಂಥ ರಾಕ್ಷಸರು ಇದನ್ನು ಮಾಡಿದವರಲ್ಲ, ಯಾರು 45 ವರ್ಷಗಳ ಕಾಲ ಈ ರಾಜ್ಯವನ್ನು ಆಳಿದರು, ಅವರು ಉತ್ತರ ಮತ್ತು ದಕ್ಷಿಣ ಪ್ರಾಂತ್ಯಗಳ ಮಧ್ಯೆ ನಡೆಯಬೇಕಾದ ಅಭಿವೃದ್ಧಿ ಕಾರ್ಯಗಳನ್ನು ಯಾರು ಪ್ರತಿನಿಧಿಸುತ್ತಿದ್ದರೋ ಅವರು ಈ ಕೆಲಸವನ್ನು ಮಾಡಿಲ್ಲ ಎನ್ನುವಂಥದ್ದನ್ನು ಮಾನ್ಯ ನಂಜಯ್ಯನಮಠ್‌ನವರು ಮರೆತ್ತಿದ್ದಾರೆಂದು ನನಗನ್ನಿಸುತ್ತದೆ. ಇದರಲ್ಲಿ ನಾವು ಒಂದು ಪ್ರಮುಖವಾದಂಥ ಅಂಶವನ್ನು ಕಾಣುತ್ತಿದ್ದೇವೆ. ಅದೇನೆಂದರೆ, ಉತ್ತರ ಮತ್ತು ದಕ್ಷಿಣ ಪ್ರಾಂತ್ಯದಲ್ಲಿ ಏಕೆ ತಾರತಮ್ಯಗಳು ಆಗಿವೆ ಎನ್ನುವಂತಹ ವಿಚಾರಗಳು ತಾವು ವಿರೋಧ ಪಕ್ಷದಲ್ಲಿದ್ದಾಗಲೂ ಕೂಡ ಈ ವಿಚಾರ ಪ್ರಸ್ತಾಪಕ್ಕೆ ಬರುತ್ತಿತ್ತು. ತಾವು ಮಾಡಿರತಕ್ಕಂಥ ಹೈದರಾಬಾದ್ ಕರ್ನಾಟಕ ಪ್ರದೇಶದ ಅಭಿವೃದ್ಧಿ ಮಂಡಳಿ, ಮಲೆನಾಡು ಅಭಿವೃದ್ಧಿ ಮಂಡಳಿ, ಈ ರೀತಿಯಲ್ಲಿ ಬೇರೆ ಬೇರೆ ಮಂಡಳಿಗಳ ರಚನೆ ಮಾಡಿದ್ದೀರಿ ಹೊರತು, ದಶಕಗಳ ಕಾಲದಿಂದ ನಿಜವಾಗಿ ಆಗಬೇಕಾಗಿರುವ ಉತ್ತರ ಕರ್ನಾಟಕದ ಅಭಿವೃದ್ಧಿಗೆ ಯಾವ ರೀತಿಯ ಕೆಲಸಗಳನ್ನು ಮಾಡಲಾಗಿದೆ ಎಂಬುದನ್ನು ಎಲ್ಲಿಯೂ ಕೂಡ ತಾವು ಪ್ರಸ್ತಾಪ ಮಾಡಿಲ್ಲ. ಈ ತಾರತಮ್ಯವನ್ನು ಬಗೆಹರಿಸುವಂಥ, ಸಮಗ್ರ ಕರ್ನಾಟಕದ ಅಭಿವೃದ್ಧಿಯನ್ನು ಕಾಯ್ದುಕೊಳ್ಳುವಂಥ ಒಳ್ಳೆಯ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡಿದ್ದೀರಿ. ಆದರೆ ಉತ್ತರ ಕರ್ನಾಟಕದ ಜನ ನಿಮ್ಮಿಂದ ಏನು ನಿರೀಕ್ಷಣೆ ಮಾಡುತ್ತಿದ್ದರೋ, ಆ ರೀತಿಯಾದಂಥ ಯಾವುದೇ ಕಾಲ ಬದ್ಧವಾದಂಥ, ನಿಯಮ ಬದ್ಧವಾದಂಥ ಕಾರ್ಯ ಸೂಚಿಯನ್ನು ತಾವು ಇದರಲ್ಲಿ ಕೊಟ್ಟಿಲ್ಲ ಎನ್ನತಕ್ಕಂಥ ನಿರಾಸೆ ಎಲ್ಲರಲ್ಲಿಯೂ ಮೂಡಿದೆ ಎನ್ನುವಂತಹ ವಿಚಾರವನ್ನು ನಾನು ಇಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ತಮ್ಮ ಮನಸ್ಸಿನಲ್ಲಿ ಆಶೆ ಇತ್ತು ಎಂದು ನಾನು ಅಂದುಕೊಂಡಿದ್ದೇನೆ. ಯಾರ ತಾರತಮ್ಯ ಇದೆ, ಅದನ್ನು ಸರಿ

ಮಾಡುವುದಕ್ಕೋಸ್ಕರವಾಗಿ ಸಂಪುಟ ರಚನೆಯಲ್ಲಾದರೂ ಕೂಡ ಸಮಗ್ರವಾದ ಪ್ರತಿನಿಧ್ಯವನ್ನು ಕೊಡಬೇಕಾಗಿತ್ತು ಎನ್ನುವ ಆಶೆ ಅವರಿಗೆ ಇತ್ತು ಎಂದು ನಾನು ಅಂದುಕೊಂಡಿದ್ದೇನೆ. ಆದರೆ ಯಾವ ಉತ್ತರ ಕರ್ನಾಟಕದ ಪ್ರಾತಿನಿಧ್ಯತೆ ಅಭಿವೃದ್ಧಿ ಕಡಿಮೆ ಆಗುತ್ತದೆ ಎಂದು ಹೇಳಿಕೊಂಡು ಬಂದಿದ್ದರು. ಆ ಕೂಗು ಏನಿತ್ತು, ತಮ್ಮ ಪ್ರಣಾಳಿಕೆಯಲ್ಲಿ ಉತ್ತರ ಕರ್ನಾಟಕದ ಅಭಿವೃದ್ಧಿ ಬಗ್ಗೆ ಹೇಳಿಕೊಂಡು ಬಂದರೋ ತಮಗೆ ಉತ್ತರ ಕರ್ನಾಟಕದ ಜಿಲ್ಲೆಗಳಿಗೆ ಪ್ರಾತಿನಿಧ್ಯ ಕೊಡಲಿಕ್ಕೆ ಯಾವುದೇ ಹಿಂಸೆ ತಮ್ಮನ್ನು ಕಾಡಿದೆ ಎಂದು ನಮಗೆ ಅನಿಸುತ್ತಿದೆ. ಕೊನೆಯ ಪಕ್ಷ ಆ ಪ್ರಾತಿನಿಧ್ಯ ನೀಡುವುದರಲ್ಲಿಯಾದರೂ ಕೂಡ ತಾವು ಈ ಒಂದು ದೊಡ್ಡ ಜವಾಬ್ದಾರಿಯನ್ನು ಅವರ ಮನಸ್ಸಿನಲ್ಲಿರುವ ಆತಂಕವನ್ನು ತಾವು ದೂರ ಮಾಡಬಹುದಾಗಿತ್ತು. ಎನ್ನುವಂಥ ವಿಚಾರವನ್ನು ಹೇಳುತ್ತಾ, ಪ್ರಮುಖವಾದ ಒಂದು ವಿಚಾರ ಇವತ್ತು ತಮ್ಮ ಮುಂದೆ ಬಂದಿದೆ. ಬೇರೆ ಬೇರೆ ರಾಜ್ಯಗಳಿಗೆ ನಮ್ಮ ಕರ್ನಾಟಕ ರಾಜ್ಯವನ್ನು ಹೋಲಿಕೆ ಮಾಡಿಕೊಂಡಾಗ, ಸಮಗ್ರವಾದ ಕರ್ನಾಟಕವಾಗಿ ಉಳಿದುಕೊಂಡು ಬಂದಿದೆ. ಸಣ್ಣಪುಟ್ಟ ಕೂಗುಗಳು ಬೇರೆ ಕಡೆಯಿಂದ ಬಂದರೂ ಕೂಡ ಕರ್ನಾಟಕದ ಬಗ್ಗೆ ಇಡೀ ದೇಶ ತನ್ನದೇ ಆದ ಒಂದು ಒಗ್ಗಟ್ಟನ್ನು ಕಾಪಾಡುವಂಥದ್ದನ್ನು ನಾವು ನೋಡುತ್ತಿದ್ದೇವೆ. ಆದರೆ ಕಳೆದ 5 ವರ್ಷಗಳಿಂದ ಸಣ ಪುಟ್ಟ ಕೂಗು ಕೊಡಗು ಜಿಲ್ಲೆಯಲ್ಲಿ ಕೇಳುತ್ತಿದ್ದೀರಾ ಅದು ಆದರೆ ಕಳೆದ ಎರಡು ವರ್ಷದಿಂದ ಅದು ಸ್ವಲ್ಪ ತಣ್ಣಗಾಗಿತ್ತು. ಆದರೆ, ತಮ್ಮ ಸರ್ಕಾರ ಬಂದ ತಕ್ಷಣದಲ್ಲಿಯೇ ಪ್ರತ್ಯೇಕವಾಗುವ ಕೊಡಗಿನ ಕೂಗು ಜಾಸ್ತಿಯಾಗುತ್ತಿದೆಯಲ್ಲ ಎನ್ನುವ ಆತಂಕ ನಮ್ಮ ಮನಸ್ಸನ್ನು ಕಾಡುತ್ತಿದೆ. ಕಾರಣ, ಕೆಆರ್‌ಎಂಎಂ ನ ಪ್ರಮುಖರಾದಂಥ ಶ್ರೀ ನಾಚಪ್ಪನವರು ಈ ದಿನಗಳಲ್ಲಿ ಪ್ರತ್ಯೇಕವಾಗಿ ಆ ಕೊಡಗು ರಾಜ್ಯ ಬೇಕು ಎನ್ನುವ ವಿಚಾರಕ್ಕೆ ಹೆಚ್ಚಿನ ಒತ್ತನ್ನು ಕೊಡುವಂಥದ್ದು, ಅದರಲ್ಲಿ ವಿಶೇಷವಾಗಿ ಕನ್ನಡ ರಾಜ್ಯೋತ್ಸವ ಸಂದರ್ಭದಲ್ಲಿ ನಡೆದಂಥ ವಿಚಾರಗಳು, ಪತ್ರಿಕೆಗಳಲ್ಲಿ ಬಂದಿರುವಂಥ ವಿಚಾರಗಳು, ಇಡೀ ರಾಜ್ಯದ ಜನರ ಮನಸ್ಸನ್ನು ತಲ್ಲಣ ಮಾಡುವಂಥದ್ದು ಇದೆ. ಇಂತಹ ರಾಜ್ಯದಲ್ಲಿ ಒಡಕು ಧ್ವನಿ ಬರುವಂಥ ವಿಚಾರದಲ್ಲಿ ಉತ್ತರ-ದಕ್ಷಿಣ ಒಂದು ಸಾಮರಸ್ಯ ಕಾಪಾಡಬೇಕಾಗಿರುವಂಥದ್ದು ಸರ್ಕಾರ ಕೊಡಗಿನ ಪ್ರತ್ಯೇಕತೆ ಬಗ್ಗೆ ಕಠಿಣವಾದ ಕ್ರಮವನ್ನು ಕೈಗೊಳ್ಳಬೇಕಾದ ವಿಚಾರ ಬಹಳ ಪ್ರಮುಖವಾದಂಥದ್ದು ಇತ್ತು. ಆದರೆ, ಇದನ್ನು ದಮನ ಮಾಡುವಂಥ ದೃಷ್ಟಿಯಿಂದ ಇದನ್ನು ಪರಿಹಾರ ಮಾಡುವಂಥ ದೃಷ್ಟಿಯಿಂದ ಯಾವ ಕ್ರಮಗಳನ್ನು ಕೈಗೊಳ್ಳುತ್ತೇವೆ ಎನ್ನುವಂಥ ವಿಚಾರ ಇದರಲ್ಲಿ ಬಹಳ ಪ್ರಮುಖವಾಗಿ ಬರಬೇಕಾಗಿತ್ತು ಎನ್ನುವುದನ್ನು ಹೇಳುತ್ತಾ, ಇಡೀ ರಾಜ್ಯದಲ್ಲಿ ಸಚಿವ ಸಂಪುಟದಲ್ಲಿ ಪ್ರಾತಿನಿಧ್ಯತೆ ಸಿಗದೆ ಇದ್ದಂಥದ್ದು, ಕೊಡಗು ಜಿಲ್ಲೆಗೆ ಮೂರು ಜನ ಮಂತ್ರಿಗಳಿಗೆ ಪ್ರಾತಿನಿಧ್ಯತೆ ಸಿಕ್ಕಿದೆ. ಅಂದರೆ, ಒಂದು ಕ್ಷೇತ್ರಕ್ಕೆ ಒಬ್ಬರು ಮಂತ್ರಿಗಳು ಇದ್ದರೂ ಕೂಡ ಇವತ್ತು ಇಂತಹ ಕೂಗು ಸುಮಾರು 4 ದಿನಗಳಿಂದ ವಿಶೇಷವಾಗಿ ಕೇಳಿ ಬರುತ್ತಿದ್ದರು ಕೂಡ ಒಬ್ಬರು ಮಂತ್ರಿಗಳನ್ನು ಬಿಟ್ಟರೆ ಬೇರೆ ಯಾವ ಮಂತ್ರಿಗಳು ಈ

ವಿಚಾರದಲ್ಲಿ ತಮ್ಮ ನಿಲುವು ಏನು ಎನ್ನುವಂಥದ್ದನ್ನು ಹೇಳದೆ ಇರುವಂಥದ್ದು, ಜೊತೆಗೆ ಇಲ್ಲಿರುವಂಥ ಮಂತ್ರಿಗಳು ತಮಗೆ ಸಂಬಂಧ ಇದೆ ಎನ್ನುವಂಥದ್ದನ್ನು ಆ ಪ್ರತಿನಿಧಿಗಳು ಹೇಳುವಾಗ ಕೂಡ ಅದಕ್ಕೆ ಮರಳಿ ತಮ್ಮ ವಿಚಾರವನ್ನು ಹೇಳದೆ ಇರುವಂಥದ್ದು ನೋಡಿದರೆ ನಮಗೆ ಆತಂಕವನ್ನು ತರುತ್ತಿದೆ. ಇದರ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳು ...

**ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿಗಳು):-** ನಮಗೆ ಗೊತ್ತಿದ್ದ ಹಾಗೆ, ಸರ್ಕಾರದ ನಿಲುವನ್ನು ಪ್ರತಿಬಿಂಬಿಸತಕ್ಕಂಥವರು ಒಬ್ಬರೆ. ಆ ಸರ್ಕಾರದ ಮುಖ್ಯಸ್ಥರು ತಮ್ಮ ನಿಲುವನ್ನು ಪ್ರತಿಬಿಂಬಿಸಿದ ಮೇಲೆ ಇನ್ನೊಬ್ಬ ಮಂತ್ರಿಗಳು ಅದನ್ನೇ ಹೇಳಬೇಕು, ಅಥವಾ ಹೇಳದೆ ಇರತಕ್ಕಂಥದ್ದರ ಔಚಿತ್ಯ, ಇದರ ಬಗ್ಗೆ ಚರ್ಚೆ ಮಾಡತಕ್ಕಂಥದ್ದು ಎಷ್ಟು ಸೂಕ್ತ ಎನ್ನುವಂಥದ್ದನ್ನು ತಾವು ಯೋಚನೆ ಮಾಡಬೇಕು.

**ಶ್ರೀ ಎ. ರಾಮದಾಸ್:-** ಮಾನ್ಯ ಮುಖ್ಯಮಂತ್ರಿಗಳು ಹೇಳಿದ ವಿಚಾರ ಬಹಳ ಮುಖ್ಯವಾದುದು, ನಾನು ಸರ್ಕಾರದ ನಿಲುವಿನ ಬಗ್ಗೆ ಹೇಳುತ್ತಿಲ್ಲ. ಆದರೆ ಈ ರಾಜ್ಯದಲ್ಲಿ ಒಂದು ಸಣ್ಣ ಕೂಗು ಇವತ್ತು ಎಷ್ಟು ಬೃಹದಾಕಾರವಾಗಿದೆ, ಅಂತಹವರು ಮಂತ್ರಿಗಳ ಹೆಸರನ್ನು ಜೋಡಿಸಿಕೊಂಡಿರುವುದರಿಂದ ಅವರಿಂದ ಕ್ಲಾರಿಫಿಕೇಷನ್ ಬರಬೇಕೆಂದು ನಾನು ಆಶೆ ಪಟ್ಟುಕೊಂಡಿದ್ದೇನೇ ಹೊರತು, ಅದರ ಬಗ್ಗೆ ತಾವು ಹೇಳಿದ ಮೊದಲಿನ ಮಾತಿನ ಬಗ್ಗೆ ನಾವು ಸ್ವಾಗತ ಮಾಡುತ್ತೇವೆ. ಆ ಕೂಗು ಕೇಳಿ ಬರುತ್ತಿರುವಂಥ ಸಂದರ್ಭದಲ್ಲಿಯೇ ತಾವು ತೆಗೆದುಕೊಂಡ ಕಠಿಣವಾದ ಕ್ರಮದ ಬಗ್ಗೆ ನಾನು ಈಗ ಶ್ಲಾಘನೆ ಮಾಡುತ್ತಿದ್ದೆ. ವಿಧಾನಸೌಧ ಚಲೋ ಎನ್ನುವ ಕಾರ್ಯಕ್ರಮ ನಿಲ್ಲದೇ ಹೋದರೆ, ಮಾತುಕತೆಗೆ ನಾನು ಕರೆಯುವುದಿಲ್ಲ ಎನ್ನುವ ದಿಟ್ಟ ನಿರ್ಧಾರ ತಾವು ಏನು ತೆಗೆದುಕೊಂಡಿದ್ದಿರೋ ಅದನ್ನು ನಾವು ಬಹಳ ಸ್ವಾಗತ ಮಾಡುತ್ತೇವೆ. ಆದರೆ, ಒಬ್ಬ ಮಂತ್ರಿಯ ಹೆಸರನ್ನು ಜೊತೆಯಲ್ಲಿ ಸೇರಿಸಿದಾಗ ಅವರಿಂದ ನಾವು ನಿರೀಕ್ಷೆಯನ್ನು ಮಾಡಿದ್ದೇವೆ ಎನ್ನುವುದನ್ನು ಮಾತ್ರ ತಮ್ಮ ಮುಂದೆ ಹೇಳುತ್ತೇನೆ. ಇಂತಹ ಕರ್ನಾಟಕದ ಸಮಗ್ರತೆಯನ್ನು ಕಾಪಾಡುವುದಕ್ಕೋಸ್ಕರವಾಗಿ ಅವತ್ತು ಮಾತನಾಡಿದಂಥ ಶೈಲಿಯನ್ನು ನೋಡಿದಾಗ ನನಗೆ ಅನಿಸಿತು, ದಕ್ಷಿಣ ಕರ್ನಾಟಕದ ಜನ, ಉತ್ತರ ಕರ್ನಾಟಕದ ಜನತೆಗೆ ಎಲ್ಲೋ ಅನ್ಯಾಯ ಮಾಡಿದ್ದೇವೆ ಎನ್ನುವಂಥ ಭಾವನೆಗಳು ಇನ್ನು ಮುಂದೆ ಬರುವಂಥ ಅವಶ್ಯಕತೆ ಇಲ್ಲ ಎನ್ನುವಂಥದ್ದನ್ನು ಬರಬಾರದು ಆ ದೃಷ್ಟಿಯಲ್ಲಿ ಸಾಮರಸ್ಯವನ್ನು ತೆಗೆದುಕೊಂಡು ಹೋಗುವಂಥ ದೃಷ್ಟಿಯಲ್ಲಿ ತಮ್ಮದೇ ಆದ ಒಂದು ಯೋಜನೆಯನ್ನು ನಾವು ನಿರೀಕ್ಷೆ ಮಾಡುತ್ತಿದ್ದೇವೆ. ರಾಜ್ಯಪಾಲರ ಭಾಷಣದಲ್ಲಿ ಅದು ವ್ಯಕ್ತವಾಗದೇ ಹೋದರು ಕೂಡ ಇನ್ನು ಮುಂದಾದರೂ ಆಗಬಹುದು ಎನ್ನುವ ನಿರೀಕ್ಷೆಯನ್ನು ನಾವು ಇಟ್ಟುಕೊಂಡಿದ್ದೇವೆ. ಕುಡಿಯುವ ನೀರಿನ ಯೋಜನೆ ಇಲ್ಲಿರುವಂಥ ಒಂದು ಪ್ರಮುಖವಾದ ಓಂಶ. ಬಹಳ ಒಳ್ಳೆಯ ವಿಚಾರವನ್ನು ನೀವು ನಮ್ಮ ಮುಂದೆ ಇಟ್ಟಿದ್ದೀರಿ. ಕುಡಿಯುವ ನೀರನ್ನು ಒಬ್ಬರಿಗೆ 55 ಲೀಟರ್

ಪೂರೈಸುತ್ತೇವೆ. ಸನ್ಮಾನ್ಯ ಮುಖ್ಯಮಂತ್ರಿಗಳೆ, ನಿಮ್ಮ ಮನಸ್ಸಿನಲ್ಲಿರುವ ಭಾವನೆಯನ್ನು ನಾವು ಅರಿತುಕೊಂಡಿದ್ದೇವೆ. ನಾನು ಶಾಸಕನಾಗಿ ಇಲ್ಲಿಗೆ ಬಂದ ನಂತರ ನೋಡುತ್ತಿದ್ದರು ಕೂಡ, ನಾನು 6ನೇ ತರಗತಿಯಲ್ಲಿ ವಿದ್ಯಾಭ್ಯಾಸ ಮಾಡುವಾಗ ನಿಮ್ಮನು ನನ್ನ ಕ್ಷೇತ್ರದಲ್ಲಿ ನೋಡಿದ್ದೇನೆ. ಅಂದು ಕೂಡ ಮಂಡ್ಯ ಜಿಲ್ಲೆಯಲ್ಲಿ ಒಬ್ಬ ಬುದ್ಧಿವಂತ ವ್ಯಕ್ತಿ ಎಂದು ಪ್ರದರ್ಶನ ಮಾಡಿದಂಥದ್ದನ್ನು ನಾನು ನೋಡಿದ್ದರಿಂದ ಇವತ್ತಿನ ದಿವಸ ನಾವು ನಿಮ್ಮಿಂದ ಬಹಳ ನಿರೀಕ್ಷೆಯನ್ನು ಮಾಡುತ್ತಿದ್ದೇವೆ. 55 ಲೀಟರ್ ನೀರನ್ನು ಕೊಡುವಂಥ ದೊಡ್ಡ ಯೋಜನೆಯನ್ನು ನಮ್ಮ ರಾಜ್ಯಪಾಲರ ಭಾಷಣದಲ್ಲಿ ಇದೆ. ಮಾನ್ಯ ಮುಖ್ಯ ಮಂತ್ರಿಗಳಿಗೆ ಒಂದು ವಿಚಾರವನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. 1989,1990,1991 ರಾಜ್ಯಪಾಲರ ಈ ಮೂರು ಭಾಷಣದಲ್ಲಿ ಈ ವಿಚಾರವನ್ನು ಹೇಳಿ, 1991ರ ರಾಜ್ಯಪಾಲರ ಭಾಷಣದಲ್ಲಿ ಹೇಳಿದೆ. ತಮ್ಮ ಸರ್ಕಾರದ ಕೊನೆಯ ಅವಧಿಯೊಳಗಾಗಿ ಇರುವಂಥ 27 ಸಾವಿರ ಗ್ರಾಮಗಳಿಗೆ ಕುಡಿಯುವ ನೀರಿನ ಯೋಜನೆಯನ್ನು ಸಂಪೂರ್ಣವಾಗಿ ಮುಗಿಸುತ್ತೇವೆ ಎನ್ನುವಂಥದ್ದು, ಅಂದು ಕೂಡ ಕಾಂಗ್ರೆಸ್ ಸರ್ಕಾರ ಇದ್ದಂಥ ಸಂದರ್ಭದಲ್ಲಿ ರಾಜ್ಯಪಾಲರ ಭಾಷಣದಲ್ಲಿ ಇತ್ತು. 1991 ನಂತರ 1999ನೇ ಇಸ್ವಿ ಬಂದಾಗ ಕೂಡ, ಅದು ಇನ್ನು ಕೇವಲ ಪ್ರಣಾಳಿಕೆಯಾಗಿ ರಾಜ್ಯಪಾಲರ ಭಾಷಣಕ್ಕೆ ಓದಿಸುವಂಥ ಒಂದು ವಸ್ತುವಾಗಿ ಉಳಿದುಕೊಳ್ಳುವಂಥ ಯೋಜನೆಯಾಗದೆ ಕಾರ್ಯರೂಪಕ್ಕೆ ಬರಲಿ ಎನ್ನುವಂಥ ಆಶಾಭಾವನೆಯನ್ನು ವ್ಯಕ್ತಪಡಿಸುತ್ತೇನೆ. ಇದು ಹೇಳಿಕೆ ಆಗುವ ಯೋಜನೆ ಆಗುವುದು ಬೇಡ, ಕಾರ್ಯಗತ ಆಗಬೇಕು ಎನ್ನುವ ಆಶೆಯನ್ನು ತಮ್ಮ ಮುಂದೆ ನಾನು ವ್ಯಕ್ತಪಡಿಸುತ್ತೇನೆ. ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಇವರ ಒಂದು ಪ್ರಮುಖವಾದ ವಿಚಾರ ಎಂದರೆ ಪ್ರತಿಯೊಬ್ಬನ ತಲೆಯ ಮೇಲೆ ಒಂದು ಸೂರು ಇರಬೇಕೆನ್ನುವ ಹಿಂದಿನ ಕಾಂಗ್ರೆಸ್ ಕೇಂದ್ರ ಸರ್ಕಾರ ಕೂಡ ಹೇಳಿಕೊಂಡು ಬಂದಿದೆ. ಹಿಂದಿದ್ದ ಕಾಂಗ್ರೆಸ್ ಸರ್ಕಾರ 1984-1994ರಲ್ಲಿ ಒಂದು ದೊಡ್ಡ ಯೋಜನೆಯನ್ನು ತಯಾರು ಮಾಡಿ, ಆಶ್ರಯ ಯೋಜನೆ ಅಡಿಯಲ್ಲಿ ರಾಜ್ಯದ ಜನತೆಗೆ ತಾವು ಒಂದು ದೊಡ್ಡ ಆಶಾಕಿರಣವಾಗಿ ಯೋಜನೆಯನ್ನು ಕೊಟ್ಟಿರಿ. ಇವತ್ತು ನಮ್ಮ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಒಂದು ಪ್ರಮುಖವಾದಂಥ ಅಂಶವನ್ನು ತಾವು ಹೇಳಿದ್ದೀರಿ. ರಾಜ್ಯದಲ್ಲಿರುವ ಪ್ರತಿಯೊಬ್ಬ ನಾಗರೀಕನಿಗೆ ಒಂದು ಸೂರು ಕೊಡುವಂಥ ವಿಚಾರದಲ್ಲಿ ತಾವು ಹೆಚ್ಚಿನ ಗಮನವನ್ನು ಕೊಡುತ್ತೇವೆಂದು ಹೇಳಿರುತ್ತೀರಿ. ಆದರೆ ಆಶ್ರಯ ಯೋಜನೆ ಬಗ್ಗೆ ತಾವು 1991ರಲ್ಲಿ ಏನು ಹೇಳಿದ್ದೀರಿ, ಒಂದು ಲಕ್ಷದ ಅರವತ್ತು ಸಾವಿರ ಮನೆಗಳನ್ನು ನಾವು ಕೊಡುತ್ತೇವೆ ಎನ್ನುವ ಯೋಜನೆ ಕೇವಲ ಯೋಜನೆಯಾಗಿಯೇ ಉಳಿಯಿತು. ಹಾಗೆಯೇ ಒಂದು ಅಕ್ರಮದ ಕೇಂದ್ರವಾಗಿ 4-6 ವರ್ಷಗಳಿಂದ ಕೂಡ ತನಿಖೆಯ ಹಂತದಲ್ಲಿ ಅದು ಹಾಗೆಯೆ ಉಳಿದು ಇವತ್ತು ಕಾಂಗ್ರೆಸ್ಸಿಗೆ ಒಂದು ಕಪ್ಪು ಚುಕ್ಕೆಯಾಗಿ ಏನು ಉಳಿದಿದೆ ಅದು ಪುನರಾವರ್ತನೆ ಆಗುವುದು ಬೇಡ ಎನ್ನುವಂಥದ್ದನ್ನು ತಮ್ಮ ಮುಂದೆ ಹೇಳಲಿಕ್ಕೆ ನಾನು ಇಚ್ಛೆಪಡುತ್ತೇನೆ. ಇವತ್ತು ತಮ್ಮಿಂದ

ಬಹಳ ನಿರೀಕ್ಷೆಯನ್ನು ಮಾಡಿದ್ದು, ಇಬ್ಬರು ಪ್ರಮುಖರು ಇರುವುದರಿಂದ. ಉತ್ತರ ಕರ್ನಾಟಕದ ಜೀವನಾಡಿಯಾಗಿರತಕ್ಕಂಥ ಕೃಷ್ಣಾನದಿಯ ನೀರಿನ ಉಪಯೋಗವನ್ನು ಎರಡು ಸಾವಿರ ಇಸ್ವಿಯೊಳಗೆ ಮಾಡುವಂಥ ವಿಚಾರದಲ್ಲಿ ತಮ್ಮ ಯೋಜನೆ ಏನು ಎನ್ನುವಂಥದ್ದನ್ನು ಎಲ್ಲರೂ ಕೂಡ ನಿರೀಕ್ಷೆ ಮಾಡುತ್ತಿದ್ದಾರೆ. ಕೃಷ್ಣೆಯ ಕಣ್ಣೀರು ಬಾರದಂತೆ ಮಂತ್ರಿಗಳು ಆ ಕಣ್ಣೀರನ್ನು ಒರೆಸುತ್ತಾರೆ ಎನ್ನುವ ಭಾವನೆ ಎಲ್ಲರಲ್ಲೂ ಇತ್ತು. ಒಂದೇ ಒಂದು ಪ್ರಸ್ತಾಪ, ಆ ವಿಚಾರದ ಬಗ್ಗೆ ಕೇವಲ ಒಂದೇ ಲೈನಿನಲ್ಲಿ ಹೇಳುವಂಥದ್ದಲ್ಲ. ಇದಕ್ಕೆ ಬೇಕಾದಂಥ ಹಣವನ್ನು ಯಾವ ದಿನದೊಳಗಾಗಿ ಆ ಬಚಾವತ್ ಆಯೋಗದ ವರಮ ಪ್ರಕಾರ ಆ ನೀರನ್ನು ಸಂಪೂರ್ಣ ಉಪಯೇಗಿಸಿಕೊಳ್ಳುವುದಕ್ಕೆ ಬೇಕಾದಂಥ ಯೋಜನೆಗಳನ್ನು ನಾವು ಏನು ಮಾಡಿದ್ದೇವೆ ಎನ್ನುವಂಥದ್ದನ್ನು ಹೆಚ್ಚು ಒತ್ತು ಅದರಿಂಗ ಬರುತ್ತದೆ ಎಂದು ನಾನು ಅಂದುಕೊಂಡಿದ್ದೆ. ಕೊನೆಯ ಪಕ್ಷ ಉತ್ತರ ಕರ್ನಾಟಕದ ಜನ ವಿಶೇಷವಾಗಿ, ಈ ಯೋಜನೆ ಬಗ್ಗೆ ಕಣ್ಣಿಟ್ಟು ತಮ್ಮಿಂದ ಬಹಳ ನಿರೀಕ್ಷೆಯನ್ನು ಮಾಡುತ್ತಿದ್ದಾರೆ. ಕೃಷ್ಣೆಯ ಕಣ್ಣೀರನ್ನು ಶ್ರೀ ಕೃಷ್ಣರವರು ಬರೆಯುವಂತಹ ಒಂದು ಯೋಜನೆಯನ್ನು ಮಾಡುತ್ತಾರೆ. ಕಣ್ಣೀರು ಮತ್ತೆ ಬರದೇ ಇರುವಂಥ ರೀತಿಯಲ್ಲಿ ನೋಡಿಕೊಳ್ಳುತ್ತಾರೆ ಎನ್ನುವ ಭಾವನೆಯನ್ನು ಇನ್ನು ಕೂಡ ಇಟ್ಟುಕೊಂಡಿದ್ದೇವೆ. ಗ್ರಾಮೀಣ ಹಾಗೂ ನಗರ ಪ್ರದೇಶದ ಯುವಕರಾದ ನಾವು ತಮ್ಮ ಬಗ್ಗೆ ಬಹಳ ನಿರೀಕ್ಷೆಯನ್ನು ಇವತ್ತು ಇಟ್ಟುಕೊಂಡಿದ್ದೇವೆ. ಕಾರಣ ತಾವು ಒಬ್ಬ ವಿದ್ಯಾವಂತರಾಗಿ, ಒಬ್ಬ ಕೈಗಾರಿಕೆ ಮಂತ್ರಿಯಾಗಿ ಕೇಂದ್ರದಲ್ಲಿ ಹಾಗೂ ರಾಜ್ಯದಲ್ಲಿ ಬಹಳ ಅನುಭವವನ್ನು ಇಟ್ಟುಕೊಂಡು ಬಂದವರು, ರಾಜ್ಯದ ಯುವಕರಾದ ನಾವು ಹಾಗೂ ಜನತೆ ತಮ್ಮಿಂದ ಬಹಳ ನಿರೀಕ್ಷೆಯನ್ನು ಮಾಡಿದ್ದೆವು. ಬಹಳ ಭರವಸೆಗಳನ್ನು ನಾವು ಇಟ್ಟುಕೊಂಡಿದ್ದೆವು. ಕೈಗಾರಿಕೆ ಮಂತ್ರಿಗಳಾಗಿ ತಾವು ಆ ಸಮಯದಲ್ಲಿ ಇಟ್ಟಂತಹ ಯೋಜನೆಗಳು ಇವತ್ತು ಕೂಡ ಎಷ್ಟೋ ಯೋಜನೆಗಳು ಒಳ್ಳೆಯ ಕಾರ್ಯಗಳಾಗಿ ಉಳಿದಿವೆ. ಇವತ್ತು ತಾವು ರಾಜ್ಯಪಾಲರ ಭಾಷಣದಲ್ಲಿ ಕೊಟ್ಟಿರುವಂಥ ಎಂಪ್ಲಾಯ್‌ಮೆಂಟ್ ಜನರೇಷನ್ ಬಗ್ಗೆ. ಯಾವರೀತಿಯಾದ ಯೋಜನೆಗಳನ್ನು ತಾವು ಹಾಕಿಕೊಳ್ಳಬೇಕು, ಹಾಕಿಕೊಳ್ಳುತ್ತಿದ್ದೇವೆ ಯುವಕರ ಮನಸ್ಸಿನಲ್ಲಿ ಏನು ಭಾವನೆಗಳಿವೆ ಅದಕ್ಕೆ ಯಾವರೀತಿಯಲ್ಲಿ ಸ್ಪಂದಿಸುತ್ತಿದ್ದೇವೆ ಎನ್ನುವಂತಹ ವಿಚಾರವನ್ನು ಎಲ್ಲೂ ನಾವು ಕಾಣುತ್ತಿಲ್ಲ. ನಾನು ಒಂದು ಸಲ ಬಸ್ಸಿನಲ್ಲಿ ಬಂದು ಇಳಿದಾಗ, ಆಟೋವನ್ನು ಹತ್ತಿದೆ. ಆ ಆಟೋದಲ್ಲಿ ಆಟೋಡ್ರೈವರ್ ಒಂದು ಲೇಖನವನ್ನು ಬರೆಸಿದ್ದ, "ಓದುಬರಹ ಕಲಿಯಿರಿ ಕೆಲಸವಿಲ್ಲದೆ ಅಲೆಯಿರಿ" ಎಂದು ನಾನು ಅವನನ್ನು ಕೇಳಿದೆ. ಏನಪ್ಪ ಆಟೋದಲ್ಲಿ ಹೀಗೆ ಬರೆದಿದ್ದೀಯಾ ಅಂದೆ. ಅವನು ಬಹಳ ನೋವಿನಿಂದ ಒಂದು ವಿಚಾರವನ್ನು ಹೇಳಿದ. ಏನು ಮಾಡುವುದು ಸಾರ್ ಬಂದಂತಹ ರಾಜಕಾರಣಿಗಳು ಇದನ್ನೆ ಹೇಳಿಕೊಂಡು ಹೋಗುತ್ತಿರುವಾಗ ನಾನು ಇನ್ನೇನು ಮಾಡುವುದಕ್ಕೆ ಸಾಧ್ಯವಿದೆ? ನಾನು ಒಬ್ಬ ಮ್ಯಾಥಮೆಟಿಕ್ಸ್ ನಲ್ಲಿ ಎಂಎಸ್ಸಿ ಮಾಡಿದಂತಹವನು. ಕೆಲಸ ಇಲ್ಲ ಆಟೋ ಓಡಿಸಿಕೊಂಡಿದ್ದೇನೆ. ಈ

ರಾಜ್ಯದಲ್ಲಿ ಯಾರೇ ಆಗಿರಲಿ, ಬಂದಂತಹ ಯಾವುದೇ ಮುಖ್ಯ ಮಂತ್ರಿಗಳಿಂದಲೂ ಕೂಡ ಇದರ ಬಗ್ಗೆ ಹೆಚ್ಚು ಒತ್ತನ್ನು ನಾನು ಕಾಣುತ್ತಿಲ್ಲ. ಯುವಕನಾದ ನನಗೆ ಅಂತಹ ನಿರಾಶೆಯಾಗಿದೆನ್ನುವಂತಹ ವಿಚಾರವನ್ನು ಅವನು ವ್ಯಕ್ತಪಡಿಸಿದ. ನಿಮ್ಮಂತಹ ಒಬ್ಬರು ಮೇಧಾವಿ ಮುಖ್ಯಮಂತ್ರಿಗಳು ಇಲ್ಲಿಗೆ ಬಂದಾಗಲೂ ಕೂಡ ಈ ರಾಜ್ಯದ ಲಕ್ಷಾಂತರ ಜನ ಯುವಕರು ಅವರ ಎಂಪ್ಲಾಯಿಮೆಂಟ್ ಜನರೇಷನ್ನ ಬಗ್ಗೆ ಬಹಳ ಆಶಾಕಿರಣವಾದಂತಹ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ನಗರ ಮತ್ತು ಗ್ರಾಮೀಣಪ್ರದೇಶಗಳ ಯುವಕರುಗಳಿಗೆ ನಿಮ್ಮ ಕೊಡುಗೆಯೇನು? ಯೋಜನೆಗಳೇನು? ಎನ್ನುವುದರ ಬಗ್ಗೆ ಚರ್ಚೆ ಇಲ್ಲದಿರುವುದು ನಮ್ಮಂತಹವರಿಗೆ ಬಹಳ ನೋವನ್ನು ತರುತ್ತಿದೆ ಎನ್ನುವ ವಿಚಾರವನ್ನು ತಮ್ಮ ಮುಂದೆ ಹೇಳಲಿಕ್ಕೆ ಇಚ್ಛಿಪಡುತ್ತೇನೆ. ಹಾಗೆಯೇ ಒಂದು ಬಹಳ ಒಳ್ಳೆಯ ವಿಚಾರವನ್ನು ಹೇಳಿದ್ದೀರಿ. ಕೈಗಾರಿಕೆಗಳಿಗೆ ಬೇಕಾಗಿರುವಂತಹ ಇನ್‌ಫ್ರಾಸ್ಟ್ರಕ್ಚರ್‌ಸ್ನನ್ನು ಡೆವಲಪ್ ಮಾಡಲಿಕ್ಕೋಸ್ಕರವಾಗಿ ನಮ್ಮದೇ ಆದಂತಹ ಯೋಜನೆಗಳನ್ನು ತಯಾರು ಮಾಡುತ್ತಿದ್ದೇವೆಂದು ಹೇಳಿದ್ದೀರಿ, ಬಹಳ ಸಂತೋಷ. ಇದರ ಬಗ್ಗೆ ನಿಮ್ಮಲ್ಲಿರುವಂತಹ ಫೋರ್‌ಥಾಟ್ಸ್‌ಗಳ ಬಗ್ಗೆ ನಮಗೂ ಆಸೆಯಿದೆ. ಆದರೆ ಒಂದು ಚಿಂತನೆ ಅದರಲ್ಲಿ ಕಾಣಿಸಲಿಲ್ಲ. ಕೇವಲ ಬೇಕಾಗಿರುವಂತಹ ಇನ್‌ಫ್ರಾಸ್ಟ್ರಕ್ಚರ್‌ಸ್ನನ್ನು ಒದಗಿಸುವುದು ಒಂದು ಭಾಗವಾಗಿದೆ. ರಾಜ್ಯದಲ್ಲಿ ಶೇಕಡ 47 ಭಾಗ ಕೈಗಾರಿಕೆಗಳು ವಿಶೇಷವಾಗಿ ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳು ಮುಚ್ಚಿ ಲಕ್ಷಾಂತರ ಜನರು ಇವತ್ತು ಬೀದಿಪಾಲಾಗುವಂತಹ ವ್ಯವಸ್ಥೆಗಳನ್ನು ಕೇವಲ ಈ ಸರ್ಕಾರದಿಂದ ಎಂದು ನಾನು ಹೇಳುತ್ತಿಲ್ಲ. ಹಿಂದಿನ ಸರ್ಕಾರಗಳು ಮಾಡಿಕೊಂಡು ಬಂದಿವೆ. ಅದಕ್ಕೆ ಬೇಕಾದ ಅಭಿವೃದ್ಧಿಗೋಸ್ಕರವಾಗಿ ವಿಶೇಷವಾಗಿ ನೊಂದ ಕೈಗಾರಿಕೆಗಳಿಗೆ ಪುನರ್ ಜೀವನ ಕೊಡಲಿಕ್ಕೋಸ್ಕರವಾಗಿ ಯಾವ ಯೋಜನೆಗಳನ್ನು ಕೂಡ ರಾಜ್ಯಪಾಲರ ಭಾಷಣದಲ್ಲಿ ಇವತ್ತು ಕಾಣಿಸದೇ ಇರುವಂತಹದ್ದು ಬಹಳ ನೋವಿನ ಸಂಗತಿ. ಆದರೆ ಒಂದು ಸಂತೋಷದ ವಿಚಾರ. ಕಳೆದ ಒಂದು ತಿಂಗಳಿಂದ ಮಾನ್ಯ ಮುಖ್ಯಮಂತ್ರಿಗಳು, ತಮ್ಮ ಮಾತುಗಳು ಭಾಷಣಗಳು ದೂರದರ್ಶನದಲ್ಲಿ ಎಲೆಕ್ಟ್ರಾನಿಕ್ ಮಿಡಿಯಾಗಳಲ್ಲಿ ನೋಡಿದಾಗ ನಮಗನಿಸುತ್ತೆ ನೀವು ಒಬ್ಬರು ಕಂಪ್ಯೂಟರ್ ಫ್ರೆಂಡ್ಲಿ ಅಂತ. ಐ.ಟಿ. ಫ್ರೆಂಡ್ಲಿ ಅಂತನೂ ನಮಗೆ ಗೊತ್ತಿದೆ. ಆದರೆ ಅದರ ಜೊತೆಯಲ್ಲಿ ಕೇವಲ ಸಾಫ್ಟ್‌ವೇರ್ ಇಂಜಿನಿಯರಿಂಗ್ ಮತ್ತು ಇನ್‌ಸ್ಟ್ರುಮೆಂಟೇಷನ್ ಟೆಕ್ನಾಲಜಿ ಎರಡನ್ನು ಬಿಟ್ಟು ಬೇರೆ ಕ್ಷೇತ್ರದಲ್ಲಿ ಈ ಕೈಗಾರಿಕೆಗಳಲ್ಲಿ ರಾಜ್ಯದಲ್ಲಿ ಆಗಬೇಕಾದಂತಹ ಪ್ರಗತಿ ಯಾವ ರೀತಿಯಲ್ಲಿ ಕುಂಠಿತವಾಗಿದೆ ಅದರ ಬಗ್ಗೆ ವಿಶೇಷವಾಗಿ ಪಬ್ಲಿಕ್ ಅಂಡರ್‌ಟೇಕಿಂಗ್ ಇಂಡಸ್ಟ್ರೀಸ್ ಇರಬಹುದು, ಹೆವಿ ಇಂಡಸ್ಟ್ರೀಸ್‌ಗಳು ಇರಬಹುದು ಇವುಗಳು ಯಾವ ರೀತಿಯಲ್ಲಿ ಸಫರ್ ಪಡುತ್ತಿವೆ ಅವುಗಳಿಗೆ ಅದರ ಅಭಿವೃದ್ಧಿಯ ಬಗ್ಗೆ ಇದರಲ್ಲೂ ಎಲ್ಲೂ ಪ್ರಸ್ತಾಪ ಮಾಡದಿರುವುದನ್ನು ನೋಡಿದಾಗ ಇದು ಸ್ವಲ್ಪ ಮನಸ್ಸಿಗೆ ನೋವನ್ನು ತರುವಂತಹ ವಿಚಾರವೆಂದು ನನಗನಿಸುತ್ತದೆ. ನಿನ್ನೆ ಒಂದು ವಿಚಾರವನ್ನು

ತಾವು ಕೈಗಾರಿಕಾ ಎಕ್ಸಿಬಿಷನ್ ಅನ್ನು ಉದ್ಘಾಟನೆ ಮಾಡುವಾಗ ಹೇಳಿದ್ದೀರಿ. 204ನೇ ಇಸವಿಯಿಂದ 2005ನೇ ಇಸವಿಯೊಳಗೆ ಇಡೀ ದೇಶದಲ್ಲಿ ನಮ್ಮಲ್ಲಿರುವಂತಹ ಸಂಪನ್ಮೂಲಗಳನ್ನು ಉಪಯೋಗಿಸಿಕೊಂಡು ರಾಜ್ಯವನ್ನು ಸೂಪರ್ ಸ್ಟೇಟ್ ಮಾಡುತ್ತೇನೆ ಎನ್ನುವಂತಹ ವಿಚಾರವನ್ನು ಹೇಳಿದ್ದೀರಿ ಇದು ಬಹಳ ಸ್ವಾಗತಾರ್ಹವಾದಂತಹ ವಿಚಾರ. ಆದರೆ ಅದರ ಜೊತೆಯಲ್ಲಿ ತಾವೊಂದು ಮಾತನ್ನು ಹೇಳಿದ್ದೀರಿ; ಕೇವಲ ಒಂದು ವರ್ಷದೊಳಗಾಗಿ ರಾಜ್ಯದಲ್ಲಿ ಏನು ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಕುಂಠಿತ ಹೊಂದಿದೆ. ಆ ಕುಂಠಿತವನ್ನು ನಿಲ್ಲಿಸಿ ಪ್ರೋಗ್ರೆಸ್ಸೀವ್ ಆಗಿ ತೆಗೆದುಕೊಂಡು ಹೋಗುತ್ತೇನೆ ಎನ್ನುವ ಮಾತನ್ನು ಹೇಳಿದ್ದೀರಿ. ಆದರೆ ನೀವು ಯಾವ ರೀತಿಯಲ್ಲಿ ಹೋಗುತ್ತೀರಿ ಎನ್ನುವಂತಹ ದಿಕ್ಸೂಚಿ ನಮ್ಮ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಸಿಗುತ್ತಿಲ್ಲ. ಹತ್ತಾರು ವರ್ಷಗಳಿಂದ ಕೈಗಾರಿಕೆಗಳು ಯಾವ ರೀತಿ ದಾರಿತಪ್ಪಿ ಹೋಗುತ್ತಿವೆ ಅವುಗಳನ್ನು ಸರಿಯಾದಂತಹ ಮಾರ್ಗದಲ್ಲಿ ತೆಗೆದುಕೊಂಡು ಹೋಗುವಂತಹ ಮಾರ್ಗ ಯಾವುದು ಎನ್ನುವ ವಿಚಾರಗಳು ನಮಗೆ ಸಿಗುತ್ತಿಲ್ಲ. ಹಿಂದೆ ನಾವು ಯಾರನ್ನು ಬೈಯುತ್ತಿದ್ದೇವೊ ಕೈಗಾರಿಕೆಗಳ ಅಭಿವೃದ್ಧಿಯ ಬಗ್ಗೆ ಏನೂ ಆಗುತ್ತಿಲ್ಲ, ಬರೀ ಭಾಷಣವನ್ನು ಮಾಡುತ್ತಿದ್ದೀರಿ ಅಂತ, ಅವರೇ ನಿಮ್ಮ ಸರ್ಕಾರದಲ್ಲಿ ಈಗ ಕೈಗಾರಿಕಾ ಮಂತ್ರಿಗಳಾಗಿದ್ದಾರೆ. 5 ವರ್ಷಗಳ ಕಾಲದಿಂದ ಏನು ಹೇಳಿದರೋ ನಿನ್ನೆಯೂ ಅದನ್ನೆ ಹೇಳಿದ್ದಾರೆ. ಈ ರಾಜ್ಯಕ್ಕೆ ಹೊಸ ಮುಖ್ಯಮಂತ್ರಿಗಳು ಬಂದಿದ್ದಾರೆ, ಅವರು ಅನುಭವಸ್ಥರು ಇದ್ದಾರೆ. ಕಾಂಗ್ರೆಸ್ ಸರ್ಕಾರದವರು ಇಂಡಸ್ಟ್ರಿಯಲ್ಲಿ ಹೊಸದಾಗಿ ಪಾಲಿಸಿಯನ್ನು ನಾವು ಕೊಡುತ್ತಿದ್ದೇವೆಂದು ಹೇಳಿದರೆ, ಕಳೆದ ನಾಲ್ಕು ವರ್ಷಗಳಿಂದ ಈ ಮಾತನ್ನು ಹೇಳಿಕೊಂಡೇ ಬಂದಿದ್ದಾರೆ. ಇವತ್ತು ಕೂಡ ಹೊಸ ಇಂಡಸ್ಟ್ರಿಯಲ್ ಪಾಲಿಸಿ ಎಂದು ಹೇಳಿದರು. ಅದು ನಾಲ್ಕು ವರ್ಷಗಳಲ್ಲಿ ಆಗದೇ ಇರುವುದು, ಇಲ್ಲಿಂದ ಅಲ್ಲಿಗೆ ಹೋಗಿರುವಾಗ ಅದು ಎಲ್ಲಿಂದ ಬರುತ್ತದೆ? ಕಾರಣ ನೊಂದಂತಹ ಕಾರ್ಮಿಕರು, ವಿಶೇಷವಾಗಿ ವಿದ್ಯಾವಂತ ಯುವಕರುಗಳು ಏನಿದ್ದಾರೆ ಅವರಿಗೆ ಹೊಸ ಕೈಗಾರಿಕಾ ನೀತಿಯೇನು ಎಂದು ಕೇಳಲಿಕ್ಕೆ ನಾನು ಇಚ್ಚಿಸಪಡುತ್ತಿದ್ದೇನೆ. ಮತ್ತೊಂದು ವಿಚಾರವನ್ನು ನಾನು ಆಗಲೇ ಹೇಳಿದ ಹಾಗೆ, ಈ ರಾಜ್ಯಪಾಲರ ಭಾಷಣದಲ್ಲಿ ಎರಡು ವಿಚಾರಗಳಲ್ಲಿ ಹೊಸತನವನ್ನು ಕೊಟ್ಟಿದೆ. ರಸ್ತೆಗಳ ಅಭಿವೃದ್ಧಿ ಬಗ್ಗೆ ಇಡೀ ರಾಜ್ಯದಲ್ಲಿ ಕರ್ನಾಟಕ ಮತ್ತು ತಮಿಳುನಾಡಿನ ಬಾರ್ಡರ್ ಹೇಗೆಂದು ಹೇಳಿದಾಗ, ಸಾಮಾನ್ಯ ಒಬ್ಬ ವಿದ್ಯಾರ್ಥಿ ಹೇಳಿದಂತಹ ಮಾತು; ಅದಕ್ಕೇನು ಬೌಂಡರಿಲೈನ್ ಹಾಕಬೇಕಾಗಿಲ್ಲ, ಕರ್ನಾಟಕದಿಂದ ನಾವು ಬಸ್ಸಿನಲ್ಲಿ ಹೋಗುತ್ತಿದ್ದರೆ ಎಲ್ಲಿಯವರೆಗೆ ನಮ್ಮ ಬಸ್ ಅಲುಗಾಡುತ್ತಿರುತ್ತದೋ ಅಲ್ಲಿಯವರೆಗೆ ಕರ್ನಾಟಕ ಇದೆಯೆಂದು, ಎಲ್ಲಿ ಬಸ್ ಸುಲಲಿತವಾಗಿ ಹೋಗುತ್ತದೆ ಅದು ತಮಿಳು ನಾಡುಯೆಂದು ಗೊತ್ತಾಗುತ್ತದೆಂದು ಟೂರ್ ಹೋದಂತಹ ಒಬ್ಬ ವಿದ್ಯಾರ್ಥಿ ಹೇಳಿದಂತಹ ಮಾತು. ಅಂದರೆ ಶಾಲೆಗೆ ಹೋಗುವಂತಹ ಒಬ್ಬ ಸಾಮಾನ್ಯ ವಿದ್ಯಾರ್ಥಿಯು ಕೂಡ ರಾಜ್ಯದ ರಸ್ತೆಯ ವ್ಯವಸ್ಥೆಯ ಬಗ್ಗೆ

ಚಿಂತನೆಯನ್ನು ಮಾಡುತ್ತಿದ್ದಾನೆಂದರೆ, ನಿಮ್ಮ ಜವಾಬ್ದಾರಿ ಎಷ್ಟಿದೆ ಎನ್ನುವ ಅರಿವನ್ನು ಇಟ್ಟುಕೊಂಡು ತಾವು ಉಲ್ಲೇಖನ ಮಾಡಿದ್ದೀರಿ. ಇವತ್ತು ತಮ್ಮ ಪಕ್ಷವನ್ನು ಕಟ್ಟಿ ಬೆಳೆಸಿದಂತಹವರು ಮಾನ್ಯ ಧರ್ಮಸಿಂಗ್‌ರವರು ಆ ಖಾತೆಯನ್ನು ವಹಿಸಿಕೊಂಡಿದ್ದಾರೆ. ಹಾಗಾಗಿ ರಾಜ್ಯದಲ್ಲಿ ರಸ್ತೆಯ ದುರಸ್ತಿಯನ್ನು ಮಾಡುವುದು ಅದಕ್ಕಾಗಿ ಹಣವನ್ನು ಖರ್ಚು ಮಾಡುವುದು ಒಂದು ಭಾಗ. ಆದರೆ ತಮಗೆ ಬೇರೆ ಬೇರೆ ಒತ್ತಡಗಳು ಬರಬಹುದು. ಆದರೂ ಒಂದು ರಸ್ತೆಯನ್ನು ನಿರ್ಮಾಣ ಮಾಡುವುದರಲ್ಲಿ ಆ ರಸ್ತೆಗೆ ಎಷ್ಟು ವರ್ಷ ಲೈಫ್? ಅದಕ್ಕೆ ವಾರಂಟ್ ಪೀರಿಯಡ್ ಎಷ್ಟು? ಆ ರಸ್ತೆಯನ್ನು ಮಾಡಿದಂತಹ ಕಂಟ್ರಾಕ್ಟರ್ ಯಾರು?

ಶ್ರೀ ಎಸ್.ಎಂ. ಕೃಷ್ಣ:- (ಮಾನ್ಯ ಮುಖ್ಯಮಂತ್ರಿ) ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ರಸ್ತೆಯ ಬಗ್ಗೆ ಬಹಳ ಸ್ವಾರಸ್ಯವಾಗಿ ಹೇಳುತ್ತಿದ್ದಾರೆ. ನನ್ನ ಎಜುಕೇಶನ್‌ಗೋಸ್ಕರ ತಮ್ಮನ್ನು ಕೇಳುತ್ತೇನೆ, ಒಂದು ರಸ್ತೆ ಕೆಡಬೇಕಾದರೆ ಎಷ್ಟು ವರ್ಷಗಳು ಬೇಕಾಗಬಹುದು?

ಶ್ರೀ ಎ. ರಾಮದಾಸ್:- ಮಾನ್ಯ ಅಧ್ಯಕ್ಷರೆ, ಒಂದು ರಸ್ತೆಯ ನಿರ್ಮಾಣವನ್ನು ಮಾಡಬೇಕಾದರೆ, ಒಂದು ರಸ್ತೆ ಕೇಡಬೇಕಾದರೆ ನಾನು ಶಾಸಕನಾಗಿ ಐದು ವರ್ಷಗಳ ನನ್ನ ಅನುಭವದಲ್ಲಿ ಹೇಳಬೇಕಾದರೆ ಮೂರು ವರ್ಷಗಳಾದರೂ ಕೆಡವಿರುವಂತಹ ರಸ್ತೆಗಳು ಇವೆ. ರಸ್ತೆಯನ್ನು ಮಾಡಿ ಮೂರು ದಿವಸಗಳಲ್ಲಿ ಕೆಟ್ಟಿರತಕ್ಕ ರಸ್ತೆಗಳನ್ನು ನಾನು ನೋಡಿದ್ದೇನೆ.

ಶ್ರೀ ಎಸ್. ಯೋಗೀಶ್‌ಭಟ್:- ಮಾನ್ಯ ಉಪಾಧ್ಯಾಕ್ಷರೆ, ಇಲ್ಲಿ ನಾನೊಂದು ಉಲ್ಲೇಖ ಮಾಡುತ್ತಿದ್ದೇನೆ. ಕುದುರೆಮುಖ ರಸ್ತೆ ಏನಿದೆ ಅದನ್ನು ನಾವು ಎಲ್ಲ ಕಡೆಗೆ ರೆಫರ್ ಮಾಡುವಂತಹ ರಸ್ತೆ. ಕಾರ್ಕಳದಿಂದ ಕುದುರೆಮುಖ ಮೈನಿಂಗ್ ಕೆಲಸ ಏನು ನಡೆಯುತ್ತಿದೆ ಅಲ್ಲಿಗೆ ಹೋಗುವಂತಹ ರಸ್ತೆ. ಕಳೆದ ಹತ್ತು ಹದಿನೈದು ವರ್ಷಗಳಿಂದ ಆ ರಸ್ತೆ ಇವತ್ತಿಗೂ ಕೂಡ ಅದು ಡ್ಯಾಮೇಜ್ ಆಗಿಲ್ಲ. ನಮಗೆ ಆ ರಸ್ತೆಯನ್ನು ಕಂಪೇರ್ ಮಾಡುವಾಗ ಲೋಕೋಪಯೋಗಿ ಇಲಾಖೆ ರಸ್ತೆ, ನ್ಯಾಷನಲ್ ಹೈವೇ ರಸ್ತೆ, ಕಾರ್ಪೊರೇಷನ್ ರಸ್ತೆಗಳನ್ನು ನಾವು ತುಲನಾತ್ಮಕ ಮಾಡುವಾಗ ಕಳೆದ 15 ವರ್ಷಗಳಿಂದ ಅಷ್ಟೇ ಜೋರು ಮಳೆ ಅಲ್ಲಿ ಇರುತ್ತೆ, ಪ್ರಾಕೃತಿಕ ವೈಪರೀತ್ಯ ಏನಿದೆ ಅದೆಲ್ಲವನ್ನು ಅದು ಸಹಿಸುತ್ತಾ ಆ ರಸ್ತೆ ಏನೂ ಡ್ಯಾಮೇಜ್ ಆಗಿಲ್ಲ. ಅಂದರೆ ಎಲ್ಲೋ ಕೊರತೆ ನಮ್ಮಲ್ಲಿದೆ. ಗ್ಯಾರಂಟಿ ಪೀರಿಯಡ್ ಇನ್ಸಿಸ್ಟ್ ಮಾಡುವಲ್ಲಿ ನಾವು ತಪ್ಪಿದ್ದೇವೆಯೇ ಅಥವಾ ಅದರ ಜೊತೆ ಜೊತೆಯಲ್ಲಿ ಅದಕ್ಕೆ ರೆಸ್ಪಾನ್ಸಿಬಲಿಟಿಯನ್ನು ಫಿಕ್ಸ್ ಮಾಡಲಿಕ್ಕೆ ಯಾರು ಅಕೌಂಟನಲಿಟಿ ಎಂಬುದನ್ನು ಫಿಕ್ಸ್ ಮಾಡಲಿಕ್ಕೆ ತಪ್ಪಿಬಿದ್ದಿದ್ದೇವೆಯೊ ಅಥವಾ ಎಲ್ಲಿ ತಪ್ಪಿದ್ದೇವೆಂದು ಖಂಡಿತಾ ನಾವು ಯೋಚನೆ ಮಾಡಬೇಕು. 15 ವರ್ಷ ಒಂದು ರಸ್ತೆ ಹಾಳಾಗದಿದ್ದರೆ ಖಂಡಿತಾ ಇದರ ಬಗ್ಗೆ ನಾವು ಯೋಚನೆ ಮಾಡಬೇಕೆಂದು ಹೇಳುತ್ತಿದ್ದೇನೆ.

ಉಪಾಧ್ಯಕ್ಷರು:- ಮಾನ್ಯ ಸದಸ್ಯರಾದ ರಾಮದಾಸರವರೇ ನೀವು ಬೇಗ ಮುಗಿಸಿ.

ಶ್ರೀ ಎ. ರಾಮದಾಸ್:- ಮಾನ್ಯ ಉಪಾಧ್ಯಕ್ಷರೆ, ಪ್ರಮುಖವಾಗಿ ನಾನು ಏಕೆ ಈ ವಿಚಾರವನ್ನು ಹೇಳಿದೆ ಅಂದರೆ, ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಇದಕ್ಕೆ ಬಹಳ ಒತ್ತನ್ನು ಕೊಟ್ಟಿರುವುದರಿಂದ ಹಣವನ್ನು ಖರ್ಚು ಮಾಡುವುದು ಒಂದು ಭಾಗ. ಯಾವುದಾದರೂ ವ್ಯಕ್ತಿಗೆ ಒಂದು ರಸ್ತೆಯ ನಿರ್ಮಾಣದ ಕೆಲಸವನ್ನು ಕೊಡುತ್ತೀರಿ. ರಸ್ತೆಯ ಎರಡು ಬದಿಗಳಲ್ಲಿ ಅದರ ಖರ್ಚೆಷ್ಟು ಅದಕ್ಕೆ ಸಂಬಂಧಪಟ್ಟಹಾಗೆ ಎಷ್ಟು ವಿಸ್ತೀರ್ಣದ ರಸ್ತೆಯನ್ನು ಮಾಡುತ್ತಿದ್ದೀರಿ, ಅದಕ್ಕೆ ವಾರಂಟಿ ಪೀರಿಯಡ್ ಎಷ್ಟು? ಮೇಂಟೆನೆನ್ಸ್‌ಗೋಸ್ಕರ ಅವನಿಗೆ ಎಷ್ಟು ವರ್ಷ ಬಿಟ್ಟು ಕೊಡುತ್ತಿದ್ದೀರಿ? ಇದರ ಎಲ್ಲ ವಿವರವನ್ನು ಕೊಡಿ. ಜನಸಾಮಾನ್ಯರಿಗೆ ಪಾರದರ್ಶಕವಾದಂತಹ ನಿಮ್ಮ ಆಡಳಿತ ಅದರಲ್ಲಿ ಕಾಣಿಸಲಿಕ್ಕೆ ಪ್ರಾರಂಭವಾಗುತ್ತದೆ. ಆಗ ಆ ರಸ್ತೆಯನ್ನು ನಿರ್ಮಾಣ ಮಾಡಿದಂತಹವರು ರಸ್ತೆಯನ್ನು ನಿರ್ಮಾಣ ಮಾಡಲಿಕ್ಕೆ ಯೋಜನೆಯನ್ನು ಮಾಡಿದಂತಹವರು ಅವರಿಗೆ ಸಹ ಒಂದು ಒಳ್ಳೆಯ ಹೆಸರು ಬರಲಿಕ್ಕೆ ಕಾರಣವಾಗುತ್ತದೆ.

ಉಪಾಧ್ಯಕ್ಷರು:- ಬಹಳ ಸಮಯವಾಯಿತು, ಇನ್ನು ಮಾತನಾಡುವವರು ಬಹಳ ಮಾನ್ಯ ಸದಸ್ಯರುಗಳು ಇದ್ದಾರೆ. ದಯವಿಟ್ಟು ಬೇಗ ಮುಗಿಸಿ.

ಶ್ರೀ ಎ. ರಾಮದಾಸ್:- ಇದರಲ್ಲು ಬಹಳ ಪ್ರಮುಖವಾಗಿ ಬೆಂಗಳೂರು ನಗರದ ಅಭಿವೃದ್ಧಿಯ ಬಗ್ಗೆ ಹೇಳಿದ್ದೀರಿ. ನಾನು ವೀಕ್ಷಣೆ ಮಾಡಿದ್ದೇನೆ. ಯಾವುದೇ ಮಹಾನಗರಪಾಲಿಕೆಗಳನ್ನು ನೋಡಿ, ಇವತ್ತು ಆರ್ಥಿಕ ಸಂಕಷ್ಟದಲ್ಲಿ ನಗರಪ್ರದೇಶದ ರಸ್ತೆಗಳು ಸಂಪೂರ್ಣವಾಗಿ ಹಾಳಾಗಿವೆ. ಅಭಿವೃದ್ಧಿ ಕೆಲಸಗಳಿಗೆ ಹಣವಿಲ್ಲ. ಇಂತಹ ಪರಿಸ್ಥಿತಿ ಇರುವಾಗ ಅಲ್ಲಿನ ಸಂಪನ್ಮೂಲಗಳನ್ನು ರೂಢಿಸಿಕೊಳ್ಳಬೇಕಾದರೆ ಕಾನೂನಿನ ಚೌಕಟ್ಟಿನೊಳಗಡೆ ಸಮಸ್ಯೆ ಇರುವಂತಹದ್ದನ್ನು ನಿಮ್ಮ ಸರ್ಕಾರದಿಂದ ನಾನು ನಿರೀಕ್ಷಣೆ ಮಾಡಿದ್ದೆ. ಎರಡು ಕಮಿಷನ್‌ಗಳನ್ನು ಅಪಾಯಿಂಟ್ ಮಾಡಿದ್ದರು. ತಿಮ್ಮಯ್ಯ ಕಮಿಷನ್ ರಿಪೋರ್ಟ್ ಎಲ್ಲಿದೆ ಎಂಬುದು ಗೊತ್ತಿಲ್ಲ. ಸ್ಥಳೀಯ ಸಂಸ್ಥೆಗಳನ್ನು ಬಲಪಡಿಸುವ ನಿಟ್ಟಿನಲ್ಲಿ ತಮ್ಮ ಸರ್ಕಾರ ಯಾವ ಹೆಜ್ಜೆಯನ್ನು ಹಾಕುತ್ತೇವೆ. ಎನ್ನುವ ವಿಚಾರವನ್ನು ನಾವೇನು ನಿರೀಕ್ಷಣೆ ಮಾಡಿದ್ದೆವು ಅದರ ಬಗ್ಗೆ ಇದರಲ್ಲಿ ಎಲ್ಲೂ ಕೂಡ ಪ್ರಸ್ತಾಪ ಮಾಡಿಲ್ಲ. ಹಾಗಾಗಿ ಸ್ಥಳೀಯ ಸಂಸ್ಥೆಗಳು ವಿಶೇಷವಾಗಿ ಮಹಾನಗರ ಪಾಲಿಕೆಗಳ ಬಲಪಡಿಸುವುದಕ್ಕೋಸ್ಕರವಾಗಿ ಕಾರ್ಯಕ್ರಮಗಳನ್ನು ನಿಮ್ಮ ಸರ್ಕಾರ ಕಾರ್ಯರೂಪಕ್ಕೆ ತರುವಂತಹ ಯೋಜನೆಗಳು ಆಗಬೇಕೆಂದು ನಾವು ನಿರೀಕ್ಷಣೆಯನ್ನು ಮಾಡುತ್ತಿದ್ದೇವೆ.

ಮತ್ತೊಂದು ತಾವು ಎಜುಕೇಷನ್ ಬಗ್ಗೆ ಪ್ರಸ್ತಾಪ ಮಾಡುವಂಥ ವಿಚಾರದಲ್ಲಿ ನಾನು ನೋಡಿದೆ; ಪ್ರೈಮರಿ ಎಜುಕೇಷನ್ ಬಗ್ಗೆ ಕೆಲವೊಂದು ವಿಚಾರಗಳನ್ನು ಹೇಳಿದ್ದೀರಿ. ನಾನು ನಿರೀಕ್ಷಣೆ ಮಾಡಿದಂತಾದ್ದು, ತಾವು ಆಕ್ಸ್‌ಫರ್ಡ್‌ನಲ್ಲಿ ಆಕ್ಸ್‌ಫರ್ಡ್ ಕೃಷ್ಣರಾಗಿ,

4.30 ಪಿ.ಎಂ.

ಟೆಕ್ನಾನ್ ಕೃಷ್ಣರಾಗಿ ಮುಖ್ಯಮಂತ್ರಿಯಾಗಿ ಇಲ್ಲಿಗೆ ಬಂದಮೇಲೆ ಈ ರಾಜ್ಯದಲ್ಲಿರುವಂಥ ವಿಶ್ವವಿದ್ಯಾನಿಲಯದ, ಹೊಲಿಸಿನ ಸಂತೆಯಾಗಿರುವಂಥ ವಿಶ್ವವಿದ್ಯಾನಿಲಯಗಳನ್ನು ಸ್ವಲ್ಪವಾದರೂ ಕೂಡ ಸರಿದಾರಿಯಲ್ಲಿ ತರುತ್ತೀರಾ ಎಂಬ ನಿರೀಕ್ಷಣೆ ನಮ್ಮೆಲ್ಲರಿಗೂ ಇತ್ತು. ಆದರೆ, ಉನ್ನತ ಶಿಕ್ಷಣದ ಬಗ್ಗೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಎಲ್ಲಿಯೂ ಕೂಡ, ರಾಜ್ಯದಲ್ಲಿ ಕಳೆದು ಹೋಗಿರುವ ವಿಚಾರದಲ್ಲಿ ತಾವು ಯಾವುದೇ ಕಾರ್ಯವನ್ನು ಕ್ರಮ ಮಾಡುವುದರ ಬಗ್ಗೆ ಪ್ರಸ್ತಾಪವನ್ನು ಮಾಡದೇ ಇರುವಂತಾದ್ದು, ವಿಶೇಷವಾಗಿ ಶಿಕ್ಷಣ ತಜ್ಞರು ಮತ್ತು ವಿದ್ಯಾರ್ಥಿಗಳಲ್ಲಿ ಅಸಮಾಧಾನವನ್ನು ಉಂಟು ಮಾಡಿದೆ ಎಂದು ಬಹಳ ನೋವಿನಿಂದ ಹೇಳಬೇಕಾಗುತ್ತಿದೆ.

ಉಪಾಧ್ಯಕ್ಷರು:- ದಯವಿಟ್ಟು ಬೇಗ ಮುಗಿಸಿ. ಕಾಲಾವಕಾಶ ಬಹಳ ಕಡಿಮೆ ಇದೆ. ಇನ್ನು ಬೇರೆಯವರು ಮಾತನಾಡುವವರಿದ್ದಾರೆ, ಆದ್ದರಿಂದ ಮುಗಿಸಿ.

ಶ್ರೀ ಎ. ರಾಮದಾಸ್:- ವಿಶೇಷವಾಗಿ ನನ್ನ ಪಕ್ಷದ ದೃಷ್ಟಿಯಲ್ಲಿ, ಕೆಲವು ವಿಷಯಗಳನ್ನು ಪರಿಚಯ ಮಾಡಿಕೊಡುವ ದೃಷ್ಟಿಯಿಂದ ಹೇಳಬೇಕಾಗಿದೆ.

ಶ್ರೀ ಜಗದೀಶ್ ಶೆಟ್ಟರ್:- ನಮ್ಮ ಪಕ್ಷದ ವತಿಯಿಂದ ಮಾತನಾಡಿರುವವರು ಬಹಳ ಲಿಮಿಟೆಡ್ ಆಗಿಯೇ ಮಾತನಾಡಿದ್ದೇವೆ. ನಮ್ಮ ಹಾಜರಾತಿ ನೋಡಿದರೆ, ತಾವು ಪಕ್ಷದ ಪರವಾಗಿ ಸಮಯ ಹಂಚಬಹುದು.

ಉಪಾಧ್ಯಕ್ಷರು:- ನಾನು ಎಲ್ಲರಿಗೂ ಅವಕಾಶ ಕೊಡುತ್ತಾ ಇದ್ದೇನೆ. ಹಾಗಾದರೆ ಬೇರೆಯವರಿಗೆ ಕೊಡುವುದು ಬೇಡವೇ? ನಿಮ್ಮ ಪಕ್ಷದ ಬೇರೆ ಸದಸ್ಯರಿಗೂ ಅವಕಾಶ ಬೇಕು ಎಂದು ಹೇಳುವುದಾದರೆ, ನೀವೂ ಸಹಕರಿಸಬೇಕು. ಇಲ್ಲದೇ ಇದ್ದರೆ ಆಗುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್:- ಅವರಿಗೆ ಇನ್ನೂ ಸ್ವಲ್ಪ ಹೊತ್ತು ಕಾಲಾವಕಾಶ ಕೊಡಿ. ಬೇರೆ ಕೆಲವೊಂದು ವಿಚಾರಗಳನ್ನು ಮಾತನಾಡುತ್ತಾರೆ.

ಉಪಾಧ್ಯಕ್ಷರು:- ಈಗಾಗಲೇ ಸಾಕಷ್ಟು ಮಾತನಾಡಿದ್ದಾರೆ. ಗರಿಷ್ಟ ಎರಡು ನಿಮಿಷಗಳಲ್ಲಿ ಮುಗಿಸಬೇಕು. ಇಷ್ಟರಲ್ಲಿ ನೀವು ಏಷ್ಟಾದರೂ ಮಾತನಾಡಿ.

ಶ್ರೀ ಎ. ರಾಮದಾಸ್:- ಉನ್ನತ ಶಿಕ್ಷಣದ ಬಗ್ಗೆ ವಿಶೇಷವಾಗಿ ಈ ರಾಜ್ಯದಲ್ಲಿ ಕಳೆದ 10 ವರ್ಷಗಳ ಕಾಲದಲ್ಲಿ ಮೆಡಿಕಲ್ ಎಜುಕೇಷನ್‌ನಲ್ಲಿ ಆಗಿರುವಂಥ ದೊಡ್ಡ ಅಕ್ರಮಗಳಿಗೆ ತಮ್ಮ ಪಕ್ಷ ವಿರೋಧಪಕ್ಷದ ಸ್ಥಾನದಲ್ಲಿದ್ದಾಗಲೂ ಕೂಡ ಧ್ವನಿಯನ್ನು ಕೂಡಿಸಿ, ಸರ್ಕಾರದ ವಿರುದ್ಧ ಮಾಡಿದ ದೊಡ್ಡ ಹೋರಾಟದಲ್ಲಿ ಎಲ್ಲರೂ ಭಾಗಿಯಾಗಿದ್ದಿರಿ. ನಾನು ನಿರೀಕ್ಷಣೆ ಮಾಡಿದ್ದೆ; ಈ ರಾಜ್ಯದಲ್ಲಿ ತಾವು ಮುಖ್ಯಮಂತ್ರಿಗಳಾಗಿ ಬಂದಾಗ ತಾವು ಕರ್ನಾಟಕದಲ್ಲಿ ಹೊರದೇಶದಿಂದ ಬಂದಂಥ ಒಬ್ಬ ಮೇಧಾವಿ ಹೇಳಿದಂಥ ಮಾತು. Karnataka is producing more Doctors than good Doctors.

ಇದನ್ನು ಕಳೆದ ವಾರ ನಾನು ಇಲ್ಲಿ ಕೋಟ್ ಮಾಡಿದ್ದೆ. ಅಂದರೆ, ಈ ರಾಜ್ಯದಲ್ಲಿ ಮೆಡಿಕಲ್ ಎಜುಕೇಷನ್ ಯಾವರೀತಿ ಹಾಳಾಗುತ್ತಿದೆ, ಅದರ ಸ್ಥಿತಿ ಏನಾಗುತ್ತಿದೆ ಎಂಬುದರ ಬಗ್ಗೆ ಬಹಳ ಚರ್ಚೆಯಾಗಿತ್ತು. ನಿಮ್ಮ ಸರ್ಕಾರದಿಂದ ಬಹಳ ನಿರೀಕ್ಷೆಯನ್ನು ಮಾಡಿದ್ದೆವು. ಎಜುಕೇಷನ್ ಪಾಲಿಸಿಯನ್ನು ನೀವು ಇದರಲ್ಲಿ ಕೊಡುತ್ತೀರಿ ಎಂಬ ನಿರೀಕ್ಷೆ ನಮ್ಮಲ್ಲಿ ಇತ್ತು. ಅದು ಆಗಿಲ್ಲ. ಮಾನ್ಯ ಡಿ.ಆರ್. ಪಾಟೀಲರು ಇಲ್ಲಿದ್ದಾರೆಂದು ನಾನು ಅಂದುಕೊಂಡಿದ್ದೇನೆ. ಪ್ರತಿ ಕ್ಷಣವೂ ಕೂಡ ಡಿ.ಆರ್. ಪಾಟೀಲರು, ಇಲ್ಲಿ ಆಗುತ್ತಿರುವಂಥ ಅಸಮತೋಲನದ ಬಗ್ಗೆ ಹೆಚ್ಚು ವಿಚಾರವನ್ನು ಮಾತನಾಡಿದ್ದರು. ಅವರು ಆಡಳಿತ ಪಕ್ಷಕ್ಕೆ ಬಂದ ಮೇಲೆ, ಅವರು ಇದಕ್ಕೆ ಹೆಚ್ಚು ಒತ್ತನ್ನು ನೀಡದೇ ಇರುವುದು ನನಗೆ ಬಹಳ ನೋವಾಗಿದೆ. ಈ ದೃಷ್ಟಿಯಲ್ಲಿ ಕಳೆದ ನೂರು ದಿವಸಗಳಿಂದ ಬಿಜಾಪುರದಲ್ಲಿ 125 ಶಾಲೆಗಳು, ಅಲ್ಲಿರುವಂಥ ಸಾವಿರಾರು ಜನ ಶಿಕ್ಷಕರು ಬೀದಿ ಪಾಲಾಗಿದ್ದಾರೆ. ತಮ್ಮೆಲ್ಲರಿಗೂ ಸಹ ಕೂಡ ಮನವಿ ಬಂದಿದೆ. ಅಲ್ಲಿ ಯಾವುದೇ ಅಕ್ರಮಗಳಾಗಿರಲಿ ಅಥವಾ ಏನೇ ಆಗಿರಲಿ, ಆ 125 ಶಾಲೆಗಳಲ್ಲಿರುವಂಥ ಮಕ್ಕಳ ಸ್ಥಿತಿ, ಶಾಲೆಯನ್ನು ಮುಚ್ಚಿ ಅವರು ಬೀದಿಯಲ್ಲಿರುವಂಥ ವ್ಯವಸ್ಥೆ ಇದೆ. ಇದರ ಬಗ್ಗೆ ಸರ್ಕಾರದಿಂದ ಇವತ್ತಿನವರೆಗೂ ಕೂಡ ಯಾವುದೇ ಕ್ರಮ ಆಗಿಲ್ಲ. ಬಹಳ ಅನುಭವ ಇರುವಂಥ ಶಿಕ್ಷಣ ಮಂತ್ರಿಗಳು ಇದ್ದಾರೆ. ಅವರಿಂದಲೂ ಕೂಡ ಯಾವುದೇ ಪ್ರತಿಕ್ರಿಯೆ ಬರದೇ, ಆ ಮಕ್ಕಳ ಭವಿಷ್ಯದ ಬಗ್ಗೆ ಚಿಂತನೆ ಮಾಡದೇ ಇರುವುದನ್ನು ನೋಡಿದಾಗ, ಏಕೆ ಇದರ ಬಗ್ಗೆ ಚಿಂತನೆ ಮಾಡುತ್ತಾ ಇಲ್ಲವೆಂಬ ನೋವು ನಮಗಾಗಿದೆ. ಹಾಗಾಗಿ ಸಾವಿರಾರು ಜನ ಶಿಕ್ಷಕರು ಇವತ್ತು ಬೀದಿಯಲ್ಲಿದ್ದಾರೆ. ಅವರ ಸೇವೆಯನ್ನು ಬೇರೆ ಕಡೆಗಾದರೂ ಉಪಯೋಗಿಸಿ ಆ ಮಕ್ಕಳಿಗೆ ಪರ್ಯಾಯ ವ್ಯವಸ್ಥೆಯನ್ನೂ ಮಾಡದೇ ಒಂದು ತಿಂಗಳಿಂದ ಹೀಗೆಯೇ ಇರುವುದನ್ನು ನೋಡಿದಾಗ ಬಹಳ ನೋವನ್ನು ತರುವಂಥ ವಿಚಾರ ಎಂಬುದನ್ನು ತಮಗೆ ಹೇಳುತ್ತೇನೆ. ಕೊನೆಯ ಒಂದು ಮಾತು; ತಾವು ಆಡಳಿತ ವ್ಯವಸ್ಥೆಯಲ್ಲಿ ಅಧಿಕಾರದ ವಿಕೇಂದ್ರೀಕರಣ, ಆಡಳಿತದಲ್ಲಿ ಸರಳೀಕರಣ ಮತ್ತು ವ್ಯವಹಾರದಲ್ಲಿ ಪಾರದರ್ಶಕತೆ ಈ ಮೂರು ಪ್ರಮುಖವಾದಂಥ ವಿಚಾರಗಳನ್ನು ತಾವು ಕೊಟ್ಟಿದ್ದೀರಿ. ಬಹಳ ಶ್ಲಾಘನೀಯವಾದ ವಿಚಾರ ಮತ್ತು ಬಹಳ ಸ್ವಾಗತ ಮಾಡುವಂಥ ವಿಚಾರ. ಆದರೆ, ಇದು ಅಷ್ಟೇ ಕಷ್ಟಸಾಧ್ಯವೆಂದು ನನಗನಿಸುತ್ತದೆ. ಕಾರಣ ತಾವು ಅಧಿಕಾರದ ವಿಕೇಂದ್ರೀಕರಣದ ಬಗ್ಗೆ ಮಾತನಾಡುತ್ತಾ, ತಮ್ಮಲ್ಲಿರುವ ಕಾಳಜಿಯನ್ನು ನಾವು ಒಪ್ಪಿಕೊಳ್ಳಬಹುದಾದರೂ ಕೂಡ ಕರ್ನಾಟಕದ ಅಧಿಕಾರ ಇನ್ನೂ ಕರ್ನಾಟಕಕ್ಕೆ ಬಂದಿಲ್ಲ. ಇನ್ನೂ ಕೂಡ ನಂ.10, ಜನಪದ ರಸ್ತೆ, ದೆಹಲಿ-ಇಲ್ಲಿಯೇ ಉಳಿದುಕೊಂಡಿದೆಯಲ್ಲ ಎಂಬ ನೋವು ಬಂದಾಗ ನಮಗನಿಸುತ್ತೆ; ರಾಜ್ಯದ ಆಡಳಿತ ದೆಹಲಿಯಿಂದ ಕರ್ನಾಟಕಕ್ಕೆ ಬಂದರೆ, ಕರ್ನಾಟಕದಿದ ಹಳ್ಳಿಗೆ ಕಳುಹಿಸಿಕೊಡುವ ವ್ಯವಸ್ಥೆ ಆಗುತ್ತೆ. ಅದರ ಬಗ್ಗೆ ಹೆಚ್ಚಿನ ನೀತಿ ನಿಯಮ ನಿಮ್ಮ ಪಕ್ಷದ ವ್ಯವಸ್ಥೆಯೊಳಗಡೆಯಾದರೆ ಆಡಳಿತಕ್ಕೆ ಚುರುಕು ಬರುತ್ತೆ ಎಂದು

ನನಗನಿಸುತ್ತದೆ. ಆ ನಂಬರ್ ಹತ್ತರಿಂದ ರಾಜ್ಯಕ್ಕೆ ಬರುವಂಥ ಕೆಲಸವನ್ನು ಮಾನ್ಯ ಮುಖ್ಯಮಂತ್ರಿಗಳು ಮಾಡುತ್ತಾರೆಂದು ನಾನು ಅಂದುಕೊಂಡಿದ್ದೇವೆ. ಕಾರಣವೇನೆಂದರೆ, ತಾವು ವಿಕೇಂದ್ರೀಕರಣದ ಬಗ್ಗೆ ಹೆಚ್ಚು ಒತ್ತು ಕೊಟ್ಟು ಮಾತನಾಡುತ್ತಿದ್ದೀರಿ. ಹಾಗಾಗಿ ದೆಹಲಿಯಿಂದ ರಾಜ್ಯಕ್ಕೆ ತರುವಂಥ ಕೆಲಸವನ್ನು ತಾವು ಮಾಡುತ್ತೀರಿ ಎಂಬ ನಿರೀಕ್ಷೆಯನ್ನು ನಾನು ಇಟ್ಟುಕೊಂಡಿದ್ದೇನೆ. ಹಾಗೆಯೇ ಆಡಳಿತದ ಪಾರದರ್ಶಕತೆಯ ಬಗ್ಗೆ ವಿಚಾರವನ್ನು ಬಹಳ ಹೇಳಿದ್ದೀರಿ. ಒಂದು ಹೆಜ್ಜೆಯನ್ನು ತಾವು ಸರಿಯಾಗಿ ಇಟ್ಟಿದ್ದೀರಿ. ತಾವು ಬಂದ ತಕ್ಷಣದಲ್ಲಿಯೇ ಅಧಿಕಾರಿಗಳನ್ನು ಯಾರನ್ನು ನೇಮಿಸಿದ್ದೀರಿ, ಅವರು ಪ್ರಾಮಾಣಿಕ ಅಧಿಕಾರಿಗಳು; ಅದರ ಬಗ್ಗೆ ನಮ್ಮ ಮೆಚ್ಚುಗೆ ಇದೆ. ಒಂದು ವಿಚಾರದಲ್ಲಿ ಮಾತ್ರ ಪ್ರಾಮಾಣಿಕತೆಗೆ ಅನುಗ್ರಹ ನೀಡಲಲ್ಲವಲ್ಲ ಎಂಬ ಯಕ್ಷಪ್ರಶ್ನೆ ನನ್ನನ್ನು ಕಾಡುತ್ತಾ ಇದೆ. ಅದೇನೆಂದರೆ, ನಿಮ್ಮ ಆ ಅನುಗ್ರಹವನ್ನು ಸರ್ಕಾರಿ ವೆಚ್ಚದಲ್ಲಿ ಏನು ರಿಪೇರಿ ಮಾಡುತ್ತಿದ್ದೀರಿ, ಅದಕ್ಕೆ ಅನುಗ್ರಹ ಮಾಡಿ ಸಾರ್ವಜನಿಕರೆಲ್ಲರೂ ಕೂಡ ನೋಡುವಂಥ ವ್ಯವಸ್ಥೆ ಮಾಡಿದ್ದರೆ ಒಳ್ಳೆಯದಿತ್ತು. ರಾಜ್ಯದ ಜನತೆಯ ಮನಸ್ಸಿನಲ್ಲಿ ಏನು ಬಂದಿದೆ ಎಂದರೆ, ಇಲ್ಲಿ ಏನೋ ನಡೆಯುತ್ತಾ ಇದೆ, ಏನೋ ನಡೆಯುತ್ತಾ ಇದೆ, ಅದು ಏನೂ ಇಲ್ಲವೆಂದೂ ತೆರೆ ಹಾಡಲಿಕ್ಕೆ ಆಗುತ್ತಾ ಇತ್ತು. ಪಾರದರ್ಶಕ ಅಲ್ಲಿಂದ ಪ್ರಾರಂಭವಾದರೆ ಜನಸಾಮಾನ್ಯನ ಮನಸ್ಸಿನಲ್ಲೂ ಹಾಗೆ ಅನ್ನಿಸುತ್ತೆ, ಅಧಿಕಾರಿಗಳ ಮನಸ್ಸಿನಲ್ಲೂ ಅನಿಸುತ್ತೆ. ಮುಖ್ಯಮಂತ್ರಿಗಳ ರೀತಿಯಲ್ಲಿ ನಾವೂ ಕೂಡ ಪಾರದರ್ಶಕರಾಗಿರಬೇಕು ಎಂದು. ಈ ವ್ಯವಸ್ಥೆಯನ್ನು ನಾವು ಕಾಣುತ್ತೇವೆಂದು ಅಂದುಕೊಂಡಿದ್ದೇವೆ. ಆದರೆ, ಏಕೆ ಹಾಗೆ ಆಗಲಿಲ್ಲವೆಂಬುದು ಇನ್ನೂ ಯಕ್ಷಪ್ರಶ್ನೆಯಾಗಿ ನಮ್ಮಲ್ಲಿ ಉಳಿದಿದೆ. ಆದರೆ ಒಂದು ವಿಚಾರವನ್ನು ನಾನೊಬ್ಬ ಚಿಕ್ಕವನಾಗಿ ಹೇಳುತ್ತಿದ್ದೇನೆಂದು ತಪ್ಪು ತಿಳಿದುಕೊಳ್ಳಬಾರದು. ಪಾರದರ್ಶಕತೆಯ ಸರ್ಕಾರವನ್ನು ಕೊಡುತ್ತೇವೆಂದು ಹೇಳಿದಂಥ ಕಳೆದ ಬಾರಿ 1989-90ರಲ್ಲಿ ಮಾನ್ಯ ವೀರೇಂದ್ರಪಾಟೀಲರು ಅಧಿಕಾರಕ್ಕೆ ಬಂದಾಗ ಮನಸ್ಸಿನಲ್ಲಿ ಇಂಥಾದ್ದೇ ಆಸೆ ಆಕಾಂಕ್ಷೆಗಳನ್ನು ಇಟ್ಟುಕೊಂಡು ಆರ್ಥಿಕ ವ್ಯವಸ್ಥೆಯನ್ನು ಸರಿಯಾದಂಥ ದಾರಿಯಲ್ಲಿ ತರುವುದಕ್ಕೆ ಪ್ರಯತ್ನ ಮಾಡಿದರು. ಆಡಳಿತದಲ್ಲಿ ಪಾರದರ್ಶಕತೆಯನ್ನು ಕೊಡುವ ಪ್ರಯತ್ನ ಮಾಡಿದರು. ಆದರೆ, ಪಾರದರ್ಶಕತೆಯ ಆಡಳಿತವನ್ನು ಕೊಡುವ ಯಜ್ಞದಲ್ಲಿ, ಯಜ್ಞ ಪಶುವಾಗಿ ಅವರು ತಮ್ಮನ್ನು ತಾವೇ ಬಲಿ ಕೊಡಬೇಕಾದಂಥ ಒಂದು ಪ್ರಸಂಗ ಬಂತು. ಅಂತಹ ವಿಚಾರಗಳು ಕೂಡ ಬರಬಹುದು. ಆದರೂ ಎಷ್ಟು ದಿವಸ ಅಧಿಕಾರದಲ್ಲಿದ್ದರು ಎಂಬುದಕ್ಕಿಂತ, ನೀವು ಮನಸ್ಸಿನಲ್ಲಿ ಏನು ಭಾವನೆಗಳನ್ನು ಇಟ್ಟಿದ್ದೀರಿ ಅದಕ್ಕೆ ತಕ್ಕಹಾಗೆ ಆಡಳಿತದ ವ್ಯವಸ್ಥೆಯಲ್ಲಿ ಆ ಪಾರದರ್ಶಕತೆಯನ್ನು ನೀವು ನಿರೀಕ್ಷಣೆಯನ್ನು ಮಾಡಬಹುದಾಗಿದೆ, ಎನ್ನುವಂಥ ವಿಚಾರವನ್ನು ಹೇಳುತ್ತೇನೆ. ಕೊನೆಯ ಒಂದು ಮಾತು ಗೌಪ್ಯತೆ; ತಾವು ಒಂದು ಒಳ್ಳೆಯ ವಿಚಾರವನ್ನು ಹೇಳಿದ್ದೀರಿ, ಆಡಳಿತದಲ್ಲಿ ಸರಳೀಕರಣವನ್ನು ತರುತ್ತೇನೆ ಎಂದು. ದಯಮಾಡಿ, ತಮ್ಮಿಂದ ನಾವು ನಿರೀಕ್ಷಣೆ ಮಾಡುತ್ತಿದ್ದೇನೆ. ಸೀಕ್ರೆಟ್

ಡಾಕ್ಯುಮೆಂಟ್ಸ್ ಏನಿದೆ ಅದನ್ನು ಬಿಟ್ಟು, ಉಳಿದ ಯಾವುದೇ ಸರ್ಕಾರಿ ಡಾಕ್ಯುಮೆಂಟ್ಸ್ ಆದರೂ ಕೂಡ ನಿರ್ದಿಷ್ಟವಾದಂತಹ ಹಣವನ್ನು ಕೊಟ್ಟು ಜನಸಾಮಾನ್ಯರು ಪಡೆದು, ಆ ವ್ಯವಹಾರದಲ್ಲಿ ಏನಾಗಿದೆ ಎನ್ನುವುದನ್ನು ನೋಡುವಂಥಹ ಪಾರದರ್ಶಕತೆಯನ್ನು ತಾವು ತಂದಿದ್ದೇ ಆದರೆ, ಆಡಳಿತದಲ್ಲಿರುವಂಥ ವ್ಯವಸ್ಥೆಯಲ್ಲಿ ಬದಲಾವಣೆಯನ್ನು ಮಾಡಬಹುದು. ಇನ್ನೊಂದು ನಾವು ತಮ್ಮಿಂದ ನಿರೀಕ್ಷಣೆಯನ್ನು ಮಾಡಬಹುದು. ಮೇಲ್ಭಾಗದಿಂದ ಅಂದರೆ ವಿಧಾನ ಸೌಧದ ಮೂರನೇ ಮಹಡಿಯಿಂದ ಕೆಳಗಡೆ ಇರುವಂಥ ಭ್ರಷ್ಟಾಚಾರದ ವ್ಯವಸ್ಥೆ ಈ ಪಾರದರ್ಶಕತೆಯನ್ನು ತರುವ ಮುಖಾಂತರದಲ್ಲಿ ಯಾವುದೇ ಒಬ್ಬ ಜನಸಾಮಾನ್ಯ ಸರ್ಕಾರದ ಡಾಕ್ಯುಮೆಂಟ್ಸ್‌ನ್ನು ಹಣ ಕೊಟ್ಟು ಪಡೆಯಬಹುದು ಎನ್ನುವುದಾದರೆ ಆಗ ಯಾವುದೇ ಅಧಿಕಾರಿ ಇರಬಹುದು, ಯಾವುದೇ ಮಂತ್ರಿ ಇರಬಹುದು ಹಣವನ್ನು ಕಟ್ಟಿ ತನ್ನ ಡಾಕ್ಯುಮೆಂಟನ್ನು ಪಡೆಯಬಹುದು ಎಂದಾಗ, ಆಡಳಿತದಲ್ಲಿಯ ಭ್ರಷ್ಟಾಚಾರದ ವಿಚಾರದಲ್ಲಿ ಹೆದರಿಕೆ ತರುವಂಥ ಒಂದು ವಾತಾವರಣ ನಿರ್ಮಾಣವಾಗುತ್ತೆ. ಆ ನಕಲನ್ನು ಪಡೆಯುವ ಹಕ್ಕನ್ನು ಜನಸಾಮಾನ್ಯರಿಗೆ ಕೊಡಿ. ಜನ ಇವತ್ತು ನಿಮಗೇನು ಅಧಿಕಾರವನ್ನು ಕೊಟ್ಟಿದ್ದಾರೆ, ಅವರಿಗೆ ಕೊಡುವಂಥ ಕೆಲಸವನ್ನು ತಾವು ಮಾಡುತ್ತೀರಾ ಎಂಬ ವಿಶ್ವಾಸವನ್ನು ಇಟ್ಟುಕೊಂಡಿದ್ದೇನೆ. ಇವೆಲ್ಲವನ್ನೂ ತಮ್ಮಿಂದ ನಾನು ನಿರೀಕ್ಷಣೆ ಮಾಡಿದ್ದೆ. ಅಂದರೆ, ಆಡಳಿತ ದಿಕ್ಸೂಚಿಯನ್ನು ತಮ್ಮ ಭಾಷಣದಲ್ಲಿ ಏನು ನಿರೀಕ್ಷೆ ಮಾಡಿದ್ದೆ ಅದು ಮುಂದಿನ ದಿನಗಳಲ್ಲಿ ದಿಕ್ಸೂಚಿ ಭಾಷಣದಲ್ಲಿ ಇಲ್ಲದೇ ಹೋದರೂ ಕೂಡ ತಮ್ಮಿಂದ ಕಾಲಬದ್ಧತೆಯಾದಂತಹ ಹಾಗೂ ವಿಶೇಷವಾಗಿ ಕಾರ್ಯಬದ್ಧತೆಯಾದಂತಹ ಯೋಜನೆಯನ್ನು ತರುವ ಬಗ್ಗೆ ಯೋಚನೆಯನ್ನು ಮಾಡಿ. ಅದರ ಜೊತೆಯಲ್ಲಿ ಇಷ್ಟು ಜನ ಮಂತ್ರಿಗಳಿದ್ದಾರೆ, ಒಬ್ಬ ಮಂತ್ರಿಗೆ ತಮ್ಮ ಕಾರ್ಯ ಯೋಜನೆಯನ್ನು ಅನುಷ್ಠಾನಕ್ಕೆ ತರುವಂಥ ಖಾತೆಯನ್ನೇ ಕೊಟ್ಟು ಈ ರಾಜ್ಯದ ಅಭಿವೃದ್ಧಿಯ ಬಗ್ಗೆ ಚಿಂತನೆಯನ್ನು ಮಾಡುವಂಥ ಕೆಲಸವನ್ನು ತಾವು ಮಾಡುತ್ತೀರಿ ಎಂಬ ನಿರೀಕ್ಷೆ ನಮಗಿದೆ. ಇವೆಲ್ಲವನ್ನೂ ಕೂಡ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ನಿರೀಕ್ಷೆ ಮಾಡಿದಂಥ ನಮಗೆ ಕೇವಲ ಅಜ್ಜನ ಇಷ್ಟವನ್ನು ಮೊಮ್ಮಗನ ಕೈಲಿ ಹೇಳಿಸಿದಹಾಗೆ 1989 ರಿಂದ 1994ರ ವರೆಗೆ ಮಾನ್ಯ ರಾಜ್ಯಪಾಲರು ಮಾಡಿದ ಭಾಷಣದ ಒಂದು ಪ್ರತಿಯನ್ನು ಹೊಸದಾಗಿ ಮಾನ್ಯ ರಾಜ್ಯಪಾಲರ ಕೈಲಿ ಹೇಳಿಸಿರುವುದು ಮನಸ್ಸಿಗೆ ನೋವುಂಟು ಮಾಡುವಂಥ ವಿಚಾರಗಳಾಗಿವೆ. ಸನ್ಮಾನ್ಯ ಅಧ್ಯಕ್ಷರು ಇಷ್ಟು ವಿಚಾರಗಳನ್ನು ಹೇಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ನಾನು ಧನ್ಯವಾದಗಳನ್ನರ್ಪಿಸುತ್ತೇನೆ.

ಶ್ರೀ ಸಯದ್ ಖಾದರ್ ಭಾಷಾ (ಶಿಗ್ಗಾಂವ್):- ಸನ್ಮಾನ್ಯ ಸಭಾಧ್ಯಕ್ಷರೇ, ಮೊದಲನೆಯದಾಗಿ ನನ್ನ ಮತಕ್ಷೇತ್ರದ ಮತದಾರರಿಗೆ ಮತ್ತು ಚುನಾವಣಾ ಅಧಿಕಾರಿಗಳಿಗೆ ನನ್ನ ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇನೆ. ನಮ್ಮ ರಾಜ್ಯದಲ್ಲಿ ಅನೇಕ ರೀತಿಯ ಸಂಪನ್ಮೂಲಗಳು ಇವೆ. ಖನಿಜ ಸಂಪತ್ತು, ನೀರಿನ ಸಂಪತ್ತು ಮತ್ತು ಮಾನವ ಸಂಪತ್ತುಗಳು

ಇವುಗಳಲ್ಲಿ ಪ್ರಮುಖವಾಗಿವೆ. ಆದರೆ ಈ ಸಂಪತ್ತುಗಳ ಬಗ್ಗೆ ಸರಕಾರದವರು ಅಷ್ಟು ಗಮನವನ್ನು ನೀಡಿರುವುದಿಲ್ಲ. ಇದರಲ್ಲಿ ಮಾನವ ಸಂಪತ್ತು ಅತೀ ಮುಖ್ಯವಾದುದು. ಈ ಮಾನವ ಸಂಪತ್ತನ್ನು ಸರಕಾರದವರು ಯಾವ ರೀತಿಯಾಗಿ ಉಪಯೋಗ ಮಾಡಬೇಕು, ಎಂಬಿತ್ಯಾದಿ ವಿಷಯಗಳ ಬಗ್ಗೆ ಇದರಲ್ಲಿ ಎಲ್ಲಿಯೂ, ಏನೂ ಹೇಳಿರುವುದಿಲ್ಲ. ಮಾನವ ಸಂಪತ್ತು ಕೇವಲ 30ರಷ್ಟು ಮಾತ್ರ ಉಪಯೋಗವಾಗಿದೆ. ಉಳಿದ 70 ಭಾಗದಷ್ಟು ಇನ್ನೂ ಹಾಗೆಯೇ ಉಳಿದಿದೆ.ಈ ಮಾನವ ಸಂಪತ್ತು ಏನಿದೆ, ಅದನ್ನು ಸರಕಾರದವರು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಂಡರೆ ದೇಶದಲ್ಲಿ ಬಡತನ ಎಂಬುದೇ ಇರುವುದಿಲ್ಲ. ಇದರ ಬಗ್ಗೆ ಸರಕಾರದವರು ತೀವ್ರವಾದ ಗಮನವನ್ನು ಹರಿಸಬೇಕು. ಇದರಲ್ಲಿ ಗ್ರಾಮಾಂತರ ಪ್ರದೇಶದ ಜನರಿಗೆ ಯಾವ ರೀತಿಯಲ್ಲಿ ಉದ್ಯೋಗಗಳನ್ನು ಕಲ್ಪಿಸಬೇಕೆಂಬುದನ್ನು ಯೋಚಿಸಬೇಕು. ಮಾನವ ಸಂಪನ್ಮೂಲಗಳನ್ನು ಯಾವ ರೀತಿಯಲ್ಲಿ ಬಳಸಿಕೊಳ್ಳಬೇಕೆಂಬ ಬಗ್ಗೆ ಯೋಜನೆಯನ್ನು ತಯಾರಿಸಬೇಕು. ಹಾಗೆಯೇ ಗೃಹ ಕೈಗಾರಿಕೆಗಳಿಗೆ ಯಾವ ರೀತಿಯಲ್ಲಿ ಹೆಚ್ಚಿನ ಪ್ರೋತ್ಸಾಹವನ್ನು ಕೊಡಬೇಕು; ಗೃಹ ಕೈಗಾರಿಕೆಗಳಾದ ನೇಯ್ಗೆ, ಕುಂಬಾರಿಕೆ, ಬೆತ್ತದ ಕೆಲಸ ಮುಂತಾಗಿ ಯಾವುದೇ ಗುಡಿ ಕೈಗಾರಿಕೆಗಳಿಗೆ ಈ ತನಕವೂ ಸೂಕ್ತ ಮನ್ನಣೆ ಕೊಡದೇ ಇರುವುದರಿಂದ ಗ್ರಾಮಾಂತರದಲ್ಲಿನ ಈ ಕೈಗಾರಿಕೆಗಳನ್ನು ಅವಲಂಬಿಸಿಕೊಂಡಿರುವ ಜನರು ಆರ್ಥಿಕ ದುಸ್ಥಿತಿಯಲ್ಲಿದ್ದಾರೆ. ಈಗಲೂ ಕೂಡ ಗುಡಿ ಕೈಗಾರಿಕೆಗಳ ಬಗ್ಗೆ ಯಾವ ರೀತಿಯ ಪ್ರೋತ್ಸಾಹದಾಯಕ ಕ್ರಮಗಳನ್ನು ತೆಗೆದುಕೊಳ್ಳುತ್ತಾರೆ ಎಂಬುದನ್ನು ಸರಕಾರದವರು ತಿಳಿಸಿರುವುದಿಲ್ಲ. ರೈತರು ನಮ್ಮ ರಾಷ್ಟ್ರದ ಬೆನ್ನೆಲುಬು ಇದ್ದಹಾಗೆ ಇದ್ದಾರೆ. ನನಗೆ ತಿಳಿದಿರುವ ಹಾಗೆ ಮಾನ್ಯ ಲಾಲ್‌ಬಹದ್ದೂರ್ ಶಾಸ್ತ್ರೀಜಿಯವರು ಹೇಳಿರುವ "ಜೈ ಜವಾನ್, ಜೈ ಕಿಸಾನ್"- ಎಂಬ ಉಕ್ತಿಯು ಸಮರ್ಥನೀಯವಾಗಿದೆ. ನಮ್ಮ ಸರಕಾರಗಳು ಇಲ್ಲಿಯವರೆಗೂ ರೈತರ ಜೀವನವನ್ನು ಹಿಂಡುತ್ತಾ ಬಂದಿದ್ದಾರೆ. ಅವರಿಗೆ ಯಾವುದೇ ಸೂಕ್ತ ಸೌಲಭ್ಯಗಳನ್ನು ಯಾವ ಸರಕಾರಗಳೂ ಕೊಟ್ಟಿರುವುದಿಲ್ಲ. ರೈತರು ಕಷ್ಟಪಟ್ಟು ದುಡಿದು, ಫಸಲನ್ನು ಮಾರುಕಟ್ಟೆಗೆ ತೆಗೆದುಕೊಂಡು ಹೋದರೆ ತಕ್ಕ ಬೆಂಬಲ ಬೆಲೆ ಕೊಡಲು ಆಗುತ್ತಿಲ್ಲ. ಬೆಳೆದ ಬೆಳೆಗಳನ್ನು ಮಾರುಕಟ್ಟೆಗೆ ಕೊಂಡೊಯ್ಯಲು ಸರಿಯಾಗಿ ಮಾರ್ಗಗಳು ಕೂಡ ಇಲ್ಲ. ಇಂಥ ಒಂದು ಅವ್ಯವಸ್ಥೆಯ ಪರಿಸ್ಥಿತಿಯಲ್ಲಿ ರೈತರು ಮತ್ತಷ್ಟು ಹೀನಾಯ ಸ್ಥಿತಿಗೆ ತಲುಪಿದ್ದಾರೆ. ಹಾಗೆಯೇ ರೈತರಿಗೆ ಸಿಗುತ್ತಿರುವ ಬೀಜ, ರಸಗೊಬ್ಬರ ಮುಂತಾದವುಗಳನ್ನು ಹೆಚ್ಚಿನ ದರದಲ್ಲಿ ಮಾರಾಟ ಮಾಡಲಾಗುತ್ತಿದೆ. ಇದರ ಬಗ್ಗೆ ಸರಕಾರದವರು ಎಷ್ಟು ಸಬ್ಸಿಡಿ ಕೊಡಬಯಸಿದ್ದಾರೆ ಎಂಬ ಬಗ್ಗೆಯೂ ಏನನ್ನೂ ಹೇಳಿರುವುದಿಲ್ಲ. ಇದರಿಂದಾಗಿ ರೈತರು ಬಹಳ ತೊಂದರೆಗೊಳಗಾಗಿದ್ದಾರೆ. ಅದೇ ರೀತಿಯಲ್ಲಿ ಆಗಾಗ ರೈತರು ಅತಿವೃಷ್ಟಿ, ಅನಾವೃಷ್ಟಿ, ಬರಗಾಲ ಮುಂತಾದ ವಿಕೋಪಗಳಿಗೂ ತುತ್ತಾಗುತ್ತಾ ಬಂದಿರುತ್ತಾರೆ. ಇಂಥ ದುಸ್ಥಿತಿಯಲ್ಲಿರುವ ರೈತರಿಗೆ ಬೆಳೆ ಹಾನಿಯನ್ನು ತುಂಬಿಸಿಕೊಡಲು ಸರಕಾರದವರಿಂದ

ಸಾಧ್ಯವಾಗುತ್ತಿಲ್ಲ. ಇದನ್ನು ತಪ್ಪಿಸಿ ರೈತರನ್ನು ರಕ್ಷಿಸಲು ಹೆಚ್ಚಿನ ಪ್ರಮಾಣದಲ್ಲಿ ವಿಮಾ ಪಾಲಿಸಿಯನ್ನು ಮಾಡಬೇಕು. ನಾನು ಈ ಸದನಕ್ಕೆ ಹೊಸದಾಗಿ ಬಂದಿರುತ್ತೇನೆ. ನನ್ನ ಮಾತುಗಳಲ್ಲಿ ತಪ್ಪಾಗಿದ್ದರೆ ಕ್ಷಮಿಸಬೇಕು. ನನ್ನ ಮತ ಕ್ಷೇತ್ರವು ಒಂದು ಪುಣ್ಯಕ್ಷೇತ್ರ ಶಿಗ್ಗಾಂವ್‌ಸವಣೂರು ಮತ ಕ್ಷೇತ್ರವು ಒಂದು ಪುಣ್ಯಭೂಮಿಯಾಗಿದೆ. ಇಲ್ಲಿ ಹಲವಾರು ಶರಣರು ವಾಸಿಸಿ ಪ್ರಸಿದ್ಧರಾಗಿದ್ದಾರೆ. ಇದೊಂದು ಹಿಂದೂ-ಮುಸಲ್ಮಾರ ಭಾವೈಕ್ಯತೆಯ ಕ್ಷೇತ್ರವಾಗಿದೆ. ಒಂದು ದಿಕ್ಕಿನಲ್ಲಿ ಕಾರಡಗಿಯ ಶ್ರೀ ವೀರಭದ್ರೇಶ್ವರ ದೇವಸ್ಥಾನವಿದೆ. ಇನ್ನೊಂದು ದಿಕ್ಕಿನಲ್ಲಿ ಕನಕದಾಸರ ಜನ್ಮಸ್ಥಳವಿದೆ. ಮತ್ತೊಂದು ಕಡೆ ಕರ್ನಾಟಕದ ಕಬೀರ ಸಂತ ಶಿಶುನಾಳ ಶರೀಫ ಸಾಹೇಬರು ಮತ್ತು ಗುರು ಗೋವಿಂದ ಭಟ್ಟರ ಗದ್ದುಗೆ ಇದೆ. ಬಂಕಾಪುರದಲ್ಲಿ ಹಜರತ್ ಸೈಯದ್ ಅಲ್ಲಾವುದ್ದೀನ್ ಷಾ ಖಾದ್ರಿಯವರ ದರ್ಗಾ ಇದೆ. ಮತ್ತೊಂದು ಕಡೆಯಲ್ಲಿ ಸಂತ ಶಿಶುನಾಳ ಷರೀಫ್ ಸಾಹೇಬರಿಗೆ ಆಶೀರ್ವಾದ ಮಾಡಿದಂಥ ಗುರು ಹಜರತ್-ಷಾ-ಖಾದ್ರಿ ಖಾದರ್‌ಲಿಂಗೋಲೆಯವರು ದರ್ಗಾ ಇದೆ. ಇಂಥ ಒಂದು ಪುಣ್ಯ ಕ್ಷೇತ್ರವನ್ನು ಅಭಿವೃದ್ಧಿ ಪಡಿಸುವ ಕೆಲಸಕಾರ್ಯಗಳಿಂದ ಬಹಳ ವಂಚಿತರನ್ನಾಗಿ ಮಾಡಿದ್ದೇವೆ. ದೇಶಕ್ಕೆ ಸ್ವಾತಂತ್ರ್ಯ ಬಂದು 50 ವರ್ಷಗಳಾದರೂ ಕೂಡ ಈ ಪುಣ್ಯ ಭೂಮಿಯು ತೀರಾ ಹಿಂದುಳಿದ ಕ್ಷೇತ್ರವಾಗಿಯೇ ಉಳಿದಿದೆ. ಈ ಕ್ಷೇತ್ರಕ್ಕೆ ಸರಕಾರದವರು ಹೆಚ್ಚಿನ ಗಮನಕೊಟ್ಟು ಅಭಿವೃದ್ಧಿಪಡಿಸಬೇಕು. ಮುಖ್ಯವಾಗಿ ನಮ್ಮ ಕ್ಷೇತ್ರದಲ್ಲಿ ಕುಡಿಯುವ ನೀರಿನ ಹಾಹಾಕಾರವಿದೆ. ನಮ್ಮಲ್ಲಿ ಹಾಕಿದ ಹಲವಾರು ಕೊಳವೆಬಾವಿಗಳು ಭತ್ತಿ ಹೋಗಿವೆ. ಆದುದರಿಂದ ಸವಣೂರು ಮೋತಿ ತಲಾಬ್‌ಗೆ ಹೆಚ್ಚಿನ ಗಮನವನ್ನು ಸರಕಾರದವರು ಕೊಟ್ಟು, ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಸಣ್ಣ ನೀರಾವರಿ ಸಚಿವರು ಆದ್ಯತೆಯನ್ನು ಕೊಟ್ಟು ನನ್ನ ಕ್ಷೇತ್ರಕ್ಕೆ ಕುಡಿಯುವ ನೀರನ್ನು ವ್ಯವಸ್ಥೆ ಮಾಡಿಕೊಟ್ಟರೆ ತಮ್ಮ ಋಣವನ್ನು ನನ್ನ ಕ್ಷೇತ್ರದ ಜನರು ಎಂದಿಗೂ ಮರೆಯುವುದಿಲ್ಲ.

ಇನ್ನೊಂದು ಮಹತ್ವದ ವಿಚಾರವೆಂದರೆ, ಸಿವಿಲ್ ಕೋರ್ಟ್‌ನ್ನು ಹಾನಗಲ್‌ನಲ್ಲಿ ಸ್ಥಾಪಿಸುತ್ತಿದ್ದಾರೆ ಎಂದು ತಿಳಿದು ಬರುತ್ತದೆ. ಹಾನಗಲ್‌ಗೆ ಸಿವಿಲ್ ಕೋರ್ಟ್‌ನ್ನು ಕೊಡುವುದರಲ್ಲಿ ನಮ್ಮ ಅಭ್ಯಂತರವಿಲ್ಲ. ನನ್ನ ಕ್ಷೇತ್ರ ಶಿಗ್ಗಾಂವ್‌ನ್ನು ಹಾನಗಲ್‌ಗೆ ಸೇರಿಸಬಾರದು. ನನ್ನ ಕ್ಷೇತ್ರವನ್ನು ಹಾವೇರಿಯಲ್ಲಿಯೇ ಮುಂದುವರಿಸಬೇಕೆಂದು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಅತೀ ಮುಖ್ಯವಾಗಿ ನನ್ನ ಕ್ಷೇತ್ರಕ್ಕೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿಕೊಟ್ಟು ಜನರ ಸದಿಚ್ಛೆಯನ್ನು ಪಡೆಯಬೇಕೆಂದು ಕೇಳಿಕೊಳ್ಳುತ್ತೇನೆ. ನನಗೆ ಇಲ್ಲಿ ಮಾತನಾಡಲು ಅವಕಾಶ ಮಾಡಿಕೊಟ್ಟ ಮಾನ್ಯ ಸಭಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ. "ಜೈಹಿಂದ್ ಜೈ ಕರ್ನಾಟಕ".

ಶ್ರೀ **ವಡ್ನಾಳ್ ರಾಜಣ್ಣ (ಚನ್ನಗಿರಿ)**:- ಸನ್ಮಾನ್ಯ ಸಭಾಧ್ಯಕ್ಷರೇ, ಮಾನ್ಯ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲೆ ಮಾತನಾಡುವುದಕ್ಕಿಂತ

ಮೊದಲು ನನ್ನ ಕ್ಷೇತ್ರದ ಪ್ರಜ್ಞಾವಂತ ಮತದಾರರು ಒಂದು ಐತಿಹಾಸಿಕವಾದಂಥ ನಿರ್ಣಯವನ್ನು ಕೊಟ್ಟಿದ್ದಾರೆ. ಆ ಪ್ರಜ್ಞಾವಂತ ಮತದಾರರಿಗೆ ನನ್ನ ವೈಯಕ್ತಿಕವಾದಂತಹ ಅಭಿನಂದನೆಗಳನ್ನು ಈ ಮೂಲಕ ಸಲ್ಲಿಸುವುದರ ಜೊತೆಗೆ ಕೆಲವು ವಿಷಯಗಳನ್ನು ಇಲ್ಲಿ ನಾನು ಪ್ರಸ್ತಾಪ ಮಾಡಬಯಸುತ್ತೇನೆ. ನಮ್ಮ ರಾಷ್ಟ್ರವು ಹಳ್ಳಿಗಾಡಿನ ರಾಷ್ಟ್ರ. ಇಂಥ ಒಂದು ಸಂದರ್ಭದಲ್ಲಿ ಈ ರಾಷ್ಟ್ರ ಏನಾದರೂ ಮುಂದೆ ಬರಬೇಕಾದರೆ, ಪ್ರಥಮವಾಗಿ ಹಳ್ಳಿಗಾಡು ಪ್ರದೇಶಗಳ ಅಭಿವೃದ್ಧಿಯಾಗಬೇಕು. ಆಗ ಮಾತ್ರ ಈ ರಾಷ್ಟ್ರ ಮುಂದೆ ಬರುವುದಕ್ಕೆ ಸಾಧ್ಯ. ನಾವು ಚುನಾವಣೆಗಳ ಸಂದರ್ಭದಲ್ಲಿ ಭಾಷಣವನ್ನು ಮಾಡುವಾಗ ಎಲ್ಲಿಲ್ಲದ ಆಶ್ವಾಸನೆಗಳನ್ನು ಹಳ್ಳಿಯ ಮುಗ್ಧ ಜನರಿಗೆ ಕೊಡುವಂಥ ಕೆಲಸವನ್ನು ಈ ತನಕ ಮಾಡಿಕೊಂಡು ಬಂದಿದ್ದೇವೆ. ನಮಗೆ ಸ್ವಾತಂತ್ರ್ಯ ಬಂದು 52 ವರ್ಷಗಳು ಕಳೆದು ಹೋಗಿವೆ. ಈ 52 ವರ್ಷಗಳಲ್ಲಿ ಮಾಡಬೇಕಾದಂಥ ಸಾಧನೆಗಳನ್ನು, ಸಾಮಾನ್ಯ ಜನರಿಗೆ ಕೊಡಬೇಕಾದಂಥ ನಲವತ್ತುಗಳನ್ನು ಕೊಡುವುದರಲ್ಲಿ ಸರಕಾರಗಳು ವಿಫಲವಾಗಿವೆ ಎಂದು ಹೇಳಿದರೆ ತಪ್ಪಾಗಲಾರದು. ಅಂಥ ತಪ್ಪನ್ನು ನಾವು ಪುನಃ ಪುನಃ ಮಾಡಬಾರದು. ಈಗ ಬಂದಿರತಕ್ಕಂಥ ಸರಕಾರ ಏನಿದೆ, ಅವರು ಜನರಿಗೆ ಕೊಟ್ಟಂಥ ಆಶ್ವಾಸನೆಗಳನ್ನು ಈಡೇರಿಸಬೇಕು. ಹಿಂದಿನ ಸರಕಾರಗಳು ಮಾಡಿದ ತಪ್ಪನ್ನು ಇವರುಗಳು ಪುನಃ ಮಾಡಬಾರದು. ಇವರು ಚುನಾವಣಾ ಪ್ರಣಾಳಿಕೆಯಲ್ಲಿ ಕೊಟ್ಟಂಥ ಆಶ್ವಾಸನೆಗಳನ್ನು ಜನರಿಗೆ ತಲುಪಿಸಬೇಕು ಎಂದು ಈ ಮೂಲಕ ಸರಕಾರದವರಲ್ಲಿ ಕೇಳಿಕೊಳ್ಳುತ್ತೇನೆ. ನಮ್ಮ ರಾಷ್ಟ್ರದಲ್ಲಿ ರೈತರನ್ನು ದೇಶದ ಬೆನ್ನೆಲುಬು ಎಂದು ಹೇಳುತ್ತಿದ್ದೇವೆ. ಆದರೆ ರೈತರ ಪರಿಸ್ಥಿತಿಯ ಇವೊತ್ತಿನ ದಿವಸ ಏನಾಗಿದೆ ಎಂಬುದನ್ನು ಯೋಚನೆ ಮಾಡಿದಾಗ ರೈತ ಎನ್ನುವವನು ಬಡತನ ಮತ್ತು ಸಾವಿನ ಮಧ್ಯೆ ಹೋರಾಡುತ್ತಾ ಇದ್ದಾನೆ. ಅವರು ಬೆಳೆದಿರತಕ್ಕಂಥ ಬೆಳೆಗಳಿಗೆ ಸೂಕ್ತವಾದ ಬೆಲೆಯು ಸಿಗುತ್ತಾ ಇಲ್ಲ. ರೈತರು ಬೆಳೆಯುವ ಮುಂಚೆ ಅವರಿಗೆ ಸರಬರಾಜು ಮಾಡುವಂಥ ಉತ್ತಮ ಬೀಜ ಮತ್ತು ಗುಣಮಟ್ಟವುಳ್ಳ ಗೊಬ್ಬರವು ಸರಿಯಾಗಿ ಮತ್ತು ಸೂಕ್ತ ಸಮಯದಲ್ಲಿ ರೈತರಿಗೆ ಸಿಗುತ್ತಾ ಇಲ್ಲ. ಇಂಥ ಕಷ್ಟ ಪರಿಸ್ಥಿತಿಯಲ್ಲಿ ರೈತರು ತುಂಬಾ ಸಂಕಷ್ಟವನ್ನು ಅನುಭವಿಸುತ್ತಿದ್ದಾರೆ. ಸಂಕಷ್ಟ ಪರಿಸ್ಥಿತಿಯಲ್ಲಿ ರೈತರು ನರಳತಕ್ಕಂಥ ಸ್ಥಿತಿಯಲ್ಲಿದ್ದಾರೆ. ರೈತರು ಮತ್ತು ಬಡಜನರ ಮೂಲಕ ರಾಷ್ಟ್ರದ ಪ್ರಗತಿಯನ್ನು ಸಾಧಿಸಬೇಕಾದರೆ ನಾವು ಮೊದಲು ರೈತರುಗಳನ್ನು ಉಳಿಸುವ ಎಲ್ಲಾ ಪ್ರಯತ್ನಗಳನ್ನು ಮಾಡಬೇಕು. ನಮ್ಮ ಆದ್ಯತೆಯು ರೈತರ ಅಭಿವೃದ್ಧಿಯ ಕುರಿತಾಗಿ ಇರಬೇಕು. ಹಾಗಾದಲ್ಲಿ ಮಾತ್ರ ರಾಷ್ಟ್ರದ ಪ್ರಗತಿಪಥದತ್ತ ನಡೆಯುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲಿಯವರೆಗೆ ಬಂದಿರತಕ್ಕಂಥ ಸರಕಾರಗಳು ಕೇವಲ ರೈತರ ಉದ್ಧಾರದ ಕುರಿತಾಗಿ ಆಶ್ವಾಸನೆಯನ್ನು ನೀಡತಕ್ಕಂಥ ಕೆಲಸವನ್ನು ಮಾಡಿವೆಯೇ ಹೊರತು ಅವರ ಉದ್ಧಾರದ ಕುರಿತಾದ ಯಾವುದೇ ಸಮರ್ಪಕವಾದ ಕೆಲಸಕಾರ್ಯಗಳನ್ನು ಮಾಡಿಲ್ಲ ಎಂದು ನಾನು ಹೇಳಬೇಕಾಗುತ್ತದೆ. ಮಂಡ್ಯ ಜಿಲ್ಲೆಯು ಕೃಷಿ ಪ್ರಧಾನವಾದ ಜಿಲ್ಲೆ. ಮಾನ್ಯ ಮುಖ್ಯಮಂತ್ರಿಯವರು ಮಂಡ್ಯಜಿಲ್ಲೆಯ ಮದ್ದೂರಿನವರು.

'ಮಂಡ್ಯದ ಗಂಡು' ಎಂಬ ಕೀರ್ತಿಗೆ ಪಾತ್ರರಾದವರು. ಮಾನ್ಯ ಮುಖ್ಯಮಂತ್ರಿಯವರು ತಮ್ಮ ಕಾಲಾವಧಿಯಲ್ಲಿ ರೈತರನ್ನು ಉದ್ಧಾರ ಮಾಡತಕ್ಕಂಥ ಕೆಲಸವನ್ನು ಮಾಡಬೇಕೆಂದು ತಮ್ಮ ಮೂಲಕ ನಾನು ಅವರನ್ನು ಪ್ರಾರ್ಥಿಸಿಕೊಳ್ಳುತ್ತೇನೆ. ಇವತ್ತು ಮುಖ್ಯವಾಗಿ ಸಾಮಾನ್ಯ ಜನರು ಏನನ್ನು ಬಯಸುತ್ತಾರೆ ಅಂದರೆ ಸರ್ಕಾರ ಕೊಡಬೇಕಾದ ಮೂಲಭೂತ ಸೌಕರ್ಯಗಳೇನಿವೆ ಅವನ್ನು ಒದಗಿಸಿಕೊಡಬೇಕಾದ ಸಂದರ್ಭದಲ್ಲಿ ಸಾಕಷ್ಟು ಸರ್ಕಾರಗಳು ವಿಫಲವಾಗಿವೆ ಎಂದರೆ ತಪ್ಪಾಗಲಾರದು ಮೊದಲನೆಯದಾಗಿ ರಸ್ತೆಗಳು, ನನಗೆ ಅನಿಸುತ್ತದೆ, ಹಿಂದೆ ಇದ್ದಂತಹ ಸರ್ಕಾರ ರಸ್ತೆಗಳನ್ನು ರಿಪೇರಿ ಮಾಡಿದೆಯೋ ಇಲ್ಲ ಹಾಳು ಮಾಡಿದೆಯೋ ಗೊತ್ತಾಗುವುದಿಲ್ಲ. ಇದಕ್ಕೆ ಉದಾಹರಣೆ ಮಾನ್ಯ ಉಪಮುಖ್ಯಮಂತ್ರಿಗಳು ಮೊನ್ನೆ ತೀರ್ಥಹಳ್ಳಿಗೆ ಹೋದಾಗ ರಸ್ತೆಗಳು ಹೇಗಿವೆ ಎಂಬುದನ್ನು ಗಮನಿಸಿರುತ್ತಾರೆ. ಅದರಲ್ಲೂ ತರೀಕೆರೆಯಿಂದ ತೀರ್ಥಹಳ್ಳಿಗೆ ಹೋಗುವಾಗ ಭದ್ರಾವತಿ ಮಾರ್ಗ ಬಿಟ್ಟು ಲಕ್ಕವಳ್ಳಿ ಮೇಲೆ ಹೋದುದನ್ನು ನೋಡಿದರೆ ಇದು ಅರ್ಥವಾಗುತ್ತದೆ ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದಲ್ಲಿ ರಸ್ತೆಗಳ ಪರಿಸ್ಥಿತಿ ಏನಾಗಿದೆ ಅಂದರೆ ಶಿವಮೊಗ್ಗದಿಂದ ಚೆನ್ನಗಿರಿಗೆ, ಹಿಂದೆ ಅಧಿಕಾರ ಮಾಡಿದವರು ಇಲ್ಲಿದ್ದಾರೆ. ಮಾನ್ಯರಾದ ಎಸ್. ಎಸ್. ಪಾಟೀಲ್, ಪಿಜಿಆರ್ ಸಿಂಧ್ಯಾ, ಭೈರೇಗೌಡ ಬಚ್ಚೇಗೌಡರವರು ಶಿವಮೊಗ್ಗದಿಂದ ಚೆನ್ನಗಿರಿಗೆ ಒಂದು ಸಲ ಹೋಗಿ ಬಂದುಬಿಟ್ಟರೆ ನಿಜಕ್ಕೂ ನಾನು ಸಂತೋಷಪಡುತ್ತೇನೆ. ಅವರ ಸೊಂಟ ಕೈಕಾಲುಗಳು ಸರಿಯಾಗಿವೆ ಎಂದು ಅಲ್ಲಿಂದ ಬಂದು ಹೇಳಿಬಿಟ್ಟರೆ ಮೆಚ್ಚಬೇಕಾದ್ದೆ. ಕೇವಲ ಶಿವಮೊಗ್ಗದಿಂದ ಚೆನ್ನಗಿರಿ ಮಾತ್ರವಲ್ಲ, ಚೆನ್ನಗಿರಿಯಿಂದ, ದಾವಣಗೆರೆ, ಚೆನ್ನಗಿರಿಯಿಂದ ಚಿತ್ರದುರ್ಗ, ಚೆನ್ನಗಿರಿಯಿಂದ ಚಿಕ್ಕಮಗಳೂರು ಈ ನಾಲ್ಕು ಜಿಲ್ಲೆಯ ಮಧ್ಯ ಇರುವ ಚೆನ್ನಗಿರಿ ಕ್ಷೇತ್ರದಿಂದ ಹೋಗತಕ್ಕಂತಹ ರಸ್ತೆಗಳಲ್ಲಿ ಯಾವುದೇ ರಾಜಕಾರಣಿ ಆ ಮಾರ್ಗದಲ್ಲಿ ಸಂಚರಿಸಿ. ಸಂಜೆ ಬಂದು ನಾವು ಚೆನ್ನಾಗಿದ್ದೇವೆ ಎಂದು ಉದಾಹರಣೆ ಕೊಟ್ಟರೆ ನಿಜಕ್ಕೂ ನಾನು ಹೆಮ್ಮೆಪಡುತ್ತೇನೆ. ಅಷ್ಟೊಂದು ಹಾಳಾಗಿರುವ ರಸ್ತೆಗಳನ್ನು ರಿಪೇರಿ ಮಾಡಿಸುವ ಕೆಲಸವನ್ನು ಮಾನ್ಯ ಲೋಕೋಪಯೋಗಿ ಸಚಿವ ಶ್ರೀ ಧರ್ಮಸಿಂಗ್ ಮಾಡುತ್ತಾರೆ ಅನ್ನುವ ನಂಬಿಕೆ ನನಗಿದೆ. ಇದು ಎಷ್ಟರಮಟ್ಟಿಗೆ ಸಾಧ್ಯವೆಂಬುದನ್ನು ನಾವು ನೋಡಬೇಕಾಗಿದೆ.

ಮಾನ್ಯ ಅಧ್ಯಕ್ಷರೇ ಇವತ್ತು ಹಳ್ಳಿಗಾಡಿನ ಪರಿಸ್ಥಿತಿ ಏನಾಗಿದೆ ಅಂದರೆ ಕೇವಲ ಮುಖ್ಯರಸ್ತೆಗಳನ್ನು ಮಾತ್ರ ನಾನು ಹೇಳುತ್ತಿದ್ದೇನೆ. ಅವಕ್ಕೆ ಬಂದು ಸೇರುವ ರಸ್ತೆಗಳು ಅಸಾಧ್ಯವಾದ ದುಸ್ಥಿತಿಯಲ್ಲಿವೆ. ಅವುಗಳನ್ನೆಲ್ಲ ಸರಿಮಾಡುವ ಯೋಜನೆಯನ್ನು ಮುಂದಿಟ್ಟುಕೊಂಡಿದ್ದೇವೆಂದು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ತಿಳಿಸಿದ್ದಾರೆ. ಸರ್ಕಾರ ತನ್ನ ಮಾತಿನಿಂದ ವಚನಭ್ರಷ್ಟವಾಗದೆ ಆ ಕೆಲಸ ಮಾಡುತ್ತದೆ ಎಂಬ ವಿಶ್ವಾಸ ಇಟ್ಟುಕೊಂಡು ಅದನ್ನು ನೆರವೇರಿಸಿ ಎಂಬ ಒತ್ತಾಯವನ್ನು ತಮ್ಮ ಮೂಲಕ ಮಾಡಬಯಸುತ್ತೇನೆ.

ಮಾನ್ಯ ಅಧ್ಯಕ್ಷರೇ, ಇನ್ನೊಂದು ಮುಖ್ಯವಾದ ವಿಚಾರ ಕುಡಿಯುವ ನೀರನ್ನು 55 ಲೀಟರ್ ಕೊಡಬೇಕೆಂಬ ಯೋಜನೆಯನ್ನು ಸಮರ್ಪಕವಾಗಿ ಮಾಡಬೇಕೆಂಬ ಸರ್ಕಾರದಲ್ಲಿ ವಿನಂತಿಸಿಕೊಳ್ಳುತ್ತೇನೆ. ಇವತ್ತಿನವರೆಗೆ ಕುಡಿಯುವ ನೀರನ್ನೂ ಒದಗಿಸಲು ಸಾಧ್ಯವಾಗದ ಸಂದರ್ಭದಲ್ಲಿ ಹಿಂದೆ ಇದ್ದ ಸರ್ಕಾರ, ಅದರಲ್ಲೂ ನನ್ನ ಕ್ಷೇತ್ರದಲ್ಲಿ 'ನೀವು ನೀರನ್ನು ಯಾಕೆ ಕುಡಿಯುತ್ತೀರಿ, ಬೀರನ್ನು ಕುಡಿಯಿರಿ' ಎಂದು ಬೀದಿಬೀದಿಗೆ ಬಾರ್‌ಗಳ ಲೈಸೆನ್ಸ್ ಕೊಟ್ಟ ಸರ್ಕಾರ ಆ ರೀತಿ ಆಗಬಾರದು. ಆ ರೀತಿ ತಪ್ಪನ್ನು ನೀವೂ ಮಾಡಿದರೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಜನತೆಗೆ ಕೊಟ್ಟಿರುವ ಆಶ್ವಾಸನೆಯನ್ನು ಸಮರ್ಪಕವಾಗಿ ನಿರ್ವಹಿಸಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಅದರ ಜೊತೆಯಲ್ಲಿ ಶಿಕ್ಷಣಕ್ಕೆ ಅಷ್ಟೇ ಮಹತ್ವ ಕೊಡಬೇಕಾದಂತಹ ಅವಶ್ಯಕತೆ ಇದೆ. ಇವತ್ತು ರಾಜ್ಯದಲ್ಲಿ ಸಾಕಷ್ಟು ಶಾಲೆಗಳಲ್ಲಿ ಕೊಠಡಿಗಳ ಅವ್ಯವಸ್ಥೆ ಇದೆ. ಅವುಗಳ ವ್ಯವಸ್ಥೆ ಮಾಡಿಕೊಡುವುದರ ಜೊತೆಗೆ ಸಮರ್ಪಕವಾಗಿ ಶಿಕ್ಷಕರೂ ಇಲ್ಲದಿರುವಾಗ ಪ್ರತಿ ಒಂದು ತರಗತಿಗೆ ಶಿಕ್ಷಕರನ್ನು ಒದಗಿಸುವ ವ್ಯವಸ್ಥೆ ಮಾಡುವ ಮೂಲಕ ಶಿಕ್ಷಣದಲ್ಲಿ ಉತ್ತಮ ಗುರಿ ಸಾಧಿಸಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಇನ್ನೊಂದು ಮುಖ್ಯವಾದ ವಿಚಾರವೆಂದರೆ ಆರೋಗ್ಯ. ನನ್ನ ಕ್ಷೇತ್ರದಲ್ಲಿ ಒಂದು ಆಸ್ಪತ್ರೆ ಇದೆ, ಹೋಬಳಿ ಮಟ್ಟದಲ್ಲೂ, ಒಂದು ಆಸ್ಪತ್ರೆ ಇದೆ, ಅದರ ಪರಿಸ್ಥಿತಿ ನೋಡಿದರೆ ಅಲ್ಲಿ ಅಷ್ಟೊಂದು ಅವ್ಯವಸ್ಥೆ ತುಂಬಿದೆ; ಅದನ್ನು ನೋಡಿದರೆ ಅಲ್ಲಿಗೆ ದನಕರುಗಳೂ ಹೋಗುವಂತಹ ಆಸ್ಪತ್ರೆಗಳು, ಅದೂ ಮಾನ್ಯ ಮುಖ್ಯಮಂತ್ರಿಗಳ ಕ್ಷೇತ್ರದಲ್ಲಿ ಎಂಬುದು ನಾಚಿಕೆಗೇಡಿನ ಸಂಗತಿಯೆಂದರೆ ತಪ್ಪಾಗಲಾರದು. ಹಿಂದಿನ ಸರ್ಕಾರಗಳು ಹೇಗೆ ವಿಫಲವಾಗಿವೆ ಎಂಬುದಕ್ಕೆ ನಮ್ಮ ಸಂತೆಬೆನ್ನೂರು ಹೋಬಳಿಯಲ್ಲಿರತಕ್ಕಂತಹ ಆಸ್ಪತ್ರೆಯೇ ಉದಾಹರಣೆ. ಇನ್ನೊಂದು ಉದಾಹರಣೆ ಅಂದರೆ ಚೆನ್ನಗಿರಿ ಕೇಂದ್ರ ಬಿಂದುವಾದ ಸರ್ಕಾರಿ ಆಸ್ಪತ್ರೆಯಲ್ಲಿ ಇಲ್ಲಿನವರೆಗೆ ಮಹಿಳಾ ವೈದ್ಯರೇ ಇಲ್ಲ. ಇದು ಎಷ್ಟು ಉದಾಸೀನತೆ ಇದೆ ಎಂದು ತೋರಿಸುತ್ತದೆ. ಅದರಲ್ಲೂ ಗ್ರಾಮೀಣ ಪ್ರದೇಶಗಳ ಗರ್ಭಿಣಿಯರಿಗೆ ಮಹಿಳಾವೈದ್ಯರು ಅವಶ್ಯಕತೆ ಅಷ್ಟೊಂದಿದ್ದರೂ ಈವರೆಗೂ ಅದನ್ನು ಪೂರೈಸುವ ವ್ಯವಸ್ಥೆ ಮಾಡಿಲ್ಲ. ಮಾನ್ಯ ಆರೋಗ್ಯ ಸಚಿವರು ಅದನ್ನು ಪೂರೈಸುವ ಕೆಲಸ ಮಾಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ. ಹಿಂದೆ ಇದ್ದವರು ಅದನ್ನು ಯಾಕೆ ಮಾಡಲಿಲ್ಲವೆಂದರೆ ರಸ್ತೆಗಳಲ್ಲಿ ಗುಣಿ ಬಿದ್ದಿದ್ದು ಗರ್ಭಿಣಿ ಆಸ್ಪತ್ರೆ ಸೇರುವ ವೇಳೆಗೆ ಹೆರಿಗೆ ಆಗಿರುತ್ತದೆ, ಹಾಗಾಗಿ ಮಹಿಳಾವೈದ್ಯರ ಅವಶ್ಯಕತೆ ಇಲ್ಲವೆಂದು ತುಂಬದಿರಬಹುದು ಎಂದು ನನಗೆ ಅನಿಸುತ್ತದೆ. ಮಾನ್ಯ ಆರೋಗ್ಯ ಸಚಿವರು ಹಾಗೆ ಯೋಚಿಸದೆ ಚೆನ್ನಗಿರಿ ಸರ್ಕಾರಿ ಆಸ್ಪತ್ರೆಗೆ ಮತ್ತು ಸಂತೆಬೆನ್ನೂರು ಆಸ್ಪತ್ರೆಗೆ ಮಹಿಳಾ ವೈದ್ಯರನ್ನು ಕೊಡುವ ಕೆಲಸ ಮಾಡಬೇಕೆಂದು ವಿನಂತಿಸುತ್ತೇನೆ.

ಇನ್ನೊಂದು ಮುಖ್ಯವಾದ ವಿಚಾರವೆಂದರೆ ಇವತ್ತು ಕಡು ಬಡವರಿಗೆ 'ನೆರಳು ಭಾಗ್ಯ'ಎಂಬ ಯೋಜನೆ ಇದ್ದರೂ ಸರ್ಕಾರಗಳು ಅದನ್ನು ಸಮರ್ಪಕವಾಗಿ ಮಾಡದೇ ಇರುವುದರಿಂದ ಸಾಕಷ್ಟು ಕಡುಬಡವರು ಬೀದಿಪಾಲಾಗಿದ್ದಾರೆ. ಅಂಥವರಿಗೆ ಮನೆಗಳನ್ನು ಸಮರ್ಪಕವಾಗಿ ಕಟ್ಟಿಸಿಕೊಡುವ ಕೆಲಸ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ.

ಸನ್ಮಾನ್ಯ ಅಧ್ಯಕ್ಷರೇ ಇನ್ನೊಂದು ಮುಖ್ಯವಾದ ವಿಚಾರವೆಂದರೆ ಹಸಿರು ಕಾರ್ಡು ಹಂಚಿಕೆಯಲ್ಲಿ ತುಂಬ ಅವ್ಯವಹಾರಗಳು ನಡೆದಿವೆ ಅದರ ಜೊತೆಗೆ ಅವನ್ನು ತೆಗೆದುಹಾಕುವ ಕೆಲಸ ಈಗ ಪ್ರಾರಂಭಿಸಿದ್ದಾರೆ. ಅದನ್ನು ಕೈಬಿಟ್ಟು ಕಡುಬಡವರಿಗೆ ಹಸಿರು ಕಾರ್ಡನ್ನು ಸಮರ್ಪಕವಾಗಿ ವಿತರಿಸಬೇಕೆಂದು ಒತ್ತಾಯಿಸುವುದರ ಜೊತೆಗೆ ಇಷ್ಟು ಮಾತುಗಳನ್ನಾಡಲು ಅವಕಾಶ ಕೊಟ್ಟ ತಮಗೆ ನನ್ನ ವೈಯಕ್ತಿಕ ಅಭಿನಂದನೆಗಳನ್ನು ಸಲ್ಲಿಸುತ್ತ ನನ್ನ ಮಾತನ್ನು ಮುಗಿಸುತ್ತೇನೆ. ಜೈಹಿಂದ್, ಜೈಕರ್ನಾಟಕ.

5.00 ಪಿ.ಎಂ.

+ ಶ್ರೀ ಕರಿಯಣ್ಣ (ಹೊಳೆಹೊನ್ನೂರು):- ಮಾನ್ಯ ಅಧ್ಯಕ್ಷರೇ, ನಿಜಕ್ಕೂ ಸಹಿತ ನಮ್ಮ ಮಾನ್ಯ ಎಸ್.ಎಂ. ಕೃಷ್ಣರವರ ನಾಯಕತ್ವದಲ್ಲಿ ರಾಜ್ಯದ ಜನತೆ ಅಪಾರವಾದ ಅಭಿಮಾನವಿಟ್ಟು ಮತ್ತೊಮ್ಮೆ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರಲು ಹೆಚ್ಚಿನ ಬಹುಮತ ನೀಡಿ ಕಳಿಸಿದ್ದಾರೆ. ಅದಕ್ಕಾಗಿ ರಾಜ್ಯದ ಜನತೆಗೆ ತಮ್ಮ ಮೂಲಕ ನಮ್ಮ ಅಭಿನಂದನೆಗಳನ್ನು ತಿಳಿಸುತ್ತ ಅದೇ ರೀತಿ ರಾಜ್ಯದ ಜನತೆ ನಮ್ಮಿಂದ ಕೆಲಸಗಳಾಗುತ್ತವೆಂಬ ಆಸೆಯಿಂದ ಸರ್ಕಾರವನ್ನು ಆರಿಸಿ ಕಳಿಸಿರುವ ಮೇರೆಗೆ ಇವತ್ತಿನ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಹಿಂದುಳಿದವರ ಬಗ್ಗೆ, ಹರಿಜನ ಗಿರಿಜನರ ಬಗ್ಗೆ ಹಾಗೂ ಗ್ರಾಮೀಣ ಜನಗಳ ಬಗ್ಗೆ ಮತ್ತು ಹಿಂದುಳಿದ ಪ್ರದೇಶಗಳ ಅಭಿವೃದ್ಧಿ ಮಾಡುವ ಬಗ್ಗೆ ರಾಜ್ಯಪಾಲರ ಭಾಷಣದ ಮೂಲಕ ಮುಂದೆ ಮಾಡುವ ಕೆಲಸಗಳ ಬಗ್ಗೆ ತಿಳಿಸಲಾಗಿದೆ. ಇದನ್ನು ನಾನು ಬೆಂಬಲಿಸುತ್ತ ಇವತ್ತು ಗ್ರಾಮೀಣಾಭಿವೃದ್ಧಿಯಲ್ಲಿ ಅದರಲ್ಲೂ ಗ್ರಾಮೀಣಾಭಿವೃದ್ಧಿ ತುಂಬ ಮಹತ್ವದ ಖಾತೆ. ಇದುವರೆಗೂ ಗ್ರಾಮಪಂಚಾಯಿತಿಗಳ ಚುನಾವಣೆ ನಡೆಯದೆ ಅವ್ಯವಸ್ಥೆಯಾಗಿ ಇರುವ ಗ್ರಾಮಪಂಚಾಯಿತಿಗಳನ್ನು ಮಂಡಲಪಂಚಾಯತಿ ಅಂತ ಮಾಡುವುದಕ್ಕಾಗಿ ಈ ಚುನಾವಣೆಗಳನ್ನು ಮುಂದೂಡಿದರು. ಅದಕ್ಕಾಗಿ ತಮ್ಮ ಮೂಲಕ ಸನ್ಮಾನ್ಯ ಗ್ರಾಮೀಣಾಭಿವೃದ್ಧಿ ಮಂತ್ರಿಗಳನ್ನು ವಿನಂತಿ ಮಾಡಿಕೊಳ್ಳುತ್ತೇನೆ; ಈ ಹಿಂದೆ ಕಾಂಗ್ರೆಸ್ ಸರ್ಕಾರ ಏನು ರಚನೆ ಮಾಡಿತ್ತೋ ಅದೇ ರೀತಿಯ ಗ್ರಾಮ ಪಂಚಾಯತಿಗಳು, ಅದೇ ರೀತಿಯಲ್ಲಿ ಚುನಾವಣೆಯನ್ನು ಆದಷ್ಟು ಜಾಗ್ರತೆಯಾಗಿ ನಡೆಸಲಿ ಮತ್ತು ಆ ಗ್ರಾಮೀಣ ಪ್ರದೇಶದಲ್ಲಿರತಕ್ಕಂಥ ಜನಗಳಿಗೆ ಅನುಕೂಲ ಆಗುವ ರೀತಿಯಲ್ಲಿ ತತ್‌ಕ್ಷಣ ಚುನಾವಣೆ ನಡೆಯಲಿ ಎಂದು ಈ ಸಂದರ್ಭದಲ್ಲಿ ಒತ್ತಾಯಿಸುವುದರ ಜೊತೆಗೆ ಆ ಗ್ರಾಮ ಪಂಚಾಯತಿಗಳಿಗೆ ನಾವೇನು ರಾಜ್ಯ ಸರ್ಕಾರದ ಮೂಲಕ ಒಂದು-ಲಕ್ಷ ರೂಪಾಯಿಗಳ ಅನುದಾನವನ್ನು ಕೊಡುತ್ತಿದ್ದೆವೋ ಅದನ್ನು ಹೆಚ್ಚಿಗೆ ಮಾಡುವ ಮೂಲಕ ಗ್ರಾಮ ಪಂಚಾಯತಿಗಳನ್ನು ಬಲ ಪಡಿಸಬೇಕೆಂದು ಹೇಳಿ ನಾನು ಈ

ಸಂದರ್ಭದಲ್ಲಿ ವಿನಂತಿ ಮಾಡುತ್ತೇನೆ. ಹಾಗೆಯೇ ಗ್ರಾಮ ಪಂಚಾಯತಿ ಮತ್ತು ಗ್ರಾಮಾಭಿವೃದ್ಧಿ ತುಂಬಾ ಪ್ರಮುಖವಾದುದು. ಅಲ್ಲಿಗೆ ನಾವು ಕುಡಿಯುವ ನೀರನ್ನು ಪ್ರತಿಯೊಬ್ಬರಿಗೂ 55 ಲೀಟರ್‌ಗಳನ್ನು ಕೊಡುತ್ತೇವೆಂದು ಹೇಳಿದ್ದೆವು. ಆದರೆ ಇವತ್ತು ಭೂಮಿಯಲ್ಲಿ ನಾವು ಬೋರ್‌ವೆಲ್‌ಗಳನ್ನು ತೆಗೆದು ನೀರನ್ನು ಕೊಡಬೇಕಾದರೆ 600 ರಿಂದ 800, 800 ರಿಂದ 900 ಅಡಿಗಳಷ್ಟು ಆಳಕ್ಕೆ ನೀರು ಹೋಗಿದೆ. ಇದರಿಂದ ಕುಡಿಯುವ ನೀರಿಗೂ ಸಹ ಪರದಾಡತಕ್ಕಂಥಹ ಪರಿಸ್ಥಿತಿ ಇವತ್ತು ಗ್ರಾಮೀಣ ಪ್ರದೇಶದಲ್ಲಿ ಸೃಷ್ಟಿ ಆಗಿದೆ. ಈ ಪರಿಸ್ಥಿತಿ ಸೃಷ್ಟಿ ಆಗಿರುವುದರ ಬಗ್ಗೆ ನಾವ್ಯಾರೂ ಸಹ ಚಿಂತನೆಯನ್ನು ಮಾಡತಕ್ಕಂಥ ಪರಿಸ್ಥಿತಿಗೆ ಹೋಗಿಲ್ಲ. ಕಾರಣ, ಆ ಗ್ರೌಂಡ್‌ವಾಟರ್ ವಿಚಾರ; ಅಂದರೆ ಭೂಮಿಯ ಒಳಗಡೆ ಇರತಕ್ಕ ನೀರಿನ ಮಟ್ಟ ಮೇಲಕ್ಕೆ ಬರತಕ್ಕಂಥ ಯೋಜನೆಯನ್ನು ನಾವು ಸೃಷ್ಟಿ ಮಾಡತಕ್ಕಂಥ ಕಾರ್ಯಕ್ರಮಗಳನ್ನು ನಮ್ಮ ಮಾನ್ಯ ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಹಾಕಿಕೊಳ್ಳದೇ ಹೋದರೆ, ಇನ್ನು ಐದು ವರ್ಷಗಳಲ್ಲಿ ನಾವು ಗ್ರಾಮೀಣ ಪ್ರದೇಶದಲ್ಲಿರತಕ್ಕಂಥ ಜನಗಳಿಗೆ ಕುಡಿಯುವ ನೀರನ್ನು ಕೊಡದೇ ಇರತಕ್ಕಂಥಹ ಪರಿಸ್ಥಿತಿಗೆ ಹೋಗುವಂಥ ವಾತಾವರಣ ಸೃಷ್ಟಿ ಆಗುತ್ತದೆ. ಆದಕ್ಕಾಗಿ ನಾವು ಆ ಗ್ರಾಮಗಳ ವ್ಯಾಪ್ತಿಯಲ್ಲಿ ಬರತಕ್ಕಂಥ ಏನು ಭೂಮಿಯನ್ನು ನೀರು ಇದೆಯೋ, ಆ ನೀರನ್ನು ಅಭಿವೃದ್ಧಿ ಪಡಿಸತಕ್ಕ ಒಂದು ಹೊಸ ಯೋಜನೆಯನ್ನು ಸೃಷ್ಟಿ ಮಾಡಬೇಕಾಗುತ್ತದೆ. ನಾವು ನೀರಾವರಿ ಪ್ರದೇಶದವರಿಗೆ ಬೆಳೆ ಬೆಳೆಯುವುದಕ್ಕೆ ಡ್ಯಾಮ್ ಕಟ್ಟಿ ಚಾನಲ್ ಮಾಡಿ, ಅವರ ಭೂಮಿಗೆ ನೀರನ್ನು ಕೊಟ್ಟು ಅವರನ್ನು ಅಭಿವೃದ್ಧಿ ಪಡಿಸುತ್ತಿದ್ದೇವೆ. ಆದರೆ ಇವತ್ತು ಕುಡಿಯುವ ನೀರಿಗೆ ನಾವು ಅನೇಕ ಯೋಜನೆಗಳನ್ನು ಹಾಕಿಕೊಳ್ಳದೇ ಹೋದರೆ ಪರಿಸ್ಥಿತಿ ಇನ್ನೂ ವಿಕೋಪಕ್ಕೆ ಹೋಗತಕ್ಕಂಥ ಒಂದು ಮಟ್ಟಕ್ಕೆ ಆಗುತ್ತದೆ. ಇದರಲ್ಲಿ ನನ್ನದೇ ಒಂದು ಉದಾಹರಣೆ ಇದೆ. ಶಿವಮೊಗ್ಗ ಜಿಲ್ಲೆಯಲ್ಲಿದ್ದಂತಹ ಚೆನ್ನಗಿರಿ ತಾಲ್ಲೂಕು ಇವತ್ತು ದಾವಣಗೆರೆಗೆ ಹೋಗಿದೆ. ಆ ಚೆನ್ನಗಿರಿ ತಾಲ್ಲೂಕ್‌ನಲ್ಲಿ ಇವತ್ತು 700 ರಿಂದ 800 ಅಡಿಗಳಷ್ಟು ಕುಡಿಯುವ ನೀರಿನ ಮಟ್ಟ ಕೆಳಗೆ ಹೋಗಿರತಕ್ಕಂಥ ಪರಿಸ್ಥಿತಿ ಉಂಟಾಗಿದೆ. ಅನೇಕ ಗ್ರಾಮಗಳಲ್ಲಿ ಇವತ್ತು ಐದು ಕಿಲೋ ಮೀಟರ್ ನಿಂದ ಆರು ಕಿಲೋ ಮೀಟರ್ ದೂರದಲ್ಲಿ ಎಲ್ಲೋ ಒಂದು ಗುಡ್ಡದ ಬದಿಯಲ್ಲಿ ಒಂದು ಬೋರ್‌ವೆಲ್ ಹಾಕಿ ನಾವು ಪಂಪ್ ಮಾಡಿ ಅಲ್ಲಿಂದ ನೀರನ್ನು ತಂದು ಕುಡಿಯತಕ್ಕಂಥ ಪರಿಸ್ಥಿತಿ ಬಂದಿದೆ. ಕಾರಣ ಅಲ್ಲಿರತಕ್ಕ ಕೆರೆಕಟ್ಟೆಗಳಿಗೆ ಮಳೆ ಆಗದೇ ನೀರು ಬರದೇ, ಭೂಮಿಯ ಒಳಗಡೆ ಇರತಕ್ಕಂಥ ಜಲ ಬತ್ತಿ ಹೋಗತಕ್ಕಂಥ ಪರಿಸ್ಥಿತಿ ಆಗಿದೆ. ಆದ್ದರಿಂದ ಅದಕ್ಕೆ ಒಂದು ಹೊಸ ಯೋಜನೆಯನ್ನು ಸೃಷ್ಟಿ ಮಾಡಿ. ಎಲ್ಲಾದರೂ ನೀವು ನೀರನ್ನು ತಂದು ಅಕ್ಕಪಕ್ಕದಲ್ಲಿ ನದಿ ಇದ್ದರೆ, ಆ ನೀರಿನಿಂದ ಕೆರೆಗಳನ್ನು ತುಂಬಿಸತಕ್ಕಂಥ ವ್ಯವಸ್ಥೆಯನ್ನು ಮಾಡಿದರೆ ಅದು ಗ್ರೌಂಡ್ ವಾಟರ್ ಲೆವೆಲ್ ರೈಸ್ ಆಗುತ್ತದೆ. ಆಗ ನೀರಾವರಿಗೂ ಅನುಕೂಲ ಆಗುತ್ತದೆ. ಕುಡಿಯುವ ನೀರಿಗೂ ಅನುಕೂಲ ಆಗುತ್ತದೆ. ಇದನ್ನು ನಮ್ಮ ಗ್ರಾಮಾಭಿವೃದ್ಧಿ ಸಚಿವರು

ಮನಗಾಣಬೇಕು. ತಾವು ನೀರಾವರಿಗೆ ಎಷ್ಟು ಆದ್ಯತೆ ಕೊಡುತ್ತೀರೋ ಕುಡಿಯುವ ನೀರಿಗೂ ಸಹ ಅಷ್ಟೇ ಆದ್ಯತೆಯನ್ನು ಕೊಡಬೇಕು. ಏಕೆಂದರೆ ಬೆಂಗಳೂರಿನಲ್ಲಿ ಒಂದನೇ ಕಾವೇರಿ ಯೋಜನೆ, ಎರಡನೇ ಕಾವೇರಿ ಯೋಜನೆ, ಮೂರನೇ ಕಾವೇರಿ ಯೋಜನೆ-ಈ ಎಲ್ಲಾ ಯೋಜನೆಗಳೂ ನಗರವಾಸಿಗಳಿಗೇ ಬಹಳ ಲಾಭ ಆಗುತ್ತದೆಯೇ ವಿನಹ ಗ್ರಾಮಾಂತರ ವಾಸಿಗಳಿಗೆ ಒಂದಿಷ್ಟೂ ಸಹ ಲಾಭ ಆಗದೇ ಇರತಕ್ಕಂಥ ಒಂದು ಪರಿಸ್ಥಿತಿಯ ವಾತಾವರಣ ಸೃಷ್ಟಿ ಆಗತಕ್ಕದ್ದು ಬಂದಿದೆ. ಹಾಗಾಗಿ ಆ ಕೆರೆಕಟ್ಟೆಗಳ ಅಭಿವೃದ್ಧಿಗಾಗಿ ಗ್ರಾಮೀಣಾಭಿವೃದ್ಧಿ ಸಚಿವರೂ ಸಹಿತ ಕುಡಿಯುವ ನೀರಿನ ಯೋಜನೆಗೆ ಬೇರೆ ಒಂದು ಯೋಜನೆಯನ್ನು ಸೃಷ್ಟಿ ಮಾಡತಕ್ಕದ್ದು ಈ ಸಂದರ್ಭದಲ್ಲಿ ಉತ್ತಮ ಎನ್ನತಕ್ಕ ಅಭಿಪ್ರಾಯವನ್ನು ತಮ್ಮ ಮೂಲಕ ನಾನು ವ್ಯಕ್ತಪಡಿಸುತ್ತಿದ್ದೇನೆ. ಹಾಗೆಯೇ ಗ್ರಾಮೀಣಾಭಿವೃದ್ಧಿ ವಿಚಾರ; ಗ್ರಾಮ ಪಂಚಾಯಿತಿ, ಮತ್ತು ಮಂಡಲ್ ಪಂಚಾಯತಿ ಹಾಗೂ ತಾಲ್ಲೂಕು ಪಂಚಾಯತಿಗಳಲ್ಲಿ, ಇವತ್ತು ಜಿಲ್ಲಾ ಪಂಚಾಯತ್‌ನಲ್ಲಿ ಏನೊಂದು ವ್ಯವಸ್ಥೆ ಇದೆ ಅದರಲ್ಲಿ ಹರಿಜನ-ಗಿರಿಜನರಿಗಾಗಿ ಮೀಸಲಾಗಿ ಇಟ್ಟಿರತಕ್ಕಂಥಹ ಹಣ 18 ಪರ್ಸೆಂಟ್ ಇರಬಹುದು, ಅಥವಾ 20 ಪರ್ಸೆಂಟ್ ಇರಬಹುದು. ಈ ಹಣವನ್ನು ಸಮರ್ಪಕವಾಗಿ ಖರ್ಚು ಮಾಡುತ್ತಿದ್ದಾರೋ ಇಲ್ಲವೋ? ಅಥವಾ ಅದನ್ನು ಪರಿಶೀಲನೆ ಮಾಡತಕ್ಕವರು ಯಾರು? ಆ ಯೋಜನೆಯಲ್ಲಿ ಹಣವನ್ನು ಆ ಜನಾಂಗದ ಅಭಿವೃದ್ಧಿಗಾಗಿ ಸಮರ್ಪಕವಾಗಿ ಬಳಸಿದ್ದಾರಾ ಎನ್ನತಕ್ಕದ್ದನ್ನು ನೋಡಬೇಕಾದಂತಹ ಪರಿಸ್ಥಿತಿಯನ್ನು, ಒಂದು ಸೂಪರ್‌ವಿಷನ್ ಅನ್ನು ಇಡಬೇಕಾಗುತ್ತದೆ. ಆ ಸುಪರ್‌ವಿಷನ್‌ಇಡದೇ ಇರುವುದರಿಂದ ಆ ಜನಾಂಗದ ಅಭಿವೃದ್ಧಿ ಜಿಲ್ಲಾ ಪರಿಷತ್ ಸೃಷ್ಟಿ ಆಗಿದ್ದರೂ ಸಹಿತ ತಾಲ್ಲೂಕು ಪಂಚಾಯತಿ ಸೃಷ್ಟಿ ಆಗಿದ್ದರೂ ಸಹಿತ, ಗ್ರಾಮ ಪಂಚಾಯತಿ ಸೃಷ್ಟಿ ಆಗಿದ್ದರೂ ಸಹಿತ ಆ ಹಣ ಬೇರೆ ಕಡೆ ಉಪಯೋಗವಾಗಿ ಹರಿಜನ ಗಿರಿಜನರ ಅಭಿವೃದ್ಧಿ ಆಗದೇ ಇರುವಂತಹ ಪರಿಸ್ಥಿತಿ ಆಗಿ ಕೇವಲ ಹರಿಜನರಿಗೆ ಗಿರಿಜನರಿಗೆ ಕೊಟ್ಟಿದ್ದೇವೆಂದು ಹೇಳಿ ಪ್ರಚಾರ ಮಾಡತಕ್ಕದ್ದು ಮತ್ತು ಟಿ.ವಿ.ನಲ್ಲಿ ಹೇಳತಕ್ಕದ್ದು; ಪತ್ರಿಕೆಯಲ್ಲಿ ಸ್ಟೇಟ್‌ಮೆಂಟ್ ಕೊಡತಕ್ಕದ್ದು ಈ ವಿಚಾರಕ್ಕಾಗಿ ಹೋಗುತ್ತಿದೆ. ಈಗ ತಾನೇ ಹೊಸದಾಗಿ ಈ ಸಮಾಜ ಕಲ್ಯಾಣ ಇಲಾಖೆಗೆ ಒಬ್ಬ ಉತ್ತಮರಾದಂತಹ ಮತ್ತು ತುಂಬಾ ಅನುಭವಶಾಲಿಯಾದಂತಹ ಮಾನ್ಯ ಕಾಗೋಡು ತಿಮ್ಮಪ್ಪನವರನ್ನು ಮಂತ್ರಿಯನ್ನಾಗಿ ಮಾಡಿದ್ದಾರೆ. ಇದು ನಿಜವಾಗಿಯೂ ತುಂಬಾ ಸಂತೋಷದ ವಿಚಾರ. ಅವರು ಹಿಂದುಳಿದ ವರ್ಗದವರ ಬಗ್ಗೆ ತುಂಬಾ ಆಳವಾದಂತಹ ಅಭ್ಯಾಸವನ್ನು ಮಾಡಿದ್ದಾರೆ. ಆದರೆ ಆ ಹಿಂದುಳಿದ ವರ್ಗದವರ ಕಷ್ಟ ಸುಖಗಳನ್ನು ಸಹಿತ ಅವರು ಸ್ವತಃ ಅನುಭವಿಸಿದ್ದಾರೆ ಮತ್ತು ಅದರ ಬಗ್ಗೆ ಒಂದು ಚಳುವಳಿಯನ್ನೂ ಮಾಡಿ, ಏನೊಂದು ಟೆನೆಂಟ್ ಆಕ್ಟ್ ಇತ್ತು, "ಉಳುವವನೇ ಭೂಮಿಯ ಒಡೆಯ" ಎನ್ನತಕ್ಕದ್ದು ಮಾನ್ಯ ಕಾಗೋಡು ಅವರಿಂದಲೇ ಸೃಷ್ಟಿಯಾದಂತಹ ಒಂದು ಚಳುವಳಿ. ಆದರೆ ಆ ಮಂತ್ರಿಗಳಿಗೆ ಹರಿಜನ ಗಿರಿಜನರ ಕಷ್ಟ ಗೊತ್ತಿದೆ ಇಲ್ಲ

ಎಂದು ನಾವು ಹೇಳುವುದಿಲ್ಲ. ಆದರೂ ಸಹಿತ ಸ್ವತಃ ಈ ಕಷ್ಟಗಳನ್ನು ಅವರು ಅನುಭವಿಸಿಲ್ಲ. ಏಕೆಂದರೆ ಸಾಮಾಜಿಕವಾದಂತಹ ಶೋಷಣೆಯನ್ನು ಅನುಭವಿಸಿರತಕ್ಕವರು ನಾವು. ಆ ಗ್ರಾಮಗಳಲ್ಲಿ ಯಾರು ಸಾಮಾಜಿಕವಾದಂತಹ ಶೋಷಣೆಯನ್ನು ಅನುಭವಿಸಿದ್ದಾರೋ; ಅದನ್ನು ಆಳವಾಗಿ ತಿಳಿದುಕೊಂಡಿರಬೇಕು. ಜೊತೆಯಲ್ಲಿ ಅವರೇನು ಬ್ಯಾಕ್‌ವರ್ಡ್‌ಕ್ಲಾಸ್‌ನವರಿಗೆ ಬಹಳ ಆದ್ಯತೆಯನ್ನು ಕೊಟ್ಟು ಬಜೆಟ್‌ನಲ್ಲಿ ಏರಿಕೆ ಮಾಡುತ್ತಾರೋ ಅದೇ ರೀತಿ ಹರಿಜನ ಗಿರಿಜನರ ಏಳಿಗೆಗಾಗಿ ಇಟ್ಟಿರತಕ್ಕಂಥ ಹಣ ಎಷ್ಟು? ಅದು ಯಾವ ರೀತಿ ಖರ್ಚಾಗುತ್ತಿದೆ? ಅದು ಖರ್ಚಾಗುತ್ತಿದೆಯೋ ಇಲ್ಲವೋ? ಅಥವಾ ಆ ಇಲಾಖೆ ಯಾವ ರೀತಿಯಾಗಿ ಕೆಲಸ ಮಾಡುತ್ತಿದೆ? ಎನ್ನತಕ್ಕದ್ದರ ಬಗ್ಗೆ ಸಹಿತ ಹೆಚ್ಚಿನ ಗಮನವನ್ನು ಸನ್ಮಾನ್ಯ ಕಾಗೋಡು ತಿಮ್ಮಪ್ಪನವರು ಹರಿಸಬೇಕು. ಆದರ ಜೊತೆಯಲ್ಲಿ ನಮಗೆ ಸಮಾಜಕಲ್ಯಾಣ ಇಲಾಖೆ ಇದೆ. ಆ ಇಲಾಖೆಗೆ ಏನು ಅಧಿಕಾರ ಇದೆಯೋ ಅದು ನಮಗೆ ಗೊತ್ತಿಲ್ಲ.

ಶ್ರೀ ಆರಗ ಜ್ಞಾನೇಂದ್ರ:- ಮಾನ್ಯ ಕಾಗೋಡು ತಿಮ್ಮಪ್ಪನವರು ಕೇಳುತ್ತಿದ್ದಾರೋ ಇಲ್ಲವೋ? ನೀವು ಆ ವರ್ಗದಲ್ಲಿ ಹುಟ್ಟಿದವರಲ್ಲ. ಅದಕ್ಕೆ ಬದಲಾವಣೆ ಮಾಡಬೇಕು ಎನ್ನುವಂತಹ ಅಭಿಪ್ರಾಯವನ್ನು ವ್ಯಕ್ತ ಮಾಡುತ್ತಿದ್ದಾರೆ.

ಶ್ರೀ ಕರಿಯಣ್ಣ:- ಸುಧಾರಣೆ ಮಾಡಬೇಕೆಂದು ಹೇಳುತ್ತಿದ್ದೇವೆ, ಕೇಳುತ್ತಿದ್ದೇವೆ. ಹಿಂದಿನ ಸರ್ಕಾರದವರು ಮಾಡಿಲ್ಲ. ನೀವು ಇಂಥಿಂಥಹದು ಮಾಡಿ ಎಂದು ಅವರಿಗೆ ಹೇಳುತ್ತಿದ್ದೇವೆ.

ಶ್ರೀ ಆರಗ ಜ್ಞಾನೇಂದ್ರ:- ಬದಲಾವಣೆ ಮಾಡಬೇಕು ಎಂದು ನಿಮ್ಮ ಸದಸ್ಯರು ಅಭಿಪ್ರಾಯಪಡುತ್ತಿದ್ದಾರೆ.

ಶ್ರೀ ಕರಿಯಣ್ಣ:- ಅವರನ್ನು ಬದಲಾವಣೆ ಮಾಡಿ ಎಂದು ಹೇಳುತ್ತಿಲ್ಲ. ಸುಧಾರಣೆ ಮಾಡಬೇಕು ಎಂದು ಹೇಳುತ್ತಿದ್ದೇನೆ. ತಮಗೆ ಕೇಳಿಸಲಿಲ್ಲವೇನೋ? ಸ್ವಲ್ಪ ಕಿವಿಗೆ ಮೈಕ್ ಹಾಕಿಕೊಳ್ಳಿ. ಅವರಿಗೆ ನಾವು ಇನ್ನೂ ಹೆಚ್ಚಿನ ಜವಾಬ್ದಾರಿಯುತವಾಗಿ ಕೆಲಸ ಮಾಡಿ ಸ್ವಾಮಿ ಎಂದು ಕೇಳುತ್ತಿದ್ದೇವೆ. ಏಕೆಂದರೆ ಅವರಿಗೆ ಆಳವಾದಂತಹ ಅಭ್ಯಾಸ ಇದೆ. ನಾವು ಬದಲಾವಣೆ ಮಾಡಿ ಎಂದು ಕೇಳುವುದಕ್ಕೆ ; ಬದಲಾವಣೆ ಮಾಡುವುದಕ್ಕಾಗಿ ಅವರನ್ನು ಮಂತ್ರಿಯಾಗಿ ಮಾಡಿಲ್ಲ. ತಮ್ಮ ಕೆಲಸವನ್ನು ಹೆಚ್ಚಿನ ಜವಾಬ್ದಾರಿಯುತವಾಗಿ ಮಾಡಿ ಎಂದು ಹೇಳಿ ನಾವು ಅವರಿಗೆ ಹೇಳಿದ್ದೇವೆ, ನಾವೆಲ್ಲರೂ ಕೂಡಿಯೇ ಅವರಿಗೆ ಮಂತ್ರಿಯಾಗಿ ಮಾಡಿದ್ದೇವೆ. ಅವರು ಮಂತ್ರಿಯಾಗಿರತಕ್ಕದ್ದು ತುಂಬಾ ಒಳ್ಳೆಯದು. ಆದರೆ ನಮ್ಮಗಳ ವಿಚಾರ ಅವರು ಇನ್ನೂ ಸ್ವಲ್ಪ ತಿಳಿದುಕೊಳ್ಳಲಿ ಎಂದು ಹೇಳುತ್ತಿದ್ದೇನೆ. ಏಕೆಂದರೆ ನೀವು ಹೇಳಿ. ಈ ಸದನದಲ್ಲಿರತಕ್ಕಂಥ ಎಲ್ಲ ಗೌರವಾನ್ವಿತ ಸದಸ್ಯರೂ ಸಹಿತ ಸಮಾಜ ಕಲ್ಯಾಣ ಇಲಾಖೆ ಎಂಬುದೊಂದು ಇಲಾಖೆ ಇದೆ. ಆ ಇಲಾಖೆ ಸುಮ್ಮನೇ ಹೆಸರಿಗೆ ಮಾತ್ರ ಇದೆ. ಅದು ಸಂಬಳ ತೆಗೆದುಕೊಳ್ಳುವುದಕ್ಕೆ ಮಾತ್ರ ಇದೆ. ಅವರಿಗೆ ಜಾತಿ

ಸರ್ಟಿಫಿಕೇಟ್ ಕೊಡತಕ್ಕಂತಹ ಅಧಿಕಾರ ಇಲ್ಲ. 100 ರೂಪಾಯಿ ಯಾರದ್ದಾದರೂ ಮನೆ ಸುಟ್ಟು ಹೋದರೆ ಪರಿಹಾರ ಕೊಡತಕ್ಕಂಥ ಅಧಿಕಾರ ಸಮಾಜ ಕಲ್ಯಾಣ ಇಲಾಖೆಗೆ ಇಲ್ಲ; ಬೇರೆಯವರಿಗೇ ಇರುವುದು. ಯಾರಿಗಾದರೂ ಒಬ್ಬರ ಮೇಲೆ ಅಟ್ರಾಸಿಟೀಸ್ ಆದರೆ ಇಮ್ಮೀಡಿಯಟ್ ಆಗಿ ಹೋಗಿ ಅವರ ಮೇಲೆ ಕೇಸ್ ಹಾಕತಕ್ಕ ಅಧಿಕಾರ ಆ ಸಮಾಜ ಕಲ್ಯಾಣ ಇಲಾಖೆಯವರಿಗೆ ಇಲ್ಲ. ತಾವೇನು ಕೇಳಬೇಕೋ ಕೇಳಿ.

ಶ್ರೀ ಆರಗ ಜ್ಞಾನೇಂದ್ರ:- ಪೂರ್ತಿಯಾಗಿ ಹಣ ಅವರ ಹತ್ತಿರವೇ ಇರುವುದು. ಸಮಾಜ ಕಲ್ಯಾಣ ಇಲಾಖೆಯಲ್ಲಿ ಎಲ್ಲಾ 20 ಪರ್ಸೆಂಟ್ ಗ್ರಾಂಟನ್ನು ಪೂಲ್ ಮಾಡಿ ಆ ಇಲಾಖೆಗೇ ಕೊಟ್ಟಿದ್ದಾರೆ. ಭಾರೀ ಹಣಕಾಸಿನ ಇಲಾಖೆ ಅದು. ಮಾನ್ಯ ಕರಿಯಣ್ಣನವರಿಗೆ ಗೊತ್ತಿಲ್ಲ. ಸನ್ಮಾನ್ಯ ಮಂತ್ರಿಗಳು ಹೇಳಬೇಕು.

ಶ್ರೀ ಕರಿಯಣ್ಣ:- ಎಲ್ಲ ಹಣವನ್ನು; ಎಲ್ಲ ಜಿಲ್ಲಾಪರಿಷತ್ತಿಗೆ ಕೊಟ್ಟಿದ್ದೇವೆ. ಜಿಲ್ಲಾ ಪರಿಷತ್‌ನಲ್ಲಿ ಅದು ಹಂಚಿಕೆ ಆಗುತ್ತಿದೆ. ಸಮರ್ಪಕವಾಗಿ ಹಂಚಿಕೆ ಆಗುತ್ತಿಲ್ಲ. ನಮಗೆ ಹರಿಜನ ಗಿರಿಜನರ ಕೇರಿಗೆ ರಸ್ತೆ ಮಾಡಿ ಎಂದರೆ ಇನ್ನೊಬ್ಬರ ಕೇರಿಗೆ ರಸ್ತೆ ಮಾಡಿ ಹರಿಜನ ಗಿರಿಜನರ ಕೇರಿಗೆ ಬರುವ ಹೊತ್ತಿಗೆ ನಿಲ್ಲಿಸಿ ಬಿಡುತ್ತಾರೆ. ಹರಿಜನ ಗಿರಿಜನ ಕೇರಿಗೆ ಲೈಟ್ ಹಾಕಿ ಎಂದು ಹೇಳಿದರೆ ಅಲ್ಲಿಂದ ಲೈಟ್ ಕಂಬ ಇಲ್ಲಿಂದ ಶುರು ಮಾಡಿ ಹರಿಜನರ ಕೇರಿಗೆ ಹೋಗುವುದರಲ್ಲಿ ನಿಲ್ಲಿ ಬಿಡುತ್ತಾರೆ. ಈ ಫಂಡ್ ಖರ್ಚಿಗೆ ಬಿದ್ದಿರುತ್ತದೆ. ಸಮಾಜ ಕಲ್ಯಾಣ ಇಲಾಖೆಯ ಖಾತೆಯಲ್ಲಿ ಖರ್ಚು ಬಿದ್ದಿರುತ್ತದೆ. ಇಂತಹ ವ್ಯವಸ್ಥೆಗಳು, ಅವ್ಯವಸ್ಥೆಗಳಾಗಿವೆ. ಇದನ್ನು ಏನಾದರೂ ತನಿಖೆ ಮಾಡತಕ್ಕದ್ದು ಇದೆಯಾ? ತನಿಖೆ ಮಾಡುವುದಕ್ಕೆ ಯಾರಿಗೆ ಅಧಿಕಾರ ಇದೆ? ಜಿಲ್ಲೆಯ ವ್ಯಾಪ್ತಿಯಲ್ಲಿ ತನಿಖೆ ಮಾಡಿಸುತ್ತೀರಾ? ರಾಜ್ಯದ ವ್ಯಾಪ್ತಿಯಲ್ಲಿ ತನಿಖೆ ಮಾಡಿಸುತ್ತೀರಾ? ಈ ತನಿಖೆ ಮಾಡತಕ್ಕಂಥ ವ್ಯವಸ್ಥೆ ಮಾಡಬೇಕು. ಹಾಗೂ ಈ ಜನಕ್ಕೆ, ಆ ಜನಗಳಿಗಾಗಿ ಇಟ್ಟಿರತಕ್ಕಂಥ ಹಣ ಸಮರ್ಪಕವಾಗಿ ಉಪಯೋಗ ಆಗಬೇಕು. ಆ ಜನಗಳಿಗೆ ಅನುಕೂಲ ಆಗಬೇಕು ಎನ್ನತಕ್ಕದ್ದು ನನ್ನ ಇಚ್ಛೆ. ಹಾಗಾಗಿ ಅದನ್ನು ತಾವು ಮಾಡಬೇಕು. ಏಕೆಂದರೆ ಅದಕ್ಕೆ ತಾವು ಸಮರ್ಥರು ಇದ್ದೀರಿ-ಎಂದು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಹಾಗೆಯೇ ಎಸ್.ಸಿ.ಎಸ್.ಟಿ. ಕಾರ್ಪೊರೇಷನ್‌ನಿಂದ ನಾವು ಅನೇಕ ಯೋಜನೆಗಳನ್ನು ಇಟ್ಟು ಅವರಿಗೆ ಎತ್ತಿನ ಗಾಡಿಯನ್ನು ಕೊಡಿಸುವುದು ಇರಬಹುದು, ಟ್ರ್ಯಾಕ್ಟರ್ ಕೊಡಿಸುವುದು ಇರಬಹುದು ಅಥವಾ ಆಟೋರಿಕ್ಷಾ ಕೊಡಿಸುವುದು ಇರಬಹುದು. ಅದರ ಜೊತೆಯಲ್ಲಿ ಹರಿಜನ ಗಿರಿಜನರಿಗೆ ಎರಡು ಎಕರೆಯೊಳಗೆ ಜಮೀನನ್ನು ಕೊಂಡುಕೊಳ್ಳಲು ಎಕರೆಗೆ 25 ಸಾವಿರ ರೂ.ಗಳಂತೆ 50 ಸಾವಿರ ರೂ.ಗಳನ್ನು ಕೊಡಲಾಗುತ್ತಿದೆ. ಆದರೆ ಕೆಲವು ಕಡೆ 25 ಸಾವಿರ ರೂ.ಗಳಿಗೆ ಒಂದು ಜಮೀನು ಸಿಗುವುದಿಲ್ಲ, ಕೆಲವು ಕಡೆ ಸಿಗುತ್ತದೆ. ಎಲ್ಲಿ ಸಿಗುವುದಿಲ್ಲ ಅಂತಹ ಕಡೆ ಅನುಕೂಲಸ್ಥರು ದುಡ್ಡು ಹಾಕಿ ತೆಗೆದುಕೊಳ್ಳುತ್ತಾರೆ, ಬಡವನಿಗೆ ಆ ರೀತಿ ಮಾಡುವುದಕ್ಕೆ

ಆಗುವುದಿಲ್ಲ. ಬಡವನಿಗೆ ಸಿಗತಕ್ಕ ವ್ಯವಸ್ಥೆಯನ್ನು ಮಾಡತಕ್ಕ ಒಂದು ಯೋಜನೆಯನ್ನು ತಾವು ತಯಾರು ಮಾಡಬೇಕು. ಬಡವನ ಕೈಗೆ ಭೂಮಿಯಾದರೂ ಸಿಕ್ಕಿದರೆ ಅವನು ತನ್ನ ಎರಡು ಹೊತ್ತಿನ ಊಟಕ್ಕಾದರೂ ಸೃಷ್ಟಿ ಮಾಡಿಕೊಳ್ಳತಕ್ಕ, ದುಡಿಯತಕ್ಕ ಒಂದು ಮೂಲ ಬಂಡವಾಳ ಅವನಿಗೆ ಸಿಕ್ಕಂತಾಗುತ್ತದೆ. ಆ ಯೋಜನೆ ಸಮರ್ಪಕವಾಗಿ ಜಾರಿಗೆ ಬರುವ ರೀತಿಯಲ್ಲಿ ಹಾಗೂ ಆ ಹಣದ ಲಾಭ ಯಾರಿಗೆ ಸಿಗಬೇಕೋ ಅಂತಹವರಿಗೆ ಸಿಗುವ ರೀತಿಯಲ್ಲಿ ತಾವು ಅದನ್ನು ಪರಿಶೀಲನೆ ಮಾಡಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಹಾಗೆಯೇ ನಗರಸಭೆಗಳಲ್ಲೂ ಸಹಿತ ಶೇಕಡ 18 ರಷ್ಟು ಹಣ ಇದೆ. ಆ ಹಣವನ್ನು ನಗರಸಭೆಗಳಲ್ಲಿ ಯಾವ ರೀತಿ ಖರ್ಚು ಮಾಡುತ್ತಿದ್ದಾರೆ, ಅಥವಾ ಖರ್ಚು ಮಾಡುತ್ತಿಲ್ಲ ಎಂಬುದನ್ನೂ ಕೂಡ ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಪರಿಶೀಲಿಸಬೇಕು. ಅಲ್ಲೂ ಸಹಿತ ಮನೆಗಳಿಗೆ ದೀಪ ಹಾಕುವುದಾಗಲೀ, ಕಕ್ಕಸುಗಳನ್ನು ಕಟ್ಟಿಸಿಕೊಡುವುದಾಗಲೀ ಅಥವಾ ಮನೆಗಳನ್ನು ಕಟ್ಟಿಸಿಕೊಡುವ ಯೋಜನೆಯಾಗಲೀ, ಆ ಯಾವ ಯೋಜನೆಗಳನ್ನೂ ಸಹಿತ ಕಾರ್ಯಗತ ಮಾಡುತ್ತಿಲ್ಲ. ನಿಮ್ಮ ಇಲಾಖೆಯಿಂದ ಯಾವ್ಯಾವ ಯೋಜನೆಗಳಲ್ಲಿ ಏನೇನು ಮಾಡಬೇಕು? ಏನೇನು ಮಾಡಿದ್ದೀರಿ ಎಂಬ ಬಗ್ಗೆ ಸ್ಥಳೀಯ ಸಂಸ್ಥೆಗಳಿಗೆ, ಅದು ನಗರ ಸಭೆ ಇರಬಹುದು, ಪುರಸಭೆ ಇರಬಹುದು ಟೌನ್ ಪಂಚಾಯತಿ ಇರಬಹುದು, ಮಾರ್ಗದರ್ಶನವನ್ನು ಮಾಡಬೇಕು. ಆ ರೀತಿಯ ಮಾರ್ಗದರ್ಶನದ ಮೂಲಕ ಸಮರ್ಪಕವಾದ...

ಶ್ರೀ **ಕಾಗೋಡು ತಿಮ್ಮಪ್ಪ**:- ಮಾನ್ಯ ಅಧ್ಯಕ್ಷರೇ, ಈಗಿರತಕ್ಕ ಕಾರ್ಯಕ್ರಮ ಪರಿಣಾಮಕಾರಿಯಾಗಿ ಜಾರಿಯಾಗಿಲ್ಲ ಎನ್ನುವುದಾದರೆ ಆ ವರ್ಗದಿಂದಲೇ ಬಂದಿರುವಂತಹ ಅವರು, ನಮ್ಮ ಕಾರ್ಯಕ್ರಮಗಳನ್ನು ಸಮರ್ಪಕವಾಗಿ ಜಾರಿಗೆ ತರುವುದಕ್ಕಾಗಿ ಯಾವ ರೀತಿಯಲ್ಲಿ ಪರಿವರ್ತನೆ ಮಾಡಿಕೊಳ್ಳಬೇಕು ಎಂಬ ಬಗ್ಗೆ ಸ್ವಲ್ಪ ತಿಳಿಸಿ ಹೇಳಿದರೆ ಒಳ್ಳೆಯದು. ನಾವು ಆಗ ಆ ರೀತಿಯಲ್ಲಿ ಕಾರ್ಯಕ್ರಮಗಳನ್ನು ಜಾರಿಗೊಳಿಸಬಹುದು. ಆ ವರ್ಗದಿಂದ ಬಂದವರಿಂದಲೇ ಇದರ ಬಗ್ಗೆ ಅಭಿಪ್ರಾಯಗಳು ಮೂಡಿಬಂದರೆ ಬಹಳ ಒಳ್ಳೆಯದು ಎಂಬುದು ನನ್ನ ಅಭಿಪ್ರಾಯವಾಗಿದೆ. ಮಾನ್ಯ ಸದಸ್ಯರಿಗೆ ಈ ದಿಸೆಯಲ್ಲಿ ಬಹಳ ಅನುಭವ ಇದೆ.

ಶ್ರೀ ಕರಿಯಣ್ಣ:- ಮಾನ್ಯ ಮಂತ್ರಿಗಳು ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದಾರೆ. ವಿದ್ಯಾವಂತ ಯುವಕರುಗಳಿಗೆ ಅವರು ಬದುಕುವುದಕ್ಕೆ ದಾರಿಯನ್ನು ಸೃಷ್ಟಿಸಿಕೊಳ್ಳುವ ಸಲುವಾಗಿ ಎಸ್.ಸಿ.: ಎಸ್.ಟಿ. ಕಾರ್ಪೊರೇಷನ್ ಮೂಲಕ 'ಜಾಬ್‌ಓರಿಯೆಂಟೆಡ್' ಅಂದರೆ ಉದ್ಯೋಗಗಳು ಸಿಗುವಂತಹ ತರಬೇತಿಯನ್ನು ಕೊಡಬೇಕು. ಅವರಿಗೆ ತರಬೇತಿ ಕೊಟ್ಟ ಮೇಲೆ, ಅವರು ಯಾವ ಯಾವ ತರಬೇತಿಗಳನ್ನು ಮಾಡಿಕೊಂಡಿರುತ್ತಾರೋ, ಅದು ಆಟೋರಿಕ್ಷಾ ಓಡಿಸುವುದು ಇರಬಹುದು, ಟ್ಯಾಕ್ಸಿ

ಓಡಿಸುವುದು ಇರಬಹುದು, ಬಸ್ಸು-ಲಾರಿ ಓಡಿಸತಕ್ಕದ್ದು ಇರಬಹುದು, ಕುಲುಮೆ ಕೆಲಸ ಮಾಡತಕ್ಕದ್ದು ಇರಬಹುದು, ಚಪ್ಪಲಿ ಹೊಲೆಯುವ ಕೆಲಸ ಇರಬಹುದು, ಆ ತರಬೇತಿ ಹೊಂದಿದ ಉದ್ಯೋಗಕ್ಕೆ ಬೇಕಾಗುವ ಪರಿಪೂರ್ಣ ಕಿಟ್ ಅನ್ನು ಸರ್ಕಾರ ಅವರಿಗೆ ಒದಗಿಸಬೇಕು ಅಥವಾ ಸಂಪೂರ್ಣ ಆರ್ಥಿಕ ಸಹಾಯವನ್ನಾದರೂ ಮಾಡಬೇಕು. ಸರ್ಕಾರ ಇಷ್ಟನ್ನು ಮಾಡಿದಲ್ಲಿ ಮಾತ್ರ ಕಡೇ ಪಕ್ಷ ಅವರು ದುಡ್ಡು ಕೊಟ್ಟಿದ್ದಕ್ಕೂ ಸಾರ್ಥಕವಾಗುತ್ತದೆ. ಆ ದುಡ್ಡು ಅವನಿಗೆ ದಕ್ಕುತ್ತದೆ. ಇತ್ತೀಚೆಗೆ ಮಾಡಿರತಕ್ಕ ಕಾರ್ಯಕ್ರಮ ಯಾವ ರೀತಿ ಇದೆ ಎಂದರೆ ನೀವು ಯಾವುದೋ ಒಂದು ಬ್ಯಾಂಕಿಗೆ ಸಬ್ಸಿಡಿ ಹಣ ಅಥವಾ ಒಂದಿಷ್ಟು ಹಣ ಕೊಡುತ್ತೀರಿ, ಬ್ಯಾಂಕಿನವರಿಗೆ ಶೇಕಡ 40-60ರಷ್ಟು ಸಾಲ ಕೊಡಿ ಎಂದು ಹೇಳುತ್ತೀರಿ. ಆದರೆ ಆ ಬ್ಯಾಂಕಿನವರು ಸಾಲ ಕೊಡುವುದಿಲ್ಲ. ಕೆಲವರಿಗೆ ಕೊಡುತ್ತಾರೆ, ಕೆಲವರಿಗೆ ಕೊಡುವುದಿಲ್ಲ. ಬ್ಯಾಂಕಿನವರು ಜಾಮೀನು ಕೊಡಬೇಕೆಂದು ಹೇಳುತ್ತಾರೆ. ಇದರಿಂದಾಗಿ ನಮ್ಮಲ್ಲಿ ಯಾರು ಉದ್ಯೋಗಕ್ಕೆ ಅರ್ಹವಾಗಿರುವಂತಹ ತರಬೇತಿಗಳನ್ನು ಹೊಂದಿರುತ್ತಾನೋ ಅವನಿಗೆ ಸಾಲ ಸಿಗುವುದಿಲ್ಲ. ಈ ಯೋಜನೆಯ ಲಾಭ ಅವನಿಗೆ ದೊರೆಯುವುದಿಲ್ಲ. ಇಂತಹ ಪರಿಸ್ಥಿತಿ ಇವತ್ತು ಇದೆ. ನೀವು 25 ಜನಕ್ಕೆ ಸಾಲ ಕೊಡುವ ಕಡೆ ಕನಿಷ್ಟ 11 ಜನಕ್ಕಾದರೂ ಕೊಡಿ ಪರವಾಗಿಲ್ಲ. ಇದರಿಂದಾಗಿ ಅವನು ತನ್ನ ಉದ್ಯೋಗವನ್ನು ಸೃಷ್ಟಿಸಿಕೊಂಡು ಜೀವನ ಮಾಡತಕ್ಕ ಪರಿಸ್ಥಿತಿಗೆ ಬರುತ್ತಾನೆ. ಹೀಗಾದಲ್ಲಿ ಮಾತ್ರ ಈ ಯೋಜನೆಗೆ ನೀವು ಒಂದು ರೂಪ ಕೊಟ್ಟಂತಾಗುತ್ತದೆ. ಇಲ್ಲದಿದ್ದರೆ ಬಜೆಟ್‌ನಲ್ಲಿ ಇಟ್ಟಂತಹ ಹಣ ಕೇವಲ ಸಹಾಯಧನವಾಗಿ ಉಳಿದು ಮಧ್ಯವರ್ತಿಗಳ ಪಾಲಾಗುತ್ತದೆ. ಹರಿಜನ ಗಿರಿಜನರಿಗೆ ಬಜೆಟ್‌ನಲ್ಲಿ ಇಟ್ಟಂತಹ ಹಣವನ್ನು ಕೊಟ್ಟಿದ್ದರೂ ಸಹಿತ ಅವರ ಉದ್ಧಾರವಾಗಲಿಲ್ಲ. ಎನ್ನುವ ಅಪಪ್ರಚಾರಕ್ಕೆ ಸಹಿತ ಗುರಿಯಾಗಬೇಕಾಗುತ್ತದೆ ವಿನಃ ಬೇರೆ ಇನ್ನೇನೂ ಆಗುವುದಿಲ್ಲ. ಅದೇ ರೀತಿಯಲ್ಲಿ ಮಾನ್ಯ ಸಮಾಜಕಲ್ಯಾಣ ಮಂತ್ರಿಗಳಾದ ತಾವು ಮತ್ತೊಂದು ವಿಷಯದ ಬಗ್ಗೆ ಗಮನ ಹರಿಸಬೇಕು. ನಗರಸಭೆಗಳಲ್ಲಿ ಯಾರೂ ಮಾಡಬಾರದಂತಹ ಅನಿಷ್ಟ ಕೆಲಸಗಳನ್ನು ಅಂದರೆ ಅಲ್ಲಿ ಕಸ ಗುಡಿಸುವುದು ಇರಬಹುದು, ಚರಂಡಿ ಸ್ವಚ್ಛ ಮಾಡುವುದು ಇರಬಹುದು, ಕಕ್ಕಸ್ಸು ತೊಳೆಯುವುದು ಇರಬಹುದು, ಮಲ ತಲೆಮೇಲೆ ಹೊರುವುದು ಇರಬಹುದು, ಇಂತಹವುಗಳನ್ನೆಲ್ಲಾ ಅಲ್ಲಿ ಇವತ್ತು ಹರಿಜನ ಗಿರಿಜನರೇ ಮಾಡುತ್ತಿದ್ದಾರೆ. ಈ ಜನಾಂಗದವರ ಅಭಿವೃದ್ಧಿಗಾಗಿ ಹಿಂದೆ ಮಾನ್ಯ ಡಿ.ದೇವರಾಜ್ ಅರಸ್‌ರವರ ಕಾಲದಲ್ಲಿ, ದಿವಂಗತ ಐ.ಪಿ.ಡಿ. ಸಾಲಪ್ಪನವರು ಅಧ್ಯಕ್ಷತೆಯ ಒಂದು ಸಮಿತಿ ಮಾಡಿದ ಶಿಫಾರಸ್ಸುಗಳ ಆಧಾರದ ಮೇಲೆ ಅವರಿಗೆ ಅನೇಕ ಸವಲತ್ತುಗಳನ್ನು ಕಲ್ಪಿಸಿ ಕೊಡಲಾಗಿತ್ತು. ನಮ್ಮಲ್ಲಿ ಸುಮಾರು ಮೂರು ಲಕ್ಷ ಜನ ಪೌರ ಕಾರ್ಮಿಕರಿದ್ದಾರೆ. ಅಂತಹವರ ಅಭಿವೃದ್ಧಿಗಾಗಿ ಕೊಟ್ಟಂತಹ ವರದಿ ಇಂದು ಜಾರಿಯಾಗುತ್ತಿಲ್ಲ, ಅದು ಮಾನ್ಯ ದೇವರಾಜ್ ಅರಸ್‌ರವರ ಕಾಲದಲ್ಲಿ ಜಾರಿಯಲ್ಲಿತ್ತು. ಹಿಂದೆ ಅವರಿಗೆ ಖಾಯಂ ಉದ್ಯೋಗಗಳನ್ನು ಕೊಟ್ಟು ಅವರು ನಿವೃತ್ತರಾದ

ನಂತರ ಅವರಿಗೆ ಪಿಂಚಣಿ ಸಿಗುವ ವ್ಯವಸ್ಥೆ ಮಾಡಲಾಗಿತ್ತು. ಅವರು ಸೇವೆಯಲ್ಲಿದ್ದಾಗ ರೋಗ-ರುಜಿನಗಳು ಬಂದರೆ ಅವರಿಗೆ ಔಷಧೋಪಚಾರಗಳನ್ನೂ ಕೂಡ ಕೊಡುವ ವ್ಯವಸ್ಥೆ ಹಿಂದೆ ಇತ್ತು. ಆದರೆ ಇತ್ತೀಚೆಗೆ ಕೇವಲ 700-800 ರೂ.ಗಳಿಗೆ ಕಾಂಟ್ರಾಕ್ಟ್ ಮೇಲೆ ನೇಮಿಸಿಕೊಂಡು ಅವರಿಂದ ಚರಂಡಿ ಹೂಳು ತೆಗೆಸುವುದು, ಕಸ ತೆಗೆಸುವುದು, ಹೇಸಿಗೆ ತುಂಬಿಸತಕ್ಕಂತಹ ಕೆಲಸಗಳನ್ನು ಮಾಡಿಸುತ್ತಿದ್ದಾರೆ. ಹೀಗಾದರೆ ಅವರು ಹೇಗೆ ಬದುಕಬೇಕು?ಇವತ್ತು ಅವರು ರಿಟೈರ್ ಆದರೆ ಅವರಿಗೆ ಪಿಂಚಣಿ ಇಲ್ಲ, ಅವರು ಬಟ್ಟೆ ತೊಳೆದುಕೊಳ್ಳುವುಕ್ಕೆ ಸೋಪ್‌ಕೊಡುವ ವ್ಯವಸ್ಥೆ ಇಲ್ಲ, ಸ್ನಾನ ಮಾಡಲು ನೀರು ಕೊಡುವ ವ್ಯವಸ್ಥೆ ಇಲ್ಲ. ಅವರಿಗೆ ನಿವೇಶನ ಕೊಡತಕ್ಕ ಯೋಜನೆಯೂ ಕೂಡ ಇಲ್ಲ. ಇದರ ಬಗ್ಗೆ ತಾವು ಒಂದು ಯೋಚನೆಯನ್ನು ಮಾಡಬೇಕಾಗುತ್ತದೆ. ಇವತ್ತು ಪೌರ ಕಾರ್ಮಿಕರಿಗೆ ನಿವೇಶನ ಕೊಡತಕ್ಕ ನಿಯಮ ಇಲ್ಲ, ಕಾರಣ ಅವರಿಗೆ ಎರಡು ಸಾವಿರ ರೂ.ಗಳ ಸಂಬಳ ಬರುತ್ತದೆ ಎನ್ನುವುದೇ ಆಗಿದೆ. ನೀವು ಇನ್‌ಕಂ ಸರ್ಟಿಫಿಕೇಟ್ ತೆಗೆದುಕೊಂಡು ಬನ್ನಿ, ನಿಮಗೆ ನಿವೇಶನ ಕೊಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಾರೆ. ಹಾಗಾದರೆ ಅವರ ಪರಿಸ್ಥಿತಿ ಯಾವ ಹಂತಕ್ಕೆ ಹೋಗುತ್ತದೆ ಎಂಬುದನ್ನು ಮಾನ್ಯ ಮಂತ್ರಿಗಳು ಯೋಚಿಸಬೇಕು. ಇದು ನಿಮ್ಮ ಖಾತೆಯ ವ್ಯಾಪ್ತಿಗೆ ಬರದಿದ್ದರೂ ಕೂಡ ಈ ಒಂದು ಸಮಾಜದ ಕಲ್ಯಾಣದ ಕೆಲಸ ತಮ್ಮಿಂದಲೇ ಇವತ್ತು ಆಗಬೇಕಾಗಿದೆ. ಇದರ ಬಗ್ಗೆ ತಾವು ಗಮನ ಹರಿಸಬೇಕು. ಈ ಶೋಷಣೆಯನ್ನು ತಪ್ಪಿಸಬೇಕು. ಈ ಕಾಂಟ್ರಾಕ್ಟ್ ಪದ್ಧತಿಯನ್ನು ನಿಲ್ಲಿಸಿ, ಖಾಯಂ ಉದ್ಯೋಗಗಳನ್ನು ಸೃಷ್ಟಿಸಿ ಅವರ ಬದುಕಿಗೆ ಒಂದು ವ್ಯವಸ್ಥೆ ಮಾಡಿ ಕೊಡಬೇಕೆಂದು ನಾನು ಅಧ್ಯಕ್ಷರ ಮೂಲಕ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಆಗಲೇ ಮಾನ್ಯ ಸಿಂಧ್ಯಾರವರು ಹೇಳಿದಂತೆ ನಾವು ಅಧಿಕಾರಕ್ಕೆ ಬರಬೇಕಾದರೆ ಗರೀಬಿ ಹಟಾವೋ ಮಾಡುತ್ತೇವೆ ಎಂದು ಹೇಳಿಕೊಂಡು ಬಂದಿದ್ದೇವೆ, ಹಿಂದುಳಿದ ವರ್ಗದವರಿಗೆ ಸಹಾಯ ಮಾಡುತ್ತೇವೆ ಎಂದು ಹೇಳಿಕೊಂಡು ಬಂದಿದ್ದೇವೆ. ಆದುದರಿಂದ ಇವತ್ತು ಅವರ ಬಗ್ಗೆ ಚಿಂತನೆ ಮಾಡದಿದ್ದರೆ, ಮಾನ್ಯ ಮಂತ್ರಿಗಳ ಗಮನಕ್ಕೆ ಈ ವಿಷಯಗಳನ್ನು ನಾನು ತರದಿದ್ದರೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಮಾನ್ಯ ಮಂತ್ರಿಗಳಿಗೆ ಗೊತ್ತಿರತಕ್ಕ ವಿಚಾರಗಳಿದ್ದರೂ ಸಹಾ ನಾವು ಈ ಸಂದರ್ಭಗಳಲ್ಲಿ ಅವುಗಳನ್ನು ಮಾನ್ಯ ಸಚಿವರ ಗಮನಕ್ಕೆ ತರಬೇಕಾಗುತ್ತದೆ. ತನ್ಮೂಲಕ ಸಮಾಜದಲ್ಲಿರುವ ಅಸಮಾನತೆಯನ್ನು ಹೋಗಲಾಡಿಸಲು ಇದರಿಂದ ಸಾಧ್ಯವಾಗುತ್ತದೆ. ನಾನು ಇವತ್ತು ಇಲ್ಲಿ ಬಿಳಿ ಬಟ್ಟೆ ಹಾಕಿಕೊಂಡು ಬಂದಿರಬಹುದು, ಮಾನ್ಯ ಖರ್ಗೆಯವರು ಬಿಳಿ ಬಟ್ಟೆ ಹಾಕಿಕೊಂಡು ಬಂದಿರಬಹುದು, ಗೆದ್ದಿರುವವರು ಈ ಸದನದಲ್ಲಿ ಇರಬಹುದು, ಆದರೆ ನಾವು ಹಳ್ಳಿಗಳಿಗೆ ಹೋಗಿ ನೋಡಿದಾಗ ಈ ಜನಾಂಗದವರು ಇನ್ನೂ ಕಟ್ಟಿಗೆ ಬಾಗಿಲಿನ ಹುಲ್ಲು ಗುಡಿಸಲುಗಳಲ್ಲೇ ಇರುವುದನ್ನು ಕಾಣಬಹುದು. ಇವತ್ತಿಗೂ ಸಹಿತ ಅಸ್ಪೃಶ್ಯತೆಯನ್ನು ಕೆಲವೆಡೆ ಪಾಲಿಸಲಾಗುತ್ತಿದೆ. ಇವತ್ತು ಕೆಲವು ಗ್ರಾಮಗಳಲ್ಲಿ

ಹೋಟೆಲ್‌ಗಳಿಗೂ ಕೂಡ ಸೇರಿಸುವುದು ಇಲ್ಲ. ಸಮಾಜದಲ್ಲಿ ಅಸಮಾನತೆ ಇರುವುದರಿಂದ ನಾವು ಆರ್ಥಿಕವಾಗಿ ಮುಂದೆ ಬರುವುದಕ್ಕಾಗಿಲ್ಲ; ಯಾವುದೇ ಸ್ವಯಂ ಉದ್ಯೋಗಗಳನ್ನು ಸೃಷ್ಟಿ ಮಾಡಿಕೊಳ್ಳುವುದಕ್ಕೆ ಆಗಿಲ್ಲ. ಹೋಟೆಲ್‌ನಲ್ಲಿ ಸಪ್ಲೈಯರ್ ಕೆಲಸಕ್ಕೆ ಈ ಜನಾಂಗದವರನ್ನು ನೇಮಿಸಿಕೊಂಡರೂ ಸಹಿತ ಆ ಹೋಟೆಲ್‌ಗೆ ಯಾರೂ ಹೋಗದಂತಹ ಪರಿಸ್ಥಿತಿ ಕೆಲವೆಡೆ ಇದೆ. ಆದುದರಿಂದ ತಾವುಗಳು ಈ ಜನಾಂಗದವರ ಅಭಿವೃದ್ಧಿಗಾಗಿ ಒಂದು ವಿಶೇಷವಾದಂತಹ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಕೇಂದ್ರ ಸರ್ಕಾರದವರು ಸಫಾಯಿ ಕರ್ಮಚಾರಿಗಳಿಗೆ ಎಂದು ಆಯೋಗವೊಂದನ್ನು ಮಾಡಿದ್ದಾರೆ. ಹಿಂದೆ ಮಾನ್ಯ ಸಾಲಪ್ಪನವರು, ಮಾನ್ಯ ಮುನಿಯಪ್ಪನವರು ಅದರ ಅಧ್ಯಕ್ಷರಾಗಿದ್ದರು. ಈಗ ಬೇರೆ ಯಾರನ್ನೋ ಆ ಆಯೋಗಕ್ಕೆ ನೇಮಿಸುವ ಕೆಲಸ ನಡೆಯುತ್ತಿದೆ. ಅದನ್ನು ತಾವು ಮುಂದುವರೆಸಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಇದರ ಜೊತೆಯಲ್ಲಿ ಸಮಾಜ ಕಲ್ಯಾಣ ಇಲಾಖೆಗೆ ತಾವು ಹೆಚ್ಚಿನ ಅಧಿಕಾರವನ್ನು ನೀಡಬೇಕು, ಒಂದು ಮನೆ ಸುಟ್ಟು ಹೋದರೆ ಅವರು ನೋಡಿಕೊಂಡು ಬಂದು ಸ್ವತಃ 500 ರಿಂದ ಸಾವಿರ ಅಥವಾ 2,000 ರೂಪಾಯಿ ಕೊಡುವುದಕ್ಕೆ ಅಧಿಕಾರ ಕೊಡಬೇಕಾಗುತ್ತದೆ; ಕೊಡದೆ ಇದ್ದರೆ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಏಕೆ ಇರಬೇಕು? ಅದು ಏನಾಯಿತು, ಈಗ ಜಿಲ್ಲಾಪರಿಷತ್ ಚೀಫ್ ಸೆಕ್ರೆಟರಿಗೆ, ಜಿಲ್ಲಾಪರಿಷತ್ ಸೆಕ್ರೆಟರಿಗೆ ಈ ಅಧಿಕಾರ ಹೋಗಿ ಬಿಟ್ಟಿದೆ. ಸ್ವತಂತ್ರವಾದ ಅಧಿಕಾರ ಈ ಇಲಾಖೆಗೆ ಬೇಕು. ಇಲ್ಲದಿದ್ದರೆ ನಮ್ಮ ಸಮಾಜಕಲ್ಯಾಣ ಇಲಾಖೆಯ ಹೆಸರಿನ ಮೇಲೆ ಅವರು ಸಂಬಳ ತೆಗೆದುಕೊಳ್ಳುವುದು ಬೇಡ. ಯಾವುದಾದರೂ ಒಂದು ಇಲಾಖೆ ಎಂದು ನೀವು ಹೆಸರು ಇಟ್ಟು ಬಿಡಿ. ನಮ್ಮ ಹೆಸರಿನಲ್ಲಿ ಮಾತ್ರ ಆ ಹಣ ಖರ್ಚು ಮಾಡುವುದು ಬೇಕಾಗಿಲ್ಲ ಎನ್ನುವುದು ನನ್ನ ಅಭಿಪ್ರಾಯ.

ಇನ್ನು ಸಾರಿಗೆ ಸಂಸ್ಥೆಯಲ್ಲಿ ಕಂಡಕ್ಟರ್ ಇಲ್ಲದ ಬಸ್ ಮಾಡಿದ್ದಾರೆ. ಅದು ಏತಕ್ಕಾಗಿ ಕಂಡಕ್ಟರ್ ಇಲ್ಲದ ಬಸ್ ಮಾಡಿದರು ನನಗೆ ಗೊತ್ತಾಗುತ್ತಿಲ್ಲ. ಅವನಿಗೆ ಸಂಬಳ ಇಲ್ಲದೆ ಸ್ವಲ್ಪ ಉಳಿತಾಯವಾಗಬಹುದು ಎನ್ನುವ ದೃಷ್ಟಿಯಿಂದ ನೀವು ತಂದಿರಬಹುದು. ಉದಾಹರಣೆಗೆ ಶಿವಮೊಗ್ಗಕ್ಕೆ ಹೋಗಬೇಕಾದರೆ ನಮಗೆ ಒಂದು ಎಕ್ಸಪ್ರೆಸ್ ಬಸ್ಸಿಗೆ ಆರು ಗಂಟೆ ಸಾಕಾಗುತ್ತಿತ್ತು. ಇವತ್ತು ಎಂಟುವರೆ ಗಂಟೆ ತೆಗೆದುಕೊಳ್ಳುತ್ತದೆ. ಕಾರಣ ಎಲ್ಲೆಲ್ಲಿ ಕಂಡಕ್ಟರ್ ನಿಂತಿರುತ್ತಾರೆ ಅವನು ಬುಕ್ ಮಾಡಿ ಹೋಗತಕ್ಕಂತಹ ಬಸ್ಸಿನ ಡ್ರೈವರ್‌ಗೆ ಎಂಟ್ರಿ ಮಾಡಿ ಬಾಗಿಲು ಹಾಕಿ ಹತ್ತಿಸಿ ಕಳುಹಿಸಬೇಕು. ಹಾಗಾಗಿ ಎರಡುವರೆ ಗಂಟೆ ಸಮಯ ಹಾಳಾಗುತ್ತಿದೆ. ದಯಮಾಡಿ ಕಂಡಕ್ಟರ್ಸ್ ಇರತಕ್ಕಂತಹ ಬಸ್ಸನ್ನು ಹಾಕುವುದರಿಂದ ನಾವು ಸಕಾಲಕ್ಕೆ ತಲುಪುವುದಕ್ಕೆ ಸಾಧ್ಯವಾಗುತ್ತದೆ. ಅಲ್ಲಲ್ಲಿ ಹತ್ತುವವರಿಂದ ಟಿಕೆಟ್ ತೆಗೆದುಕೊಳ್ಳುವುದರಿಂದ ಸಾರಿಗೆ ಸಂಸ್ಥೆಗೂ ಲಾಭ ಬರುತ್ತದೆ. ಇಲ್ಲದಿದ್ದರೆ ಡ್ರೈವರ್‌ಗೆ ಸಾರ್ವಜನಿಕರು 24 ಗಂಟೆ ಬೈದುಕೊಂಡು ಹೋಗತಕ್ಕಂಥದ್ದಾಗುತ್ತದೆ. ಸಾರ್ವಜನಿಕರು

ಡ್ರೈವರ್‌ಗೆ ಹೊಡೆಯುವ ಪರಿಸ್ಥಿತಿ ಬರುತ್ತದೆ. ದಯಮಾಡಿ ಕಂಡಕ್ಟರನ್ನು ಹಾಕಬೇಕು. ಕಂಡಕ್ಟರ್ ಇಲ್ಲದೆ ಇರತಕ್ಕಂತಹ ಬಸ್ಸಿಗೆ ಕಂಡಕ್ಟರ್ ಹಾಕಿ ಪ್ರಯಾಣಿಕರಿಗೆ ಅನುಕೂಲ ಮಾಡಿಕೊಡಬೇಕು. ಇದರ ಜೊತೆಯಲ್ಲಿ ಬಸ್ ಸ್ಟ್ಯಾಂಡಿನಲ್ಲಿರತಕ್ಕಂತಹ ಮಲ ಮೂತ್ರ ಮಾಡತಕ್ಕಂತಹ ಜಾಗದಲ್ಲಿ ನಾವು ಮೂಗು ಇಟ್ಟುಕೊಂಡು ಹೋಗುವ ಹಾಗಿಲ್ಲ. ಮಾನ್ಯ ಸಾರಿಗೆ ಸಚಿವರು ಅದಕ್ಕೆ ಪ್ರಾಥಮಿಕವಾದ ಆದ್ಯತೆ ಕೊಡಬೇಕು; ಎಲ್ಲೆಲ್ಲಿ ಮೂತ್ರ ವಿಸರ್ಜನೆ ಮಾಡುವ ಜಾಗ ಇದೆ ಅದನ್ನು ಸ್ವಚ್ಛತೆ ಮಾಡಿ ಬಸ್ ಸ್ಟ್ಯಾಂಡಿನಲ್ಲಿ ಎಲ್ಲ ಜನಗಳೂ ಸಹಿತ 'ಪರವಾಗಿಲ್ಲ, ಇಲ್ಲಿ ಮೂತ್ರ ಮಾಡಬಹುದು' ಎಂದು ಹೇಳುವ ಪರಿಸ್ಥಿತಿಯನ್ನು ಜಾರಿಯಲ್ಲಿ ತಂದಾಗ ಮಾತ್ರ ಗೌರವ ಬರುತ್ತದೆ. ಅದನ್ನು ಮಾಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಮಾನ್ಯ ಕಂದಾಯ ಇಲಾಖೆ ಮಂತ್ರಿಗಳಲ್ಲಿ ನನ್ನದೊಂದು ವಿನಂತಿ. ಬಗರ್ ಹುಕುಂ ಸಾಗುವಳಿ ಖಾಯಂ ಮಾಡಬೇಕೆಂದು ನಮ್ಮ ಸರ್ಕಾರ ಇದ್ದಾಗ ಕಾನೂನು ಮಾಡಿದ್ದು, ಮಾನ್ಯ ರೆವಿನ್ಯೂ ಮಂತ್ರಿಗಳು ಆ ಕಾನೂನು ಮಾಡಿದಾಗ ನಗರಕ್ಕೆ ನಾಲ್ಕು ಕಿ.ಮೀ. ಒಳಗೆ ಇರತಕ್ಕಂತಹ ಪ್ರದೇಶವನ್ನು ಖಾಯಂ ಮಾಡಬಾರದು ಎಂದು ಕಾನೂನಿನಲ್ಲಿ ಒಂದು ತೊಡಕು ತಂದಿಟ್ಟಿದೆ. ಆ ರೀತಿ ಮಾಡಿದೆ. ಬಗರ್ ಹುಕುಂ ಮಾಡಿದವರಿಗೆ ನಾವು ಖಾಯಂ ಮಾಡುವುದಕ್ಕೆ ತುಂಬ ಕಷ್ಟವಾಗುತ್ತದೆ. ಅದು ನಾಲ್ಕು ಕಿಮೀ. ಮಧ್ಯದ ಅಥವಾ ಗಡಿಯಿಂದ ನಾಲ್ಕು ಮೀಟರ್ ಎಂಬ ಸ್ಪಷ್ಟವಾದ ನಿರ್ದೇಶನವನ್ನು ಕೊಟ್ಟರೆ ಬಗರ್ ಹುಕುಂ ಸಾಗುವಳಿರಂತೆ ನಾವು ಸಾಗುವಳಿ ಚೀಟಿ ಹಂಚುವುದಕ್ಕೆ ಅನುಕೂಲವಾಗುತ್ತದೆ ಎಂದು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನಿವೇಶನಗಳನ್ನು ಹಂಚಬೇಕಾದರೆ ಡೆವಲಪ್‌ಮೆಂಟ್ ಅಥಾರಿಟಿ ಇರಬಹುದು, ನಗರಸಭೆ ಇರಬಹುದು ಇಲ್ಲಿ ನಿವೇಶನ 100 ಹಂಚಿದರೆ 18 ಮಾತ್ರ ಎಸ್‌ಸಿಎಸ್‌ಟಿಗೆ ಎಂದು ಹೇಳುತ್ತಾರೆ. ಏನೂ ಇಲ್ಲದ ನಿರ್ಗತಿಕರಾಗಿರತಕ್ಕಂಥವರ ಪಾಪುಲೇಷನ್ 25 ಪರ್ಸೆಂಟ್ ಇದೆ. ಸ್ಟೆಟ್ ಮಾತ್ರ 18 ಪರ್ಸೆಂಟ್ ತೆಗೆದುಕೊಳ್ಳಿ ಎಂದು ಹೇಳುತ್ತೀರಿ. ಏನೂ ಇಲ್ಲದ ನಿರ್ಗತಿಕರಾಗಿರುವುದರಿಂದ 50 ಪರ್ಸೆಂಟ್‌ಗೆ ಏರಿಸಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಂಡು, ಇಂದಿರಾ, ಆವಾಸ್, ನೆರಳು ಭಾಗ್ಯ ಮತ್ತು ಡಾ|| ಅಂಬೇಡ್ಕರ್ ಮನೆಗಳನ್ನು ಮುಂದಿನ ದಿನಗಳಲ್ಲಿ ಹೆಚ್ಚಿಗೆ ಮಾಡಬೇಕೆಂದು ಹೇಳಿ ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಂಡು ನನಗೆ ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಜೈಹಿಂದ್.

+ಶ್ರೀ ಪಿ.ಹೆಚ್. ಪೂಜಾರ್ (ಬಾಗಲಕೋಟೆ):- ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಮಾತನಾಡುವುದಕ್ಕೆ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದನೆಗಳನ್ನು ಸಲ್ಲಿಸುತ್ತೇನೆ. ನಾನು ಒಬ್ಬ ಉತ್ತರ

ಕರ್ನಾಟಕದಿಂದ ಬಂದಿರುವಂತಹ ಶಾಸಕನಾಗಿದ್ದೇನೆ. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಒಂದು ಮುಖ್ಯವಾದ ಅಂಶವನ್ನು ಸೇರಿಸಿದ್ದು, ನನಗೆ ಅತೀವ ಸಂತೋಷ ತಂದಿದೆ. ಈ ಸರ್ಕಾರಕ್ಕೆ ಹಲವಾರು ವರ್ಷಗಳಿಂದ ಪ್ರಾದೇಶಿಕ ತಾರತಮ್ಯಯವಾಗಿದೆ ಎನ್ನುವಂತಹ ಒಂದು ವಿಚಾರಗೋಚರವಾದುದು ಅಷ್ಟೇ ಆಶ್ಚರ್ಯ ಕೂಡ ತಂದಿದೆ. ಸ್ವಾಂತಂತ್ರ್ಯ ನಂತರದ ಈ 45 ವರ್ಷಗಳವರಿಗೆ ಆಡಳಿತ ನಡೆಸಿದಂತಹ ಕಾಂಗ್ರೆಸ್ ಇವತ್ತು ಸರ್ಕಾರ ನಡೆಸುತ್ತಿರುವಂತಹ ಆ ಪಕ್ಷ ಇದರ ಬಗ್ಗೆ ಕೊನೆಗಾದರೂ ಗಮನ ಹರಿಸುತ್ತಿದೆ ಎಂದು ನಿಜವಾಗಿ ಆ ಭಾಗದ ಜನರಿಗೆ ಬಹಳ ಸಂತೋಷವಾಗಿದೆ. ಮಾನ್ಯ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯ ಮಂಡಿಸುವ ಸಂದರ್ಭದಲ್ಲಿ ಸ್ನೇಹಿತರಾದ ಮಾನ್ಯ ನಂಜಯ್ಯನಮಠರವರು ಈ ತಾರತಮ್ಯದ ಕುರಿತಂತೆ ಸುಧೀರ್ಘವಾಗಿ ಸದನದ ಗಮನವನ್ನು ಸೆಳೆದರು. ಅನೇಕ ಕ್ಷೇತ್ರಗಳಲ್ಲಿ ಸಾಮಾಜಿಕ, ರಾಜಕೀಯ, ಧಾರ್ಮಿಕ ಮತ್ತು ಶೈಕ್ಷಣಿಕ ಈ ಎಲ್ಲ ಕ್ಷೇತ್ರಗಳಲ್ಲೂ ಕೂಡ ಉತ್ತರ ಕರ್ನಾಟಕದ ಜನ ಹಿಂದುಳಿದಿದ್ದಾರೆ. ಪ್ರಾದೇಶಿಕ ಅಸಮತೋಲನದಿಂದ ಇವತ್ತು ಅವರು ಬಳಲುತ್ತಿದ್ದಾರೆ. ಕುಡಿಯುವ ನೀರು, ರಸ್ತೆ, ವಸತಿ ನಾಗರೀಕ ಮತ್ತು ಎಲ್ಲಿ ಮೂಲಭೂತ ಸೌಲಭ್ಯಗಳಿಂದ ಇವತ್ತು ವಂಚಿತರಾಗಿ ಈ ಸ್ವಾತಂತ್ರ್ಯ ನಂತರದ 50 ವರ್ಷಗಳನ್ನು ಅವರು ಕಳೆದಿದ್ದಾರೆ. ಇವತ್ತು ಈ ಸರ್ಕಾರ ಈ ನಿಟ್ಟಿನಲ್ಲಿ ಒಂದು ಚಿಂತನೆ ಮಾಡುತ್ತಿರುವುದು ಸ್ವಾಗತ. ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಈ ನಿಟ್ಟಿನಲ್ಲಿ ಚಿಂತನೆ ಪ್ರಾರಂಭವಾಗಿ ಈ ಮಾನ್ಯರಾಜ್ಯಪಾಲರ ಭಾಷಣದಲ್ಲಿ ಬಹಳ ಮುಖ್ಯವಾದ ಈ ಅಂಶವನ್ನು ಸೇರಿಸಿದ್ದು ನಮಗೆಲ್ಲರಿಗೂ ಸಂತೋಷ ತಂದಿದೆ. ಆ ಭಾಗದ ಜನರ ಪರವಾಗಿ ಈ ಸರ್ಕಾರಕ್ಕೆ ನಾನು ಅಭಿನಂದನೆ ಸಲ್ಲಿಸುತ್ತೇನೆ.

ಪರಿಶಿಷ್ಟ ಜನತೆ ಅಭಿವೃದ್ಧಿ ಕುರಿತಂತೆ ಈ ಸರ್ಕಾರ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ ಎಂದು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಹೇಳಿದರು. ನನಗೆ ಒಂದು ಸಂಶಯ ಕಾಡುತ್ತಿದೆ. ಇತ್ತೀಚಿಗೆ ಕೇಂದ್ರ ಸರ್ಕಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸರ್ಕಾರಿ ಸೇವೆಯಲ್ಲಿ ಇನ್ನು 10 ವರ್ಷಗಳವರೆಗೆ ಆ ರಕ್ಷೆಯನ್ನು ಮುಂದುವರೆಸಿ ತೀರ್ಮಾನ ತೆಗೆದುಕೊಂಡಿದೆ. ಕನಿಷ್ಟಪಕ್ಷ ಸೌಜನ್ಯಕ್ಕಾಗಿಯಾದರೂ ಅವರು ಸ್ವಾಗತಿಸಲಿಲ್ಲ. ಕೇಂದ್ರ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸುವಂತಹ ಒಂದು ಔಚಿತ್ಯ, ಸಜ್ಜನಿಕೆ ಕೂಡ ಈ ಸರ್ಕಾರ ತೋರಲಿಲ್ಲ. ನಿಜವಾಗಿ ಇದು ವಿಷಾದನೀಯ. ಇಂತಹ ತಪ್ಪು ಆಗಿದ್ದಕ್ಕೆ ಸರ್ಕಾರ, ಮಾನ್ಯ ಮುಖ್ಯಮಂತ್ರಿಗಳು ಮತ್ತು ಸದಸ್ಯರು ಜವಾಬ್ದಾರಿ ವಹಿಸಬೇಕು ಎನ್ನುವ ವಿಚಾರ ನಾನು ಇಟ್ಟುಕೊಂಡಿದ್ದೇನೆ.

ಇನ್ನು ಕಾವೇರಿ ಮತ್ತು ಕೃಷ್ಣ ನದಿ ಕಣಿವೆ ಪ್ರದೇಶದ ರೈತರ ಹಿತಾಸಕ್ತಿಗಳನ್ನು ನಮ್ಮ ಸರ್ಕಾರ ಸಂಪೂರ್ಣವಾಗಿ ರಕ್ಷಿಸುತ್ತದೆ ಎನ್ನುವ ವಿಚಾರ ಮಾನ್ಯ ರಾಜ್ಯಪಾಲರು ಹೇಳಿದರು. ಅವರು ಹೇಳಿದ ಕಾಂಟೆಸ್ಟ್ ಆದರೂ ಏನು? ನೆರೆ ರಾಜ್ಯದ ಜೊತೆಗೆ ನೀರಿನ

ಪಾಲಿನಲ್ಲಿ ಏನು ಜಗಳ ಇದೆ ಅದನ್ನು ಪರಸ್ಪರ ಸೌಹಾರ್ದಯುತವಾಗಿ ನಾವು ಮಾತುಕತೆ ಮೂಲಕ ಬಗೆಹರಿಸುತ್ತೇವೆ ಎನ್ನುವ ವಿಚಾರ ಪ್ರಸ್ತಾಪ ಮಾಡಿದ ಮಟ್ಟಿಗೆ ಇದೆ. ಇದೂ ಕೂಡ ದುಃಖದ ಸಂಗತಿ ಎಂದು ನಾನು ಇವತ್ತು ಸದನದಲ್ಲಿ ಹೇಳುತ್ತಿದ್ದೇನೆ. ಮಾನ್ಯ ಉಪಾಧ್ಯಕ್ಷರೆ, ರೈತರು ಎಂದರೆ ಯಾರು ನೀರಾವರಿ ಯೋಜನೆಯಿಂದ ನೀರಿನ ಉಪಯೋಗವನ್ನು ಪಡೆಯುತ್ತಿದ್ದಾರೋ ಅವರು ಮಾತ್ರ ರೈತರು ಎಂದು ಈ ಸರ್ಕಾರ ತಿಳಿದುಕೊಂಡಂತೆ ಕಾಣುತ್ತಿದೆ. ಯಾರ ಜಮೀನುಗಳಲ್ಲಿ ಯಾವಾಗಲೂ ಹಚ್ಚಹಸಿರಾಗಿ ಬೆಳೆಗಳು ಕಾಣಬರುತ್ತದೋ ಅವರುಗಳು ಮಾತ್ರ ರೈತರು ಎಂದುಕೊಂಡಂತೆ ಇದೆ. ಇವೊತ್ತು ಕೃಷ್ಣಾ ಮೇಲ್ದಂಡೆ ಯೋಜನೆಯ ಸಲುವಾಗಿ ಲಕ್ಷಾಂತರ ಎಕರೆಗಳ ಜಮೀನನ್ನು ರೈತರುಗಳು ಕಳೆದುಕೊಂಡು ಹೆಚ್ಚು ಕಡಿಮೆ ಒಂದು ಲಕ್ಷ ಕುಟುಂಬಗಳು ನಿರಾಶ್ರಿತರಾಗಿ ಮನೆ, ಮಠ ಮತ್ತು ಎಲ್ಲವನ್ನೂ ಆ ಕೃಷ್ಣೆಗೆ 'ಕೃಷ್ಣಾರ್ಪಣ' ಎಂದು ಹೇಳಿ ಬದುಕುವುದಕ್ಕೆ ಮುಂದೇನು ಮಾಡಬೇಕು ಎನ್ನುವಂಥ ಚಿಂತನೆಯಲ್ಲಿ ದಿನ ಕಳೆಯುತ್ತಿರುವಂಥ ಸಂದರ್ಭದಲ್ಲಿ ಈ ಸರ್ಕಾರ ಅಂಥ ಜನರಿಗಾಗಿ ಕಾರ್ಯಕ್ರಮ ಹಾಕಲು ಮುಂದೆ ಬರಬೇಕಾಗಿತ್ತು. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಈ ಬಗ್ಗೆ ಒಂದು ಅಂಶವನ್ನು ಸೇರಿಸಬೇಕಾಗಿತ್ತು. ಯಾವುದಾದರೂ ಒಂದು ಯೋಜನೆಯಿಂದ ಇಂಥ ಜನರಿಗೆ ಉದ್ಯೋಗವನ್ನು ಕೊಡುತ್ತೇವೆ ಮತ್ತು ಆ ಮೂಲಕ ಅವರಿಗೆ ಸುರಕ್ಷೆಯನ್ನು ನೀಡುತ್ತೇವೆಂದು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಹೇಳಬೇಕಾಗಿತ್ತು. ನೀರಾವರಿ ಯೋಜನೆಯಿಂದ ಹಲವಾರು ಕುಟುಂಬಗಳು ತಮ್ಮ ಭೂಮಿಯನ್ನು ಕಳೆದುಕೊಂಡಿದ್ದಾರೆ. ಇವರ ಬಗ್ಗೆ ಸುದೀರ್ಘವಾಗಿ ಚಿಂತನೆ ಮಾಡಬೇಕಾದ ಅನಿವಾರ್ಯತೆ ಇದೆ. ಇದು ಇಂಥದ್ದೇ ನೀರಾವರಿ ಯೋಜನೆಯೆಂದು ಹೇಳಲಾಗದು. ಅದು ಯಾವುದೇ ನೀರಾವರಿ ಯೋಜನೆ ಇರಬಹುದು. ಇಂಥ ನೀರಾವರಿ ಯೋಜನೆಗಳಿಂದ ಹಲವಾರು ಕುಟುಂಬಗಳು ಬಾಧಿತರಾಗಿ ತಮ್ಮ ಆಸ್ತಿಯನ್ನು ಕಳೆದುಕೊಂಡು ಇಂದು ನಿರ್ಗತಿಕರಾಗುತ್ತಿದ್ದಾರೆ. ಇಂಥವರ ಜೀವನಕ್ಕಾಗಿ ಸರ್ಕಾರ ಆಧಾರವನ್ನು ಕಲ್ಪಿಸಬೇಕು. ಇದರ ಬಗ್ಗೆ ಸದನದಲ್ಲಿ ದೀರ್ಘವಾಗಿ ಚರ್ಚೆಯಾಗಬೇಕೆಂದು ನಾನು ವಿನಂತಿ ಮಾಡುತ್ತಿದ್ದೇನೆ.

5.30 ಪಿ.ಎಂ.

ಇನ್ನು ವಿದ್ಯುಚ್ಛಕ್ತಿ ಉತ್ಪಾದನೆ ಬಗ್ಗೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಉಲ್ಲೇಖಿಸಿ ವಿದ್ಯುಚ್ಛಕ್ತಿ ವಲಯದಲ್ಲಿ ರಾಜ್ಯವು ತನ್ನದೇ ಸಂಸ್ಥೆಗಳ ಮೂಲಕ ವಿದ್ಯುತ್ ಉತ್ಪಾದನೆಯನ್ನು ಹೆಚ್ಚಿಸುವುದಲ್ಲದೇ ರಾಜ್ಯದಲ್ಲಿ ಬಂಡವಾಳ ಹೂಡಲು ಸ್ವತಂತ್ರ ವಿದ್ಯುತ್ ಉತ್ಪಾದಕರಿಗೂ ಕೂಡ ಪ್ರೋತ್ಸಾಹ ನೀಡುತ್ತೇವೆಂದು ಹೇಳಿದ್ದಾರೆ. 1989-90ರ ಸಾಲಿನಲ್ಲಿ ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ವಂದನಾ ನಿರ್ಣಯಕ್ಕೆ ಸಂಬಂಧಪಟ್ಟಂತೆ ಮಾಡಿದ ಭಾಷಣವನ್ನು ಈ ಸದನಕ್ಕೆ ನಾನು ನೆನಪಿಸಬಯಸುತ್ತೇನೆ. ಆಗಲೂ ಕೂಡ ಈ ಸರ್ಕಾರ ಇದೇ ರೀತಿಯ ಭರವಸೆಯನ್ನು ಕೊಟ್ಟಿತ್ತು. ಅನೇಕ ಕೋಟಿ ರೂ.ಗಳನ್ನು ಖರ್ಚು ಮಾಡಿ ವಿದೇಶಗಳವರ ಜೊತೆ ವಿದ್ಯುತ್ ಬಗ್ಗೆ ವ್ಯವಹಾರ ಮಾಡುತ್ತೇವೆ ಹಾಗೂ ಖಾಸಗಿ ಕಂಪನಿಗಳನ್ನು

ವಿದ್ಯುತ್ ಉತ್ಪಾದನೆ ವಿಚಾರದಲ್ಲಿ ಸ್ವಾಗತ ಮಾಡುತ್ತೇವೆ ಎಂದು ಅವೊತ್ತು ಹೇಳಿದ್ದರು. ಆದರೆ ಇವೊತ್ತಿಗೂ ಕೂಡ ಅಂದು ಆದ ವಿದೇಶ ಪ್ರವಾಸದ ವಿಚಾರ, ಬಂಡವಾಳ ಹೂಡಿಕೆದಾರರ ಜೊತೆ ಚರ್ಚೆಯಿಂದ ಆದ ಫಲಶ್ರುತಿಯ ಬಗ್ಗೆ ರಾಜ್ಯದ ಜನತೆಗೆ ಗೊತ್ತಾಗಲೇ ಇಲ್ಲ. ಒಂದಾದರೂ ಇದರಲ್ಲಿ ಕಾರ್ಯರೂಪಕ್ಕೆ ಬರಲೇ ಇಲ್ಲ. ಕಾರ್ಯಾರಂಭದ ಪ್ರಾರಂಭದ ಹಂತದಲ್ಲಿಯೂ ಕೂಡ ಯಾವುದಾದರೂ ಒಂದು ಯೋಜನೆ ವಿದ್ಯುತ್ ಉತ್ಪಾದನೆ ದಿಸೆಯಲ್ಲಿ ಇವೊತ್ತಿಗೂ ಕೂಡ ಪ್ರಾರಂಭವಾದ ಸೂಚನೆ ನಮಗೆ ಕಂಡುಬರುತ್ತಿಲ್ಲ. ಮಾನ್ಯ ರಾಜ್ಯಪಾಲರ ಭಾಷಣದ ಮೂಲಕ ಈ ದಿಸೆಯಲ್ಲಿ ಸರ್ಕಾರ ಮೊಟ್ಟಮೊದಲನೆಯದಾಗಿ ಎಡವಿದೆ ಎಂದು ಹೇಳಿದರೆ ತಪ್ಪಾಗಲಾರದು.

ಇನ್ನು ನಮ್ಮ ನಾಯಕರಾದ ಮಾನ್ಯ ಜಗದೀಶ್ ಶೆಟ್ಟರ್‌ರವರ ಸರ್ಕಾರದ ಆಡಳಿತ ಶಿಥಿಲತೆಯ ಬಗ್ಗೆ ಈಗಾಗಲೇ ಚೆನ್ನಾಗಿ ಮಾತನಾಡಿದರು. ಹಳ್ಳಿಯ ಗ್ರಾಮ ಕಛೇರಿಯಿಂದ ಹಿಡಿದು ವಿಧಾನಸೌಧದ ಕಛೇರಿಗಳವರೆಗೂ ಕೆಲಸದಲ್ಲಿ ಜಡತ್ವ ತುಂಬಿದೆ. ನಿರ್ದಿಷ್ಟ ಕೆಲಸಕ್ಕಾಗಿ ಜನರು ಅಲೆದಲೆದು ಸೋತು ಸುಣ್ಣವಾಗಿದ್ದಾರೆ. ಇದು ಕೊನೆಗಾಣಬೇಕಾಗಿದೆ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ನಾನೊಬ್ಬ ವೃತ್ತಿಯಲ್ಲಿ ವಕೀಲನಾಗಿದ್ದೇನೆ. ಈ ನಮ್ಮ ಉದ್ಯೋಗದಲ್ಲಿ ಸಾಮಾನ್ಯವಾಗಿ ಒಂದು ಮಾತನ್ನು ಕಕ್ಷಿದಾರನಿಗೆ ಹೇಳುತ್ತಿರುತ್ತಾರೆ. ಏನೆದರೆ ಗೆದ್ದವ ಸೋತ,ಸೋತವ ಸತ್ತ ಎಂದು ಹೇಳುತ್ತಿರುತ್ತಾರೆ. ಯಾವುದಾದರೂ ಒಬ್ಬ ವ್ಯಕ್ತಿ ವ್ಯಾಜ್ಯವನ್ನು ತೆಗೆದುಕೊಂಡು ನ್ಯಾಯಾಲಯಕ್ಕೆ ಹೋದರೆ ಆತ ಅಲೆದಾಡಿ ಅಲೆದಾಡಿ ಕೊನೆಗೆ ಗೆದ್ದರೂ ಕೂಡ ಅವನ ಪರಿಸ್ಥಿತಿ ಸೋತವನಿಗಿಂತ ಕಡೆಯದಾಗಿರುತ್ತದೆ. ಆದುದರಿಂದ ಗೆದ್ದರೂ ಕೂಡ ಆತ ಸೋತಂತೆ, ಆದರೆ ಇನ್ನು ಸೋತವನಂತು ನಿಶ್ಚಿತವಾಗಿ ಸತ್ತಂತೆಯೇ ಆದ ಪರಿಸ್ಥಿತಿ ಇಂದು ನಿರ್ಮಾಣವಾಗಿದೆ. ಅಂಥ ಒಂದು ಪತ್ರ ಇಂದು ರಾಜ್ಯದಾದ್ಯಂತ ಇರುವ ಪ್ರತಿಯೊಂದು ಕಛೇರಿಯಲ್ಲೂ ಕಾಣಬರುತ್ತಿರುವಂಥ ಸಂದರ್ಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಹಾಗೂ ಅವರ ಸಹೋದ್ಯೋಗಿಗಳು ಈ ದಿಸೆಯಲ್ಲಿ ಕಾರ್ಯಪ್ರವೃತ್ತರಾಗಬೇಕು. ಸಾಮಾನ್ಯ ಕಡತಗಳಿಗೆ ವಿಲೀವಾರಿಯಾಗುವುದಕ್ಕೆ ಕನಿಷ್ಟ 15 ದಿವಸಗಳು ಮಾತ್ರ ಸಾಕಾಗುತ್ತದೆ. ಈ 15 ದಿವಸಗಳೊಳಗೆ ಆ ಕಡತಗಳು ಯಾವುದೇ ರೀತಿಯಾಗಿ ವಿಲೀವಾರಿಯಾಗಲೇಬೇಕು ಎಂದು ಮಾಡಬೇಕು. ಈ ಕಡತದಿಂದ ಸರಿಯಾದಂಥ ತೀರ್ಮಾನಗಳು ಹೊರಬರಬೇಕು ಎನ್ನುವಂಥ ಆದೇಶವನ್ನು ಈ ಸರ್ಕಾರ ಕೊಡಬೇಕು. ಸರ್ಕಾರಿ ಕಛೇರಿಗಳಲ್ಲಿ ಹಾಗೂ ವಿಧಾನ ಸೌಧದ ವ್ಯವಸ್ಥೆಯಲ್ಲಿ ಲವಲವಿಕೆಯ ವಾತಾವರಣವನ್ನು ಈ ಸರ್ಕಾರ ಮೂಡಿಸಲಿ ಎನ್ನುವಂಥ ಹಾರೈಕೆಯನ್ನು ಈ ಸಂದರ್ಭದಲ್ಲಿ ನಾನು ಮಾಡುತ್ತಿದ್ದೇನೆ.

ಇನ್ನು ಸರ್ಕಾರ ನೇಕಾರರಿಗೆ ಕುರಿತಂತೆ ಯಾವುದೇ ಒಂದು ವಿಚಾರವನ್ನು ಈ ರಾಜ್ಯಪಾಲರ ಭಾಷಣದಲ್ಲಿ ಹೇಳಲಿಲ್ಲ. ಪ್ರತಿಯೊಬ್ಬ ವ್ಯಕ್ತಿಗೆ ಅನ್ನ ಮತ್ತು ಸಾರು ಬೇಕು

ಜೊತೆಗೆ ಬಟ್ಟೆ ಕೂಡ ಬೇಕೇಬೇಕು. ಮಾನ ಮುಚ್ಚಲು ನೇಕಾರ ಬೇಕು. ಯಾವ ರೀತಿಯಲ್ಲಿ ಹೊಟ್ಟೆ ಹೊರೆಯಲು ನಮಗೆ ಆಹಾರ ಬೇಕೋ ಅದೇ ರೀತಿಯಲ್ಲಿ ಮಾನ ಮುಚ್ಚಲು ಬಟ್ಟೆ ಬೇಕಾಗಿದೆ. ಇವೊತ್ತು ರಾಜ್ಯಾದ್ಯಂತ ಇರುವಂಥ ನೇಕಾರರ ಕುರಿತಂತೆ ಕಳೆದ ಹತ್ತಾರು ವರ್ಷಗಳಿಂದ ಪ್ರಾಮಾಣಿಕ ಚಿಂತನೆಯೇ ಆಗುತ್ತಿಲ್ಲ. ಹತ್ತಿ, ಉಣ್ಣೆ, ಮತ್ತು ರೇಷ್ಮೆ ನೇಕಾರರ ಸಹಕಾರ ಸಂಘಗಳಿಗೆ ಪೂರೈಸುವಂಥ ಕಚ್ಚಾ ವಸ್ತುಗಳು, ನೂಲು, ಬಣ್ಣ, ರಾಸಾಯನಿಕಗಳನ್ನು ಸುಲಭವಾಗಿ ಒದಗಿಸುವಂತಾಗಬೇಕು. ಬಟ್ಟೆಯ ಮೇಲಿನ ಸಬ್ಸಿಡಿಯು ಮಾರುಕಟ್ಟೆ ಅಭಿವೃದ್ಧಿ ಸಹಾಯದಿಂದ ಸಕಾಲದಲ್ಲಿ ಹಣ ಬಿಡುಗಡೆ ಆಗುವಂತೆ ಆಗಬೇಕಾಗಿದೆ. ಇದರ ಜೊತೆಗೆನೇಕಾರರ ವಸತಿ ಯೋಜನೆಯನ್ನು ಈ ಸರ್ಕಾರ ಮುಂಬರುವ ದಿನಗಳಲ್ಲಿ ಜಾರಿಗೆ ತರಬೇಕೆಂದು ನಾನು ಒತ್ತಾಯವನ್ನು ಮಾಡುತ್ತಿದ್ದೇನೆ.

ಇನ್ನು ಇತ್ತೀಚಿಗೆ ಅನೇಕ ವರ್ಷಗಳಿಂದ ಯುದ್ಧ ಎನ್ನುವುದನ್ನೇ ನಾವು ಮರೆತಿದ್ದೆವು. ಸೈನಿಕರು ಎಂದರೆ ಅವರೂ ಕೂಡ ಒಂದು ರೀತಿಯ ಉದ್ಯೋಗವನ್ನು ಮಾಡುವಂಥ ಜನರೆಂದು ಮಾತ್ರ ನಾವು ಅಂದುಕೊಂಡಿದ್ದೇವು. ಅಂಥ ಭಾವನೆಯೇ ಎಲ್ಲರಲ್ಲೂ ಇತ್ತು. ಆದರೆ ಇವೊತ್ತು ಆ ವಿಚಾರ ಹುಸಿಯಾಗುತ್ತಿದೆ. ರಾಷ್ಟ್ರದ ಗಡಿಗಳಲ್ಲಿ ಅನೇಕ ರೀತಿಯ ವಿಚಿದ್ರಕಾರಕ ಶಕ್ತಿಗಳು ತಲೆ ಎತ್ತಿ ಯಾವಾಗ ಬೇಕಾದರೂ ಯುದ್ಧ ತಲೆದೋರಬಹುದು ಎನ್ನುವ ಹಂತದಲ್ಲಿ ಅಂತರಾಷ್ಟ್ರೀಯ ಮಟ್ಟದಲ್ಲಿ ಕಂಡುಬರುತ್ತಿದೆ. ಇಂಥ ಸಂದರ್ಭದಲ್ಲಿ ಮಾಜಿ ಸೈನಿಕರ ಕಲ್ಯಾಣಕ್ಕಾಗಿ ಕಾರ್ಯಕ್ರಮವನ್ನು ಈ ಸರ್ಕಾರ ಹಾಕಿಕೊಳ್ಳಬೇಕು. ಈಗಾಗಲೇ ನಡೆದುಹೋದ ಕಾರ್ಗಿಲ್ ಯುದ್ಧದಲ್ಲಿ ನಮ್ಮ ರಾಜ್ಯದ ಹತ್ತಾರು ಜನರು ವೀರಮರಣವನ್ನು ಅಪ್ಪಿದ್ದಾರೆ. ಕೇಂದ್ರ ಸರ್ಕಾರ ಈಗಾಗಲೇ ಇಂಥ ಜನರ ಕುಟುಂಬಗಳ ಜೀವನ ನಿರ್ವಹಣೆಗಾಗಿ ಅನೇಕ ಯೋಜನೆಗಳನ್ನು ಜಾರಿ ಮಾಡಿದೆ. ಇದೇ ಸಂದರ್ಭದಲ್ಲಿ ರಾಜ್ಯ ಸರ್ಕಾರವೂ ಕೂಡ ಈ ದಿಸೆಯಲ್ಲಿ ಮುಂದೆ ಬರಬೇಕು. ಮಾಜಿ ಸೈನಿಕರಿಗಾಗಿ ರಾಜ್ಯ ಮಟ್ಟದಲ್ಲಿ ಈ ಒಂದು ನಿಗಮವೊಂದನ್ನು ಸ್ಥಾಪಿಸಿ ಅದರ ಮುಖಾಂತರ ಅವರ ಮಕ್ಕಳು ಹಾಗೂ ಕುಟುಂಬದ ಇನ್ನಿತರರು ಗೌರವದಿಂದ ಹಾಗೂ ನೆಮ್ಮದಿಯಿಂದ ಬದುಕಲು ನೆರವಾಗಬೇಕು. ಇಂಥ ವ್ಯವಸ್ಥೆಯನ್ನು ನಿಗಮದ ಮೂಲಕ ಅವರಿಗೆ ಕಲ್ಪಿಸಬೇಕೆಂದು ನಾನು ಒತ್ತಾಯವನ್ನು ಇಂದು ಮಾಡುತ್ತೇನೆ.

ಇನ್ನು ಈ ಸರ್ಕಾರ ಧಾರ್ಮಿಕ ಕೇಂದ್ರಗಳ ಬಗ್ಗೆ ಕೂಡ ಜಾಗ್ರತೆ ವಹಿಸಬೇಕಾದ ಅನಿವಾರ್ಯತೆ ಇಂದು ಒದಗಿಬಂದಿದೆ. ನಮ್ಮ ಸ್ನೇಹಿತರು ಬಸವನ ಬಾಗೇವಾಡಿಯ ಬಗ್ಗೆ ಪ್ರಸ್ತಾಪ ಮಾಡಿದರು. ನಾವು ಬಸವನಬಾಗೇವಾಡಿ ತಾಲ್ಲೂಕಿನಲ್ಲಿ ಜಗಜ್ಯೋತಿ ಬಸವೇಶ್ವರರನ್ನು ಏನು ಪೂಜಿಸುತ್ತಿದ್ದೇವೆ. ಇದು ಈ ವಿಶ್ವಕ್ಕೆ ಜಗಜ್ಯೋತಿಯಾಗಿ ಬೆಳಗುವಂತಹ ಮಹಾವ್ಯಕ್ತಿಯ ಜನ್ಮಸ್ಥಳವಾಗಿದೆ. ಇದು ಇವತ್ತಿನ ದಿವಸ ಯಾವ ಒಂದು ವ್ಯವಸ್ಥೆ ಇಲ್ಲದೆ ಸಂಪೂರ್ಣವಾಗಿ ಬಿದ್ದು ಹೋಗಿ ಇದರ ಅವಶೇಷಗಳು ಕೂಡ ಸಿಗದಂತಹ ಪರಿಸ್ಥಿತಿಯಲ್ಲಿ

ಇದೆ. ಅದನ್ನು ಸುಸ್ಥಿತಿಯಲ್ಲಿಡುವಂಥಾದ್ದಕ್ಕೆ ಪ್ರಯತ್ನಿಸಬೇಕು. ಈಗ ಕೂಡಲ ಸಂಗಮದ ಅಭಿವೃದ್ಧಿ ಪ್ರಾಧಿಕಾರ ರಚನೆಯನ್ನು ಹೇಗೆ ಮಾಡಲಾಗಿದೆಯೋ ಅದೇ ರೀತಿಯಲ್ಲಿ ಇದಕ್ಕೂ ಒಂದು ಪ್ರಾಧಿಕಾರವನ್ನು ಸರ್ಕಾರ ರಚನೆ ಮಾಡಬೇಕು; ಸಾಧ್ಯವಿದ್ದರೆ ಈ ಕೂಡಲ ಸಂಗಮ ಅಭಿವೃದ್ಧಿ ಪ್ರಾಧಿಕಾರದಲ್ಲಿ ಸೇರಿಸಿ ಈ ಬಸವೇಶ್ವರರ ಜನ್ಮಸ್ಥಳವನ್ನು ಬಸವೇಶ್ವರರ ಸ್ಮಾರಕ ಭವನವನ್ನಾಗಿ ಮಾಡಿ ಹಂತ ಹಂತವಾಗಿ ಈ ಕ್ಷೇತ್ರವನ್ನು ಪುನರ್‌ಜ್ಜೀವನಗೊಳ್ಳುವಂತೆ ಮಾಡಬೇಕೆಂದು ಸರ್ಕಾರದವರಿಗೆ ಈ ಮೂಲಕ ಒತ್ತಾಯ ಮಾಡುತ್ತೇನೆ. ತಾವು ಇಷ್ಟು ಹೊತ್ತು ಮಾತನಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ, ನಮಸ್ಕಾರ.

ಶ್ರೀ ಹಂಪನಗೌಡ ಬಾದರ್ಲಿ (ಸಿಂಧನೂರು):- ಮಾನ್ಯ ಉಪಾಧ್ಯಕ್ಷರೆ, ಈ ಸದನದಲ್ಲಿ ಬಹಳಷ್ಟು ಮಾನ್ಯ ಸದಸ್ಯರು ಈಗಾಗಲೇ ಮಾನ್ಯ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲೆ ಮಾತನಾಡಿದ್ದಾರೆ. ಇವತ್ತು ಹೊಸ ಸರ್ಕಾರ ರಚನೆಯಾದ ಮೇಲೆ ಪರಂಪರೆಯ ಅಡಿಯಲ್ಲಿ ಈ ರಾಜ್ಯಪಾಲರ ಭಾಷಣದಲ್ಲಿ ಸರ್ಕಾರ ಹೊಸ ನೀತಿಗಳ ಬಗ್ಗೆ ಅನೇಕ ವಿಚಾರಗಳನ್ನು ಪಟ್ಟಿ ಮಾಡಿ ಸದನದ ಮುಂದಿಟ್ಟಿದ್ದಾರೆ. ಇದರಲ್ಲಿ ಏನೂ ಹೊಸತನ ಕಾಣುತ್ತಾ ಇಲ್ಲ. ಯಾವುದೇ ಸರ್ಕಾರ ಹೊಸದಾಗಿ ರಚನೆಯಾದ ಮೇಲೆ ಅದು ಜನ ಸಾಮಾನ್ಯರಿಗೆ ಸ್ಪಂದಿಸುವಂತಹ ಅನೇಕ ಹೊಸ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವಂಥಾದ್ದು ಮೊದಲಿನಿಂದಲೂ ಪರಿಪಾಠವಾಗಿ ನಡೆದುಕೊಂಡು ಬಂದಿರುವಂತಹ ಸಂದರ್ಭವನ್ನು ನಾವು ಕಾಣುತ್ತಿದ್ದೇವೆ. ಆದರೆ ಈ ಪಟ್ಟಿಯಲ್ಲಿ ಹೊಸತನ ಏನು ನನಗೆ ಕಂಡು ಬರುತ್ತಾ ಇಲ್ಲ. ಇದರ ಜೊತೆಗೆ ಕರ್ನಾಟಕ ರಾಜ್ಯ ಸರ್ವಾಂಗೀಣ ಅಭಿವೃದ್ಧಿ ಪಥದಲ್ಲಿ ಸಾಗಬೇಕಾದರೆ ಮೊದಲನೆಯದಾಗಿ ಹಣಕಾಸಿನ ವಿಚಾರದ ಬಗ್ಗೆ ಈ ಸದನದಲ್ಲಿ ಸವಿಸ್ತಾರವಾದ ಪಟ್ಟಿಯನ್ನು ಕೊಟ್ಟಿದ್ದರೆ ಚೆನ್ನಾಗಿ ಇರುತ್ತಿತ್ತು. ಆದರೆ ಈ ನಿಟ್ಟಿನಲ್ಲಿ ಸರ್ಕಾರ ಈ ಯೋಜನೆಗಳಿಗೆ ಎಷ್ಟೆಷ್ಟು ಹಣವನ್ನು ಮಂಜೂರು ಮಾಡಿತ್ತೆನ್ನುವ ಬಗ್ಗೆ ನಾವು ಈ ಪಟ್ಟಿಯಲ್ಲಿ ಕಾಣುತ್ತಿಲ್ಲ. ನಮ್ಮ ರಾಯಚೂರು ಜಿಲ್ಲೆ ನೀರಾವರಿ ಪ್ರದೇಶವಾದರೂ ಕೂಡ ತುಂಗಭದ್ರಾ ಅಣೆಕಟ್ಟೆಯಡಿಯಲ್ಲಿ ಬರುವಂತಹ ನಾವುಗಳು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದೇವೆ. ಇವತ್ತು ನೀರಾವರಿಯಲ್ಲಿ ಬಹಳಷ್ಟು ಮುಂದುವರೆದಂತಹ ಗಂಗಾವತಿ ತಾಲ್ಲೂಕು ಇರಬಹುದು, ಸಿಂಧನೂರು ತಾಲ್ಲೂಕು, ಮಾನ್ವಿ ತಾಲ್ಲೂಕು, ಅಥವಾ ರಾಯಚೂರು ತಾಲ್ಲೂಕು ಪ್ರದೇಶವಿರಬಹುದು, ಅಲ್ಲಿರತಕ್ಕಂಥ ನೀರಾವರಿ ವ್ಯವಸ್ಥೆಯನ್ನು ಯಾವ ರೀತಿಯಾಗಿ ಅಭಿವೃದ್ಧಿ ಮಾಡಲಾಗಿದೆ, ಅದೇ ರೀತಿಯಲ್ಲಿ ಸಮಸ್ಯೆಗಳ ಸುರಿಮಳೆಯು ಕೂಡ ಇದೆ. ಇವತ್ತು ಇವು ಜೊತೆ ಜೊತೆಯಾಗಿ ಪ್ರಾರಂಭವಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಈ ಸಭೆಯಲ್ಲಿ ಮಾನ್ಯ ಲೋಕೋಪಯೋಗಿ ಇಲಾಖೆಯ ಸಚಿವರು ಇದ್ದಾರೆ, ಈ ಲೋಕೋಪಯೋಗಿ ಇಲಾಖೆಯ ರಾಜ್ಯ ಹೆದ್ದಾರಿಗಳು ಯಾವ ರೀತಿಯಾಗಿ ಇದೆ ಎಂದರೆ

ಇವತ್ತು ನಮ್ಮ ರಾಯಚೂರು ಜಿಲ್ಲೆಯಲ್ಲಿ ರಾಜ್ಯ ಹೆದ್ದಾರಿಗಳು ಮಾಯವಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಈ ರಸ್ತೆಗಳ ಅಭಿವೃದ್ಧಿ ಮಾಡುವಂತಹ ಕೆಲಸ ಆಗಬೇಕಾಗಿದೆ. ರಾಯಚೂರು, ಸಿಂಧನೂರು, ನರಗುಂದ, ಗುಲ್ಬರ್ಗಾ ಶ್ರೀರಂಗಪಟ್ಟಣ, ಈ ರಸ್ತೆಗಳು ಯಾವ ಪರಿಸ್ಥಿತಿಯಲ್ಲಿದೆ ಎಂದರೆ ಅಲ್ಲಿ ಗಾಡಿಗಳು ಓಡಾಡುವುದನ್ನು ನಾವು ನೋಡುತ್ತಿಲ್ಲ. ಇವತ್ತು ಆ ರಸ್ತೆಗಳು ಅಂತಹ ಪರಿಸ್ಥಿತಿಯಲ್ಲಿದೆ. ಅವು ನೀರಾವರಿ ಪ್ರದೇಶವಾಗಿ ಕಪ್ಪುಭೂಮಿಯಾಗಿರುವುದರಿಂದ ಈ ರಸ್ತೆಗಳು ಸಂಪೂರ್ಣವಾಗಿ ಹಾಳಾಗಿವೆ. ಈ ರಸ್ತೆಗಳನ್ನು ಅಭಿವೃದ್ಧಿ ಪಡಿಸುವುದರ ಜೊತೆಗೆ ಸಿಂಧನೂರು ಪಟ್ಟಣದ ವ್ಯಾಪ್ತಿಯಲ್ಲಿ ಈ ರಾಜ್ಯ ಹೆದ್ದಾರಿಗಳಿರುವುದರಿಂದ ಜನ ಸಾಮಾನ್ಯರು ಜೀವನ ನಡೆಸುವಂಥಾದ್ದಕ್ಕೆ ಬಹಳಷ್ಟು ತೊಂದರೆಯಾಗಿದೆ. ಆದುದರಿಂದ ಮಾನ್ಯ ಲೋಕೋಪಯೋಗಿ ಸಚಿವರು ಈ ರಸ್ತೆಗಳ ಬಗ್ಗೆ ತೀವ್ರವಾದಂತಹ ಗಮನಹರಿಸಿ ಇದನ್ನು ಅಭಿವೃದ್ಧಿಪಡಿಸುವಂತಹ ಕೆಲಸಮಾಡಬೇಕು. ಇದರ ಜೊತೆಗೆ ತುಂಗಭದ್ರಾ ಜಲಾಶಯದ ವ್ಯಾಪ್ತಿಯಲ್ಲಿ ಬರತಕ್ಕಂಥ ತುಂಗಭದ್ರಾ ಎಡದಿಂದ ನಾಲೆ ಸುಮಾರು ಆರು ಲಕ್ಷ ಎಕರೆ ನೀರಾವರಿ ಪ್ರದೇಶವಿದ್ದರೂ ಕೂಡ ವರ್ಷದಲ್ಲಿ ಎರಡು ಮೂರು ಸಲ ಇದು ಬಿರುಕು ಬಿಟ್ಟು ರೈತರಿಗೆ ನೂರಾರು ಕೋಟಿ ರೂಪಾಯಿಗಳ ನಷ್ಟವಾಗುವಂತಹ ಸಂದರ್ಭಗಳು ಇದೆ. ಕಳೆದ ಎಂಟು ದಿವಸಗಳ ಹಿಂದೆ ತುಂಗಭದ್ರಾ ಎಡದಿಂದ ನಾಲೆ ಪುನಃ ಬಿರುಕು ಬಿಟ್ಟು ರೈತರಿಗೆ ತೊಂದರೆಯಾದ ಉದಾಹರಣೆಯೂ ಇದೆ. ಆದುದರಿಂದ ಈ ತುಂಗಭದ್ರಾ ಎಡದಂಡೆ ನಾಲೆಯನ್ನು ಭದ್ರಗೊಳಿಸುವಂತಹ ಅವಶ್ಯಕತೆ ಬಹಳ ಇದೆ. ಹಿಂದೆ ನಮ್ಮ ಸರ್ಕಾರವಿದ್ದಂತಹ ಸಂದರ್ಭದಲ್ಲಿ ಹೊಸದಾಗಿ ಒಂದು ಯೋಜನೆಯನ್ನು ರೂಪಿಸಿ ಸುಮಾರು ಇಪ್ಪತ್ತು ಕೋಟಿ ರೂಪಾಯಿಗಳ ಅಂದಾಜಿನಲ್ಲಿ ಈ ಎಡದಂಡೆ ನಾಲೆಯನ್ನು ಅಭಿವೃದ್ಧಿಪಡಿಸುವಂತಹ ಕಾರ್ಯವನ್ನು ತೆಗೆದುಕೊಂಡಿದ್ದರು. ಈ ಕಾರ್ಯವನ್ನು ಮುಂದುವರೆಸಿ ಎಡದಂಡೆಯ ನಾಲೆಯ ನೀರನ್ನು ನಿಲ್ಲಿಸಿ ಆರು ತಿಂಗಳಲ್ಲಿ ಸಂಪೂರ್ಣವಾಗಿ ನೂರ ಅರವತ್ತು ಕೋಟಿ ರೂಪಾಯಿಗಳ ಹಣವನ್ನು ಖರ್ಚುಮಾಡಿ ಈ ನಾಲೆ ದುರಸ್ತಿ ಮಾಡುವಂತಹ ಕೆಲಸವಾಗಬೇಕು.

ಇನ್ನು ಶಿಕ್ಷಣ ಇಲಾಖೆಯ ಬಗ್ಗೆ ಹೇಳುವುದಾದರೆ ನನ್ನ ಕ್ಷೇತ್ರದಲ್ಲಿ 239 ಶಾಲೆಗಳ ಕಟ್ಟಡಕ್ಕೆ ಕಳೆದ ನಾಲ್ಕು ವರ್ಷಗಳಲ್ಲಿ ಮಂಜೂರು ಆಗಿದೆ. ಇದರಲ್ಲಿ 139 ಶಾಲೆಗಳ ಕಟ್ಟಡಗಳು ಪೂರ್ಣವಾಗಿದ್ದು, 100 ಶಾಲೆಗಳಿಗೆ ಇನ್ನು ಅನುಧಾನ ಬಿಡುಗಡೆಯಾಗಿಲ್ಲ. ಇನ್ನು ಅನೇಕ ಸಮಸ್ಯೆಗಳು ನಮ್ಮ ರಾಯಚೂರು ಜಿಲ್ಲೆ, ಸಿಂಧನೂರು ತಾಲ್ಲೂಕಿನಲ್ಲಿವೆ. ಈ ಎಲ್ಲಾ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಹಿಡಿಯುವಂತಹ ಪ್ರಯತ್ನ ಸರ್ಕಾರದಿಂದ ಆಗಬೇಕಾಗಿದೆ. ರಾಜ್ಯದಲ್ಲೂ ಕೂಡ ಅನೇಕ ವಿಚಾರಗಳಿಗೆ ಇಲಾಖೆಗಳಿಂದ ಅಭಿವೃದ್ಧಿಪಡಿಸುವಂತಹ ಕೆಲಸಗಳು ಆಗಬೇಕಾಗಿದೆ. ಆ ನಿಟ್ಟಿನಲ್ಲಿ ಜವಾಬ್ದಾರಿಯನ್ನು ತೆಗೆದುಕೊಳ್ಳುವಂಥಾದ್ದು ಸರ್ಕಾರದ ಮೇಲಿದೆ. ಆ ಕೆಲಸದ ಸರ್ಕಾರ ಉತ್ತಮವಾದಂತಹ

ರೀತಿಯಲ್ಲಿ ನಡೆಸಬೇಕು, ಇಲ್ಲದಿದ್ದರೆ ನಾವು ವಿರೋಧಪಕ್ಷದ ಸದಸ್ಯರಾಗಿ ತಾವು ಏನು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ವಿಷಯಗಳನ್ನು ಇಟ್ಟಿದ್ದೀರಿ, ಅದನ್ನು ವಿರೋಧಿಸಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಬಿ.ಎಸ್. ಪಾಟೀಲ್ (ರೋಣ):- ಮಾನ್ಯ ಉಪಾಧ್ಯಕ್ಷರೆ, ಇತ್ತೀಚೆಗೆ ನಡೆದಂತಹ ಚುನಾವಣೆಯಲ್ಲಿ ನಮ್ಮ ಜನತೆಯ ಆಶೋತ್ತರಗಳು ಏನಿವೆ, ಅದಕ್ಕೆ ನಮ್ಮ ಸರ್ಕಾರ ಸ್ಪಂದಿಸುತ್ತಿದೆ ಮತ್ತು ಮುಂದೆಯೂ ಸ್ಪಂದಿಸುತ್ತದೆನ್ನುವಂತಹ ವಿಚಾರವನ್ನು ಇವತ್ತು ಸನ್ಮಾನ್ಯ ರಾಜ್ಯಪಾಲರು ಕರ್ನಾಟಕ ರಾಜ್ಯದ ಜನತೆಗೆ ತಮ್ಮ ಭಾಷಣದ ಮುಖಾಂತರ ತಿಳಿಸಿದ್ದಾರೆ. ಅದಕ್ಕೆ ನಾನು ಮೊದಲನೆಯದಾಗಿ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಇವತ್ತು ವಿಶೇಷವಾಗಿ ಕರ್ನಾಟಕ ರಾಜ್ಯಕ್ಕೆ ಬೇಕಾದಂತಹ ನೀರಾವರಿ ಸೌಲಭ್ಯವಾಗಲಿ, ಹದಗೆಟ್ಟ ರಸ್ತೆಗಳ ಸುಧಾರಣೆಯಾಗಲಿ, ರೈತರಿಗೆ ಬೇಕಾದಂತಹ ಉತ್ತಮ ಬೀಜಗಳು, ಗೊಬ್ಬರಗಳನ್ನು ಪೂರೈಸುವುದರ ಜೊತೆಗೆ ವಿದ್ಯುಚ್ಛಕ್ತಿ ಬಗ್ಗೆ ಕೂಡ ಒಳ್ಳೆಯ ರೀತಿಯಲ್ಲಿ ಮುಂದೆ ಹೋಗುತ್ತದೆನ್ನುವಂತಹ ವಿಚಾರವನ್ನು ಪ್ರಸ್ತಾಪಿಸಿದ್ದಾರೆ. ಇಂತಹ ಒಂದು ಸಂದರ್ಭದಲ್ಲಿ ಇಡೀ ಕರ್ನಾಟಕ ರಾಜ್ಯದಲ್ಲೂ ಅದರಲ್ಲೂ ನಮ್ಮ ಭಾಗದಲ್ಲಿ ಕೆಲವೊಂದು ಯೋಜನೆಗಳು ಅನುಷ್ಠಾನಕ್ಕೆ ಬರುವಂಥದ್ದರ ಬಗ್ಗೆ ನಾನು ಬೆಳಕು ಚೆಲ್ಲುವಂತಹ ಪ್ರಯತ್ನ ಮಾಡುತ್ತೇನೆ. ಹಲವಾರು ವರ್ಷಗಳಿಂದ ವಿಶೇಷವಾಗಿ ಮಹದಾಯಿ ಯೋಜನೆಯ ಬಗ್ಗೆ ಕಳೆದ ಎರಡು ಸರ್ಕಾರಗಳು ಮಹದಾಯಿ ನದಿಗೆ ಅಣೆಕಟ್ಟನ್ನು ಕಟ್ಟಿ ಮಲಪ್ರಭಾ ನದಿ ನೀರನ್ನು ಕೊಡಿಸುವಂತಹ ಯೋಜನೆಗೆ 1992ನೇ ಇಸವಿಯಿಂದಲೂ ಪ್ರಯತ್ನ ನಡೆಸುತ್ತಿವೆ. ಇವತ್ತು ಈ ಯೋಜನೆ ಆರಂಭವಾದರೆ, ಮಲಪ್ರಭ ಅಣೆಕಟ್ಟು ಪ್ರದೇಶದಲ್ಲಿ ಬರುವ ಜಮೀನುಗಳಿಗೆ, ಅದರಲ್ಲು ವಿಶೇಷವಾಗಿ ನಮ್ಮ ರೋಣ ತಾಲ್ಲೂಕಿಗೆ ನೀರಿನ ಸೌಲಭ್ಯ ದೊರಕುತ್ತದೆಂದು ಇವತ್ತಿನ ದಿವಸ ಹೇಳಬಯಸುತ್ತೇನೆ. ಇವತ್ತು ರೈತರ ಬಗ್ಗೆ ಹೆಚ್ಚಿನ ಕಾಳಜಿಯನ್ನು ಗುರುತಿಸಿರುವ ಸರ್ಕಾರ ರೈತರಿಗೆ ಸಂಬಂಧಿಸಿದಂತೆ ಏನು ವಿಮಾ ಯೋಜನೆಯನ್ನು ತಂದಿದೆ ಅದನ್ನು ಸ್ವಲ್ಪ ವಿಶಾಲ ದೃಷ್ಟಿಯಲ್ಲಿ ನಡೆಸಿಕೊಂಡು ಹೋಗುವ ಪರಿಸ್ಥಿತಿಗೆ ಬರಬೇಕಾಗಿದೆ. ಇವತ್ತು ಬೆಳೆವಿಮಾ ಯೋಜನೆ ಸಂಬಂಧಿಸಿದಂತೆ ಹೇಳುವುದಾದರೆ ಇದು ಸಂಪೂರ್ಣವಾಗಿ ತಾಲ್ಲೂಕು ಘಟ್ಟದಲ್ಲಿ ಕೆಲಸ ಮಾಡುತ್ತದೆ. ಅದನ್ನು ಮಾರ್ಪಾಡು ಮಾಡಿ ಕನಿಷ್ಟಪಕ್ಷ ಒಂದು ಪಂಚಾಯತಿ ವ್ಯಾಪ್ತಿಗೆ ಬರುವ ಈ ಯೋಜನೆಯನ್ನು ಕೊಡಿಸುವಲ್ಲಿ ಸರ್ಕಾರ ಮುಂದೆ ಬರಬೇಕು. ಅದರ ಜೊತೆಗೆ ರೈತರಿಗೆ ಹಲವಾರು ಸೌಲಭ್ಯಗಳನ್ನು ಕೊಡುತ್ತೇವೆಂದು ಹೇಳುವಾಗ ಮುಖ್ಯವಾಗಿ ಗಮನಿಸಬೇಕಾದ ಅಂಶ, ರೈತರು ಬೆಳೆದ ಬೆಳೆಗೆ ಸರಿಯಾದ ಬೆಲೆಯನ್ನು ಕೊಡುವ ವ್ಯವಸ್ಥೆಗೆ ಸರ್ಕಾರ ಇವತ್ತು ಪ್ರಯತ್ನ ಮಾಡಬೇಕು. ನಾವು ಈ ವಿಮಾ ಯೋಜನೆಯನ್ನು ಅಳವಡಿಸುವಾಗ, ಅನೇಕ ತೊಂದರೆಗಳನ್ನು ಅನುಭವಿಸುತ್ತಿದ್ದೇವೆ. ಮುಖ್ಯವಾಗಿ ಈ ಅಣೆವಾರಿ ಪದ್ಧತಿ ಬಹಳ ಹಿಂದಿನಿಂದ ಬಂದಂತ ವಿಚಾರ. ಇವತ್ತು

ಸರ್ಕಾರದವರು ಈ ಅಣೆವಾರಿ ಪದ್ಧತಿಯನ್ನು ಕೂಡ ಅಧ್ಯಯನ ಮಾಡಿ ಸರಿಪಡಿಸಿದರೆ ಎಲ್ಲಾ ರೈತರಿಗೆ ಪ್ರಯೋಜನವಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ.

ಇನ್ನು ವಿದ್ಯುಚ್ಛಕ್ತಿಯ ಬಗ್ಗೆ ಇವತ್ತು ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಆದರೆ ಇವತ್ತಿನ ಪರಿಸ್ಥಿತಿಯಲ್ಲಿ ನಿಜವಾಗಿಯೂ ಮಳೆಯನ್ನು ಅವಲಂಬಿಸಿರುವ ನಮ್ಮ ಭಾಗದಲ್ಲಿರುವ ಬಯಲುಸೀಮೆಯ ರೈತರು ತಮ್ಮ ಹೊಲಗಳಲ್ಲಿ ಕೊಳವೆಬಾವಿಗಳನ್ನು ಜೋಡಿಸಿ ನೀರಾವರಿ ಮಾಡಬೇಕೆನ್ನುವ ಉದ್ದೇಶದಲ್ಲಿದ್ದಾಗ ಅಂತಹವರಿಗೆ ವಿದ್ಯುತ್ ಸರಬರಾಜಿನಲ್ಲಿ ಹಲವಾರು ಅಡೆತಡೆಗಳಿವೆ. ಇವತ್ತು ಯಾವೊಬ್ಬ ಬಡ ರೈತ ಕೊಳವೆಬಾವಿಯನ್ನು ಹಾಕಿ ವಿದ್ಯುತ್ ಸಂಪರ್ಕವನ್ನು ತೆಗೆದುಕೊಳ್ಳಬೇಕಾರೆ ಅವನಿಗೆ ವಿದ್ಯುಚ್ಛಕ್ತಿ ದೊರಕುವುದಿಲ್ಲ. ಅವರು ಕನಿಷ್ಟ ಪಕ್ಷ ಹತ್ತು ಸಾವಿರ ಕೊಡಬೇಕು, ಮತ್ತು ಅವರ ಹೊಲಕ್ಕೆ ವಿದ್ಯುತ್ ಸಂಪರ್ಕ ಪಡೆಯಲು ಎಷ್ಟು ಕಂಬಗಳು ಬೇಕಾಗುತ್ತವೆಯೋ ಅದಕ್ಕೆ ತಗಲುವ ವೆಚ್ಚವನ್ನು ತುಂಬಿದರೆ ಮಾತ್ರ ವಿದ್ಯುತ್ ಸಂಪರ್ಕ ಕೊಡುವ ವಿಚಾರ ನಮ್ಮ ವಿದ್ಯುಚ್ಛಕ್ತಿ ಮಂಡಳಿಯಲ್ಲಿದೆ. ಅದನ್ನು ಮಾರ್ಪಾಡು ಮಾಡಿ ಯಾರು ಆದ್ಯತೆ ಮೇಲೆಗೆ ಕೊಳವೆಬಾವಿಗಳನ್ನು ತೋಡುತ್ತಾರೊ ಅವರಿಗೆ ವಿದ್ಯುತ್ ಸರಬರಾಜು ಮಾಡುವ ಕ್ರಮವನ್ನು ಸರ್ಕಾರ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ನಾನು ಇಷ್ಟಪಡುತ್ತೇನೆ.

ಇನ್ನು ನಮ್ಮ ಭಾಗದ ರಸ್ತೆಗಳ ಬಗ್ಗೆ ಹೇಳುವುದಾದರೆ, ಈಗಾಗಲೇ ನಮ್ಮ ಮಾನ್ಯ ಲೋಕೋಪಯೋಗಿ ಇಲಾಖಾ ಮಂತ್ರಿಗಳು ಈ ಬಗ್ಗೆ ತೀವ್ರವಾದ ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಇವತ್ತು ನಮ್ಮ ಪಾಲಾಬಾದಾಮಿಯಲ್ಲಿರುವ ರಾಜ್ಯ ಹೆದ್ದಾರಿ ಏನಿದೆ. ನರಗುಂದ-ಸಿಂಧನೂರು ರಸ್ತೆ ಏನಿದೆ ಇವು ಸಂಪೂರ್ಣವಾಗಿ ಹದಗೆಟ್ಟ ರಸ್ತೆಗಳಾಗಿವೆ. ಅವುಗಳನ್ನು ಕೂಡ ಗಣನೆಗೆ ತೆಗೆದುಕೊಂಡು ದುರಸ್ಥಿ ಮಾಡುವ ಕೆಲಸ ಮಾಡಿಸಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತಾ ಮತ್ತೊಮ್ಮೆ ಮಾನ್ಯ ರಾಜ್ಯಪಾಲರ ಭಾಷಣಕ್ಕೆ ವಂದನೆಗಳನ್ನು ಸಲ್ಲಿಸಿ ನನಗೆ ಎರಡು ಮಾತನಾಡಲು ಅವಕಾಶ ಮಾಡಿಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು:- ಈಗ ಸದನವನ್ನು ಮುಂದೂಡಲಾಗಿದೆ, ಮತ್ತೆ ನಾಳೆ ಬೆಳಿಗ್ಗೆ 10.00 ಗಂಟೆಗೆ ಸಮಾವೇಶಗೊಳ್ಳುತ್ತದೆ.

(ಸದನವು ಸಂಜೆ 5 ಗಂಟೆ 55 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ: 12-11-99ರ ಶುಕ್ರವಾರ ಬೆಳಿಗ್ಗೆ 10.00 ಗಂಟೆಗೆ ಸೇರಲು ನಿಶ್ಚಯಿಸಿತು)

---

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)